ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



Blog: janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 26 ಜೂನ್ 26, 2011 ರೂ. 5/- ಪುಟ 16



ಬಡವರಿಗೆ ನೆರವಾಗುವುದೇ BPL ಗಣತಿ?

ಬಡತನದ ರೇಖೆಯು ಕೆಳಗಿರುವವರನ್ನುಹೊರಗಿಡಲೆಂದೇ ಹೊಸ ಮಾನದಂಡವನ್ನು ರೂಪಿಸಲಾಗಿದೆ ಎನ್ನಿಸುತ್ತಿದೆ ಕಡುಬಡತನ ಸಂಕೇತಿಸುವ......

8–9

Reliance Industries Limited

ರಿಲೆಯನ್ಸ್ : ತೈಲ-ಅನಿಲಗಳ ಬೃಹತ್ ಹಗರಣ

ರೇಷ್ಮೆ ಬೆಳೆಗೆ ಇಲ್ಲವಾದ ಬೆಂಬಲ ಬೆಲೆ ರೈತರ ಆಕ್ರೋಶ

ಆಕ್ರೋಶ ಮುಗಿಲುಮುಟ್ಟಿತು. ಮನವಿ ಸ್ವೀಕರಿಸಲು ಬಂದ ಬಚ್ಚೇಗೌಡರ ಮೇಲೆ.....

5



ನಾಗರಾಳ : ದಲಿತರ ಮೇಲೇಕೆ ಈ ಪರಿಯ ಹಲ್ಲೆ ?

11

ನಾಗರಾಳಕ್ಕೆ ಪುನಃ ಹೋಗಲು ಜೀವ ಭಯವಿದ್ದುದರಿಂದ ಶಾಂತಾಬಾಯಿ ಮಸ್ಕಿ....

'ತಲೆಬುರುಡೆ ಕೊಡಿಸಿ... ಆ ತಲೆ ಬುರುಡೆಗಳು'

ಸಾಕ್ಷಿ ಹೇಳಲು ಕಟಕಟೆಯಲ್ಲಿ ನಿಂತಿದ್ದವ ಕೇಳುತ್ತಿದ್ದ 'ತಲೆಬುರುಡೆ ಕೊಡಿಸಿ ಆ.....'

2



ಕಾಂಗ್ರೆಸ್ : ಪಾದ ಎತ್ತ? ಎತ್ತ ಚಿತ್ತ ?

3

ಜನಶಕ್ತಿ
ಕನ್ನಡ ವಾರಪತ್ರಿಕೆ



ತಲೆ ಬುರುಡೇ ಕೊಡಿಸಿ... ಆ ನಲವತ್ತು ತಲೆಬುರುಡೆ...

ಅಂತರ್ರಾಷ್ಟ್ರೀಯ ನ್ಯಾಯಾಲಯದ ಕಟಕಟೆಯಲ್ಲಿ ನಮೀಬಿಯನ್ನರ ಕಿರಿಕ್ಕು

ಆರ್.ರಾಮಕೃಷ್ಣ

ಛೇ! ನಾನೇಕೆ ಅಂಥಾ ದಡ್ಡ ಕೆಲಸ ಮಾಡಿದೆ ?

ಕೆಲವೊಮ್ಮೆ ಒಂದು ಕ್ಷಣದ ಅಚಾತುರ್ಯ, ಒಂದು ಘಳಿಗೆಯ ನಿರ್ಲಕ್ಷ್ಯ, ಹೇಳಲಾಗದ ತಾಳಲಾಗದ ಹಳಹಳಿಕೆಯ ಅಧ್ಯಾಯವೊಂದಕ್ಕೆ ಮುನ್ನುಡಿ ಬರೆದು ಬಿಟ್ಟಿರುತ್ತದೆ. ಕರ್ವಾಲೋ ಕಾದಂಬರಿಯ ಕರಿಯ ಮರ ಹತ್ತಿ ಮೇಲೆ ಹೋಗಿ ಆ ಹಾರುವ ಓತಿಯ ಬಾಲವನ್ನು ಹಿಡಿದು ಕೊಂಡೂ, ಅದು ಕೈ ಜಾರಿ ತಪ್ಪಿಸಿಕೊಂಡೇ ಹೋಯಿತಲ್ಲ. ಜೀವ ವಿಕಾಸದ ವೈನವಿರೇಳಿಸುವ ಮಹಾಕಥನವೊಂದರ ಕೊಂಡಿಯಾಗಬಹುದಾದ ಆ ಹಾರುವ ಓತಿ ಕೊನೆಗೂ ಕೈ ಜಾರಿಕೊಂಡು ಹೋಗೇ ಬಿಟ್ಟಿತಲ್ಲ. ಆಗ ಆದ ನಿರಾಶೆಯ ಹಾಗೆ ಇದು.


ನಾವು ಹೊರಟಿದ್ದದ್ದು "17 ನೇ ವಿಶ್ವ ಸಾಮ್ರಾಜ್ಯಶಾಹಿ ವಿರೋಧಿ ವಿದ್ಯಾರ್ಥಿ-ಯುವಜನೋತ್ಸವ'ಕ್ಕೆ. ಎಡಪಂಥೀಯ ಚಳುವಳಿಯ ಹಿನ್ನೆಲೆಯವರಿಗೆ "ಸಾಮ್ರಾಜ್ಯಶಾಹಿ ಆಕ್ರಮಣ-ಕ್ರೌರ್ಯ', "ಬಂಡವಾಳಶಾಹಿ-ಶೋಷಣೆ' ಅಂತ ಪದಗಳು ಪರಿಚಿತವೇ.

ಆದರೆ ನಮ್ಮ ಸಮಾಜದಲ್ಲಿ ಎಷ್ಟೋ ಉದಾರವಾದಿ, ಪ್ರಗತಿಪರ ಅಂದು ಕೊಳ್ಳುವವರಿಗೂ ಇಂತಹ ಪದಗಳನ್ನು ಕೇಳಿದರೆ ಒಂಥರಾ ಅಲರ್ಜಿ. ಇನ್ನು ಕೆಲವರಿಗೆ ಇಂಥಾ ಮಾತನಾಡುವವರು ಗೇಲಿಯ, ಅಪಹಾಸ್ಯದ ವಸ್ತು. ಕೆಲವರು ಅಗತ್ಯ ಇರುವ ಕಡೆ ಮತ್ತು ಇಲ್ಲದ ಕಡೆ.. ಎಲ್ಲಾ ಕಡೆ ಸಾಮ್ರಾಜ್ಯಶಾಹಿ, ಬಂಡವಾಳಶಾಹಿ.... ಅಂತ ಸಿಕ್ಕ ಸಿಕ್ಕಂತೆ ಅಗ್ಗವಾಗಿ ಈ ಪದಪುಂಜಗಳನ್ನು ಬಳಸುವುದರಿಂದ ಇಂತಹ ಅಲರ್ಜಿ ಬಂದಿರಲೂ ಸಾಕು. ಆದರೆ ವಿಷಯ ಅಷ್ಟೆ ಅಲ್ಲ. ವಿಚಾರ, ವಿದ್ಯಮಾನಗಳ ಆಳಕ್ಕೆ ಹೋಗಲು ಸಿದ್ಧವಿಲ್ಲದ, ವಾಸ್ತವತೆಯೊಂದಿಗೆ ಮುಖಾಮುಖಿಯಾಗಲು ತಯಾರಿಲ್ಲದ ಹೇಡಿಗಳ ಪಲಾಯನವಾದಿ ತಂತ್ರವೆಂದರೆ ಇಂತಹ ಪದಗಳ ಬಳಕೆಯನ್ನೇ ತಮಾಷೆ, ಗೇಲಿ ಮಾಡುವುದು. ಈ ಪ್ರವೃತ್ತಿ ನಮ್ಮ ಸುತ್ತ ಮುತ್ತ ಸಾಕಷ್ಟು ಹಬ್ಬಿದೆ. ಹಾಡು ಹಗಲೇ, ಜನ ಜಾತ್ರೆಯ ಜಂಗುಳಿಯ ಎದುರಲ್ಲಿ ನಡೆದ ಹೀನಾಯ, ನಿರ್ಲಜ್ಜ ಕಗ್ಗೊಲೆಯನ್ನು 'ಕೊಲೆ' ಅಂತ ಕರೆಯುವುದಕ್ಕೂ ನಮ್ಮ ಬಳಿ ನಿಖರ, ನಿರ್ದಿಷ್ಟ ಸಾಕ್ಷಿ ಆಧಾರಗಳ ಕಂತೆಗಳನ್ನಿಟ್ಟುಕೊಂಡೆ ಮಾತನಾಡಬೇಕಾದ ಪರಿಸ್ಥಿತಿ ಇಲ್ಲಿ.

ಅಂತಹ ಜನಕ್ಕೆ ಸಾಮ್ರಾಜ್ಯಶಾಹಿ... ಬಂಡವಾಳಶಾಹಿ.... ಮುಂತಾಗಿ ಪದಗಳನ್ನು ಹೆಚ್ಚಾಗಿ ಬಳಸದೇ ನಾವು ಬದುಕುತ್ತಿರುವ ಸಮಾಜದ, ಜಗತ್ತಿನ ನಿಜವಾದ ಭೀಕರ ಮುಖದ ನಗ್ನ ರೂಪವನ್ನು ದರ್ಶನ ಮಾಡಿಸಬೇಕು. ನಾವು ದೊಡ್ಡ ದೊಡ್ಡ ಪದಪುಂಜಗಳ ಸಹಾಯವಿಲ್ಲದೇ ನಿರ್ದಿಷ್ಟ ಘಟನೆ, ಖಚಿತ ಮಾಹಿತಿ, ನಿರಾಕರಿಸಲಾಗದ ದಟ್ಟಗಟ್ಟಿ ಸಾಕ್ಷ್ಯಗಳನ್ನು ಮುಂದಿಟ್ಟು ಅವರ ಮುಖಕ್ಕೆ ಗುದ್ದಿದಂತೆ ಇದೇನೆಂದು ಅವರನ್ನೇ ಕೇಳಬೇಕೆಂದು ಕೊಂಡಿದ್ದೆ ನಾನು.

ಒಂದು ಅಚಾತುರ್ಯ ಆಗಿ ಹೋಗಿತ್ತು. ಡಿಸೆಂಬರ್ 13, 2010 ರಂದು ದಕ್ಷಿಣ ಆಫ್ರಿಕದಲ್ಲಿ ಆರಂಭವಾಗಲಿದ್ದ ಅಂತರಾಷ್ಟ್ರೀಯ ವಿದ್ಯಾರ್ಥಿ-ಯುವಜನೋತ್ಸವಕ್ಕೆ ಹೋಗುವ ಮಾರ್ಗದಲ್ಲಿ ನಾವು ಡಿಸೆಂಬರ್ 11 ರಂದು ಮುಂಬೈನ ಅಂಧೇರಿ ಪ್ರದೇಶದ ಡಿವೈಎಫ್ಐ-ಸಿಐಟಿಯು ಕಛೇರಿಯಲ್ಲಿದ್ದೆವು. ಹೀಗೇ ಪೇಪರ್ ಓದುತ್ತಾ ಇದ್ದಾಗ ಆ ಸುದ್ದಿ ಕಣ್ಣಿಗೆ ಬಿದ್ದಿತ್ತು.

ನಾನು ಆ ಪತ್ರಿಕೆಯನ್ನು ನನಗೆ ಬೇಕೆಂದು ಕೇಳಿದ್ದರೆ ಅವರು ಸಂತೋಷವಾಗಿಯೇ ಕೊಡುತ್ತಿದ್ದರು. ಆದರೆ ನಾನದನ್ನು ಕೇಳಲಿಲ್ಲ. ಆ ಸುದ್ದಿಯ ತುಣುಕನ್ನು ಜೆರಾಕ್ಸ್ ಆದರೂ ಮಾಡಿಕೊಳ್ಳಬಹುದಿತ್ತು. ಅಥವಾ ಪೆನ್ನು ತೆಗೆದುಕೊಂಡು ಸುದ್ದಿಯ ನಿರ್ದಿಷ್ಟ ವಿವರಗಳನ್ನು ನೋಟ್ ಅದರೂ ಮಾಡಿಕೊಳ್ಳಬಹುದಿತ್ತು. ಆ ಸುದ್ದಿಯನ್ನು '...ಹೇಗೂ ಇಂಟರ್ ನೆಟ್‌ನಲ್ಲಿ ನೋಡಿಕೊಳ್ಳ ಬಹುದಲ್ಲ ಬಿಡು...' ಅನ್ನುವ ಒಂದು ಸಣ್ಣ ತಾತ್ಸಾರ ನಿಜಕ್ಕೂ ಅನಾಹುತ ಮಾಡಿತ್ತು.


ಸಾಮ್ರಾಜ್ಯಶಾಹಿ ವಿರೋಧಿ ನ್ಯಾಯಾಲಯ

ಯುರೋಪ್‌ನ ನಾಗಾಲೋಟದ ಅಭಿವೃದ್ಧಿ ಸಾಧನೆ ಆಗಿದ್ದು ಹೇಗೆ?

ನಮೀಬಿಯಾ ದೇಶ



ಆ ಸುದ್ದಿ ಆ ಪತ್ರಿಕೆಯ ಹತ್ತನೆಯದ್ದೋ, ಅಥವಾ ಹನ್ನೆರಡನೆಯದ್ದೋ ಪುಟದಲ್ಲಿ ಮೇಲ್ಭಾಗದಲ್ಲೆ ಇತ್ತು. ಕನಿಷ್ಟ ನಾಲ್ಕು ಕಾಲಂಗಳಷ್ಟು ಅಗಲ ಹರಡಿಕೊಂಡಿದ್ದ ದೊಡ್ಡ ಸುದ್ದಿ ಅದು. ಆತ ಯೂರೋಪಿನ ದೊಡ್ಡ ಅರ್ಥಶಾಸ್ತ್ರಜ್ಞನೋ, ಅಭಿವೃದ್ಧಿ ಚಿಂತಕನೋ ಏನೋ ಇರಬಹುದು. ಆತ ಹೇಳಿದ್ದ... "ಇವತ್ತು ಯೂರೋಪ್‌ನ ದೇಶಗಳು ಇಷ್ಟು ದೊಡ್ಡ ಅಭಿವೃದ್ಧಿಯ ನಾಗಾಲೋಟವನ್ನು ಸಾಧಿಸಿರುವುದು ಹೇಗೆ? ಯೂರೋಪಿನ ದೇಶಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಪ್ರಬುದ್ಧವಾಗಿ ಅರಳಿ ನಿಂತಿದೆ. ಹಾಗೆ ಅರಳಿ ನಿಂತ ಪ್ರಜಾಪ್ರಭುತ್ವದ ಬಲದಿಂದಾಗಿ ಮಾತ್ರವೇ ಈ ಪರಿಯ ಅಭಿವೃದ್ಧಿ ಸಾಧಿಸಲು ಸಾಧ್ಯವಾಗಿದೆ...." ಇನ್ನು ಹೀಗೆ 'ಅಭಿವೃದ್ಧಿ ಮೀಮಾಂಸೆ' ಅಡೆತಡೆ ಇಲ್ಲದೇ ಅಲ್ಲಿ ಸುಲಲಿತವಾಗಿ ಹರಿದಿತ್ತು. ಇದೇ ಮಾತು, ವಾದಗಳನ್ನು ಸ್ವಲ್ಪ ಇನ್ನಷ್ಟು ವಿಸ್ತರಿಸಿದರೆ -ಆಫ್ರಿಕ ಖಂಡದ ದೇಶಗಳು, ಏಷ್ಯಾ ಖಂಡದ ದೇಶಗಳು, ಲ್ಯಾಟಿನ್ ಅಮೆರಿಕದ ದೇಶಗಳು ಯಾಕೆ ಅಭಿವೃದ್ಧಿ ಸಾಧಿಸಲು ಸಾಧ್ಯವಾಗಿಲ್ಲ? ಯಾಕೆ ಅವು ಹಿಂದುಳಿದಿವೆ? ಯಾಕೆಂದರೆ ಆ ದೇಶಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಎಂಬುದು ಸರಿಯಾಗಿ ಅರಳಿಲ್ಲ..... ಪ್ರಬುದ್ಧತೆ ಸಾಧಿಸಲಿಲ್ಲ ಅಲ್ಲವೇ ?

ಅದು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆ ಅಂತಲೇ ನೆನಪು. ಬಾರತಕ್ಕೆ ಮರಳಿ ಬಂದ ಮೇಲೆ ಅಂತರ್ಜಾಲದಲ್ಲಿ ಎಷ್ಟು ಜಾಲಾಡಿದರೂ ಆ ಸುದ್ದಿ ಸಿಗುತ್ತಿಲ್ಲ. (ಪತ್ರಿಕೆಯ ಅಂತರ್ಜಾಲ ಆವೃತ್ತಿ ನಾನು ಅಂದುಕೊಂಡಂತೆ ಇಲ್ಲವೇ ಇಲ್ಲ.) ಸಿಐಟಿಯು ಸಂಗಾತಿ ಕಾಂಬ್ಳೆಯವರಿಗೆ ಪೋನ್ ಮಾಡಿ ತರಿಸಿಕೊಂಡ ಆ ಸುಮಾರಿನ ದಿನದ ಪತ್ರಿಕೆಗಳಲ್ಲೂ ಆ ಸುದ್ದಿ ಸಿಗುತ್ತಿಲ್ಲ. ಇಂಥದ್ದೊಂದು ಯುರೋಪಿನ ಅಮೋಘ 'ಅಭಿವೃದ್ಧಿ ಸಿದ್ಧಾಂತ'ದ ನಿರ್ದಿಷ್ಟ ಉದಾಹರಣೆ ಸಿಕ್ಕಿದ್ದೆ ಅದನ್ನ ಗಪ್ ಅಂತ ಅದನ್ನು ಹಿಡಿದು ಹಾಕಿಕೊಳ್ಳಬೇಕಿತ್ತು. ಯಾಕೆಂದರೆ ಅದೊಂದು ಖಚಿತ, ಲಿಖಿತ ಸಾಕ್ಷಿಯಾಗಿತ್ತು. ಯಾರ ಮುಖಕ್ಕಾದರೂ 'ಗುದ್ದಿ ಇದರ ಅರ್ಥ ಏನೆಂದು ಈಗ ಹೇಳಿ' ಅಂತ ಕೇಳಲು ತಕ್ಕದ್ದಾಗಿತ್ತು.

ಅಂಥದ್ದೊಂದು ಸುದ್ದಿಯ ತುಣುಕು ಹಿಡಿದು ಆಫ್ರಿಕದ ಆ ಉತ್ಸವದ ಆ ನ್ಯಾಯಾಲಯದ ಕಲಾಪದಲ್ಲಿ ಭಾಗವಹಿಸಿದ್ದಿದ್ದರೇ ಆಹಾ? ಎಂಥಾ ಅವಕಾಶ ತಪ್ಪಿ ಹೋಯಿತಲ್ಲ.....

ತಲೆ ಬುರುಡೆ ಕೊಡಿಸಿ...

ಆ ನಲವತ್ತು ತಲೆ ಬುರುಡೆ

ಅದು ಎತ್ತರದ ನಿಲುವಿನ ಆ ಕಪ್ಪು ಮನುಷ್ಯನ ಸರದಿ. ಆ ವ್ಯಕ್ತಿಯ ಹೆಸರು **ವೆಟರುಹೆ ಕನಂಡೋರೋಜಿ**. ಆವರ ದೇಶದ ಹೆಸರು ನಮೀಬಿಯಾ ಅಂತ. ನಮೀಬಿಯಾ ಆಫ್ರಿಕಾ ಖಂಡದ ಒಂದು ದೇಶ. ಭೂಪಟದಲ್ಲಿ ದಕ್ಷಿಣ ಆಫ್ರಿಕದ ಮೇಲೆ ಎಡಭಾಗದಲ್ಲಿ ಹರಡಿ ಕೊಂಡಿರುವ ಚದರ ಕಿ.ಮೀ. ವಿಸ್ತೀರ್ಣದ ಒಂದು ದೇಶ. ಕಟಕಟೆಯಲ್ಲಿ ಸಾಕ್ಷಿ ಹೇಳಲು ನಿಂತಿದ್ದವರು ಈ ದೇಶದ ರೀಜನಲ್ ಕೌನ್ಸಿಲರ್. ಅಂದರೆ ಚುನಾಯಿತ ಪ್ರತಿನಿಧಿ. ಅವರು 106 ವರ್ಷದ ಹಿಂದಿನ ಚರಿತ್ರೆಯ 'ಆಗು ಹೋಗು'ಗಳಿಗೆ ಈ ಅಂತರಾಷ್ಟ್ರೀಯ ಕೋರ್ಟಿನಲ್ಲಿ ಪರಿಹಾರ ಕೊಡಿಸಿರೆಂದು ಅಹವಾಲು ಹೊತ್ತು ನಿಂತಿದ್ದರು.

ಆವರ ಬೇಡಿಕೆಗಳಲ್ಲಿ ಒಂದು, ಜರ್ಮನಿಯ ವಿಶ್ವವಿದ್ಯಾಲಯದಲ್ಲಿ ಇಟ್ಟಿರುವ ನಮ್ಮ ಹಿರಿಯರ ಆ ನಲವತ್ತು ತಲೆ ಬುರುಡೆಗಳನ್ನು ನಮಗೆ ಕೊಡಿಸಿ ಅಂತ. ಜರ್ಮನ್ ವಿಶ್ವ ವಿದ್ಯಾಲಯದಲ್ಲಿ ಆಫ್ರಿಕ ಮೂಲದ ತಲೆ ಬುರುಡೆಗಳನ್ನು ಯಾಕೆ ಇಟ್ಟಿದ್ದಾರೆ?. ಅದನ್ನು ಈ ಮನುಷ್ಯನಿಗೆ ಯಾಕೆ ಕೊಡಿಸಬೇಕು !!

ಹೇಳಿ ಕೇಳಿ ಆಫ್ರಿಕಾ ಖಂಡ ಮನುಷ್ಯ ವಿಕಾಸ ಮೂಲ ನೆಲ, ಮೂಲ ನೆಲೆ. ಆದಿ ಮಾನವನ ಇಲ್ಲಿನ ಅಸಂಖ್ಯಾತ ವಾಸಸ್ಥಾನಗಳಲ್ಲಿ ಸಿಕ್ಕಿರುವ ತಲೆ ಬುರುಡೆಗಳು, ಅಸ್ಥಿ ಪಂಜರಗಳು ಜಗತ್ತಿನ ನಾನಾ ದೇಶಗಳ ತಜ್ಞರ ಆಸಕ್ತಿ ಕೆರಳಿಸಿವೆ. ಅಧ್ಯಯನಕ್ಕೆ ಒಳಗಾಗಿವೆ. ಪಳೆಯುಳಿಕೆ ತಜ್ಞರು, ಇತಿಹಾಸಕಾರರು, ವಿಜ್ಞಾನಿಗಳಿಗೆ ಈ ತಲೆ ಬುರುಡೆಗಳೇನೋ ತುಂಬಾ ಅಮೂಲ್ಯವಾದ ಮಾಹಿತಿಗಳ ಕಣಜವೇ.

ಉಹುಂ... ಇಲ್ಲವೇ ಇಲ್ಲ. ನೆಂದರ್ತಾಲ್ ....

ಪುಟ 10 ಕ್ಕೆ

ಸಂಪಾದಕೀಯ

ವಿಶ್ವಪರಂಪರೆ ಪಟ್ಟಿಗೆ ಪಶ್ಚಿಮಘಟ್ಟ: ಸಮಗ್ರ ಪರಿಶೀಲನೆ ಅಗತ್ಯ

ಪಶ್ಚಿಮ ಘಟ್ಟದ ಕಾಡನ್ನು ವಿಶ್ವಪರಂಪರೆಯ ಪಟ್ಟಿಗೆ ಸೇರಿಸಬೇಕೆಂಬ ಪ್ರಸ್ತಾಪದ ಸುತ್ತ ವಿವಾದಗಳು ತಲೆದೋರಿವೆ. ನಿತ್ಯಹರಿದ್ವರ್ಣದ, ಜೀವ ವೈವಿಧ್ಯತೆಗಳ ಈ ತಾಣವಿದೆಂದು ಯುನಿಸ್ಕೋ ವಿಶ್ವಪರಂಪರೆಯ ಪಟ್ಟಿಗೆ ಸೇರಿಸಲು ಬಯಸಿದೆ. ಈ ಹಿನ್ನೆಲೆಯಲ್ಲಿ ಕೆಲವು ತಿಂಗಳ ಹಿಂದೆ ಪರಿಶೀಲನಾ ಅಧ್ಯಯನ ತಂಡಗಳು ಬಂದು ಹೋಗಿದ್ದವು. ಅದರಂತೆ ಕರ್ನಾಟಕ 10 ಪ್ರದೇಶಗಳು ಈ ಪ್ರಸ್ತಾಪದ ವ್ಯಾಪ್ತಿಗೆ ಬರುತ್ತದೆ. ಕೊಡಗು ಜಿಲ್ಲೆಯಲ್ಲೇ ಐದು.

ಇಂತಹ ಪ್ರಸ್ತಾಪಕ್ಕೆ ಕರ್ನಾಟಕ ಸರ್ಕಾರ ಅತ್ಯಂತ ತೀವ್ರ ವಿರೋಧವನ್ನು ವ್ಯಕ್ತಪಡಿಸಿರುವುದು ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ. 'ಇದರಿಂದ ಆರ್ಥಿಕ ಲಾಭವಿಲ್ಲ. ಅಭಿವೃದ್ಧಿ ಕೆಲಸಗಳನ್ನು ಯುನಿಸ್ಕೋ ಪರವಾನಗಿ ಇಲ್ಲದೇ ಕೈಗೊಳ್ಳುವಂತಿಲ್ಲ. ಇದು ಈಸ್ಟ್ ಇಂಡಿಯಾ ಕಂಪನಿಯ ಕೈಗೆ ಕೊಟ್ಟಂತೆ ಎಂಬಿತ್ಯಾದಿ ಕಾರಣಗಳನ್ನು ಸರ್ಕಾರ ನೀಡಿದೆ. ಇದಕ್ಕೆದುರಾಗಿ 'ಭಾಗ್ಯವೇ ಬಾಗಿಲಿಗೆ ಬಂದಿರುವಾಗ ಅದನ್ನು ಎಡಕಾಲಲ್ಲಿ ಒದೆಯಬೇಕೇಕೇ?, ಎನ್ನುವಂತಹ ಚರ್ಚೆಗಳು ಎದ್ದಿವೆ.


ಆದರೆ ಒಂದಂತೂ ನಿಜ. ಯುನಿಸ್ಕೋ ಪಟ್ಟಿಗೆ ಇದು ಸೇರಿದರೆ ತಮ್ಮ ಎಂದಿನ ಬದುಕು ಹೇಗೆ? ವಿಧಿಸಬಹುದಾದ ಹಲವಾರು ನಿರ್ಬಂಧಗಳ ಅಡ್ಡಿಯಲ್ಲಿ ತಮ್ಮ ಅಲ್ಪ ಸ್ವಲ್ಪ ಕೃಷಿ, ಮುಖ್ಯವಾಗಿ ಕಾಡು–ಮೇಡುಗಳ ಉತ್ಪನ್ನವನ್ನೇ ನಂಬಿ ಜೀವಿಸುತ್ತಿರುವ ಆದಿವಾಸಿಗಳ ಜೀವನ ಅತಂತ್ರಗೊಳ್ಳಲಿದೆಯೆಂದು, ಅದರಿಂದಾಗಿ ಅವರ ಎತ್ತಂಗಡಿಯಾದರೆ ಪುನರ್ವಸತಿ ಹೇಗೆ? ಎಂಬಿತ್ಯಾದಿ ಪ್ರಶ್ನೆಗಳಿಂದ ವಿರೋಧವು ಜನರಿಂಧ ವ್ಯಕ್ತಗೊಂಡಿದ್ದು ಸಹಜವೇ ಆಗಿದೆ.

ಆದ್ದರಿಂದ ಪರಿಸರ, ಜೀವ ವೈವಿಧ್ಯತೆಯು ರಕ್ಷಣೆಯಾಗಬೇಕು ಎಂಬ ಕಾಳಜಿಯಿರುವಾಗಲೇ ಅಲ್ಲಿನ ಕಾಡನ್ನು ಆಶ್ರಯಿಸಿರುವ ಕೃಷಿಗಳು, ಆದಿವಾಸಿ–ಬುಡಕಟ್ಟು ಜನಾಂಗಗಳ ಬದುಕಿನ ರಕ್ಷಣೆಯೂ ಅಷ್ಟೇ ಮುಖ್ಯವಾಗುತ್ತದೆ. ವಿಶ್ವಪರಂಪರೆಯ ಪಟ್ಟಿಗೆ ಸೇರಿಸಿದಾಕ್ಷಣ ಅಲ್ಲಿರುವ ಜನರನ್ನೆಲ್ಲಾ ಕಾಡಿನಿಂದ ಹೊರದೂಡಬೇಕೆಂಬ ವಾದದಲ್ಲಿ ಅರ್ಥವಿಲ್ಲ. ಹಾಗೆ ನೋಡಿದರೆ ಕಾಡನ್ನು ಕಾಪಾಡುವವರೇ ಆದಿವಾಸಿಗಳು. 'ನಾಗರೀಕ ಜಗತ್ತಿನ' ಖದೀಮರೇ ಬಹುತೇಕ ಕಾಡಿನ ಸಂಪತ್ತನ್ನೆಲ್ಲಾ ಮನಸೋ ಇಚ್ಛೆ ಲೂಟಿ ಮಾಡುವುದು. ಇದರಿಂದಾಗಿ ಬಹುತೇಕ ಕಾಡು ಖಾಲಿಯಾಗಿರುವುದು. ವನ್ಯ ಜೀವಿಗಳು ಆಹಾರಕ್ಕೂ ಪರದಾಡುವುದು ಇಂತಹ ಕೃತ್ಯಗಳಿಂದಲೇ. ಇದಕ್ಕೆ ಕಾಡನ್ನೇ ಬೆಳೆಸದೇ ಅರಣ್ಯ ಖಾಲಿ ಮಾಡುವ ಅರಣ್ಯ ಇಲಾಖೆಯ ಕೊಡುಗೆಯೂ ಅನನ್ಯ.

ವಿಶ್ವಪರಂಪರೆಯ ಪಟ್ಟಿಗೆ ಇವನ್ನೆಲ್ಲಾ ತೆಗೆದುಕೊಳ್ಳುವ ಯುನೆಸ್ಕೋ ನಿರ್ಧಾರದಿಂದ ನಿಧಾನಕ್ಕೆ ಭಾರತದಂತಹ ಅಭಿವೃದ್ಧಿಶೀಲ ದೇಶದ ಮೇಲೆ ಅದು ಹಿಡಿತವನ್ನು ತೆಗೆದುಕೊಳ್ಳಲಿದೆ ಎಂಬ ಅಂಶವನ್ನು ತಳ್ಳಿಹಾಕಲಾಗದು. ಆದರೆ ಪ್ರಶ್ನೆ ಏಳುವುದು ಇಡೀ ನಾಡನ್ನೇ ಮನಸೋಇಚ್ಛೆ ಲೂಟಿ ಹೊಡೆಯುತ್ತಿರುವ ಬಿಜೆಪಿ ಸರ್ಕಾರ ಪಶ್ಚಿಮ ಘಟ್ಟದ ಬಗ್ಗೆ ತೋರಿಸಿರುವ ಪ್ರೀತಿ, ಕಾಳಜಿಯು ಖಂಡಿತಕ್ಕೂ ಅನುಮಾನ ಹುಟ್ಟಿಸುವಂತಹದ್ದು. ಇದರಲ್ಲಿ ರೆಸಾರ್ಟ್ ಮಾಲೀಕರು, ಮರಗಳ್ಳರು, ಗಣಿಗಾರರ ಹಿತ ಇಲ್ಲದಿಲ್ಲವೇ ಎಂಬ ಪ್ರಶ್ನೆ ಎದ್ದಿರುವುದು. ಬಹುತೇಕ ಈ ಬೆಟ್ಟ ಸರಣಿಯಲ್ಲಿ ಚಿನ್ನದ ಅದಿರು ಒಳಗೊಂಡು ಕಬ್ಬಿಣ ಇತ್ಯಾದಿ ಖನಿಜ ನಿಕ್ಷೇಪ ಶ್ರೀಮಂತವಾಗಿದೆ. ಮರ–ಮುಟ್ಟುಗಳು ಯಥೇಚ್ಛವಾಗಿವೆ. ಗಣಿಗಳ್ಳರು, ಕಾಡುಗಳ್ಳರಿಗೆ ಇದರ ಮೇಲೆ ಕಣ್ಣಿದೆ. ಆದರೆ ನಾಡು ಲೂಟಿ ಮಾಡುತ್ತಿರುವವರ ಈ ಸರ್ಕಾರ ಸಂರಕ್ಷಣೆಯ ಮಾತನಾಡುತ್ತಿರುವುದು ಲೂಟಿಯ ಅವಕಾಶ ತಮ್ಮಿಂದ ಕೈತಪ್ಪುವ ಬಗ್ಗೆ ಆತಂಕವೇ? ಹೀಗಾಗಿ ಇದು ಪ್ರಶ್ನಾರ್ಹವಾಗುತ್ತದೆ. ಆದ್ದರಿಂದ ಈ ದಿಶೆಯಲ್ಲಿ ಎದ್ದಿರುವ ಪ್ರಶ್ನೆಗಳಿಗೆ ರಾಜ್ಯ ಸರ್ಕಾರ ಉತ್ತರ ನೀಡಲೇಬೇಕಾಗುತ್ತದೆ. ಇದರಿಂದ ಕೇಂದ್ರ ಸರ್ಕಾರವೂ ತಪ್ಪಿಸಿಕೊಳ್ಳುವಂತಿಲ್ಲ.

ಈ ವಿಷಯದಲ್ಲಿ ಎದುರಾಗಿರುವ ಪ್ರಶ್ನೆಗಳನ್ನು ಸಮಗ್ರವಾದ ಪರಿಶೀಲನೆ, ವಿಸ್ತೃತ ಸಮಾಲೋಚನೆ ನಡೆಸಿ ಕೈಗೊಳ್ಳುವುದು ಅತ್ಯಗತ್ಯ. ಪರಿಸರ, ಜೀವ ವೈವಿಧ್ಯತೆಯೂ ಬೆಳೆಯಬೇಕು. ಜನರ ಬದುಕು ಉಳಿಯಬೇಕು. ●

ಪಾದವೆತ್ತ? ಎತ್ತ ಚಿತ್ತ ?



ಮತದಾರರನ್ನು ಹುಡುಕಿಹೊರಟಿರುವ ಕಾಂಗ್ರೆಸ್ಸಿಗರು ತಮ್ಮ ಈ ತಿರುಗಾಟಕ್ಕೆ ಕೊಟ್ಟಿರುವ ಹೆಸರು 'ಕಾಂಗ್ರೆಸ್ ನಡಿಗೆ ಜನರ ಬಳಿಗೆ' ಎಂದು! ತುಮಕೂರಿನ ಕ್ಯೋರಾದಲ್ಲಿ ಜೂನ್ 15ರಂದು ಬುಧವಾರ ಆರಂಭಗೊಂಡ ಈ 'ನಡಿಗೆ' ರಾಜ್ಯದಾದ್ಯಂತ ಸುತ್ತಿಯೇ ನಿಲ್ಲಲಿದೆಯಂತೆ! ಅಧಿಕೃತ ವಿರೋಧ ಪಕ್ಷವಾಗಿ ವಿಧಾನಸಭೆಯ ಮೊಗಸಾಲೆಯಲ್ಲಿಯೇ ಓಡಾಡಿಕೊಂಡಿದ್ದು, ಇಲ್ಲವೇ ಪ್ರದೇಶ ಕಾಂಗ್ರೆಸ್‌ನ ಕಛೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸುತ್ತಾ ಬಹಳವೆಂದರೆ ಬಿಜೆಪಿ ಸರ್ಕಾರದ ವಿರುದ್ಧ ಸಿಡಿದೆದ್ದಾಗ ರಾಜ್ಯಪಾಲರಿಗೆ ಮನವಿ ಸಲ್ಲಿಸುವಂತಹ ಕ್ರಿಯಾಶೂನ್ಯತೆಯನ್ನೇ ತೋರಿಸುತ್ತಾ ಬಂದಿದ್ದ ಕಾಂಗ್ರೆಸ್‌ನ ಈ ನಡಿಗೆ ಹಿಂದಿನದಕ್ಕೆ ಹೋಲಿಸಿದರೆ ಕೊಂಚ ಉತ್ತಮವೆನ್ನಬಹುದೇನೋ. ಬಿಜೆಪಿ ಸರ್ಕಾರದ ವಿರುದ್ಧ ಗುಡುಗುವುದು, ಆಕ್ರೋಶ ತೋರಿಸುತ್ತಲಾದರೂ ಜನರನ್ನು ಕಾಣುತ್ತಾರಲ್ಲ ಎಂದು ಆ ಪಕ್ಷದ ಕಾರ್ಯಕರ್ತರು ಸಮಾಧಾನಪಡಬಹುದು! ಅದರಲ್ಲಿ ಆಕ್ರೋಶಭರಿತ ಮಾತುಗಳನ್ನು ನಾಯಕರಾಡುತ್ತಿದ್ದಾರೆ. ಹೊರತು ಜನರಲ್ಲಿರುವ ಅತೃಪ್ತಿ ಹೊರ ಬರುವಂತೆ ಮಾಡುತ್ತಿಲ್ಲ. ಜನ ಯಾಕೆ ಬಿಜೆಪಿಯನ್ನು ವಿರೋಧಿಸಬೇಕು ಎಂಬುದು ಮನವರಿಕೆಯಾಗು ವುದು. ನಿತ್ಯ ಜೀವನದ ನರಳಿಕೆಗಳಿಗೂ ಈ ಸರ್ಕಾರಕ್ಕೆ ಸಂಬಂಧಗಳಿರುವುದನ್ನು ತೆರೆದು ತೋರಿಸಿದಾಗಲೇ ಮತ್ತು ಅದರಲ್ಲಿ ತಮ್ಮ ಬಗ್ಗೆ ಆತ್ಮವಿಶ್ವಾಸ ಹುಟ್ಟಿಸಿದಾಗ ಮಾತ್ರವೇ.

ಆದರೆ ಇಂತಹ ಯಾವುದೇ ಛಾಯೆ ಅಲ್ಲಿ ಕಾಣುವುದೇ ಇಲ್ಲ. 'ಬಿಜೆಪಿ ಧೂಳಿಪಟವಾಗಲಿದೆ. ನಾವೇ ಅಧಿಕಾರಕ್ಕೆ ಬರುವುದು ಖಚಿತ. ಯಡಿಯೂರಪ್ಪ, ಅವರ ಮಕ್ಕಳನ್ನು ಜೈಲಿಗೆ ಕಳಿಸುವುದು ಖಂಡಿತ' ಎಂಬುದನ್ನೇ ಅವರದೇ ಶೈಲಿನಲ್ಲಿ ನಾಯಕರು ಹೇಳುತ್ತಿದ್ದಾರಷ್ಟೇ. ಅಲ್ಲಿ ಜನರ ಗಂಭೀರ ಸಮಸ್ಯೆಗಳಾದ ಬೆಲೆ ಏರಿಕೆ, ಭೂಮಿ, ರೇಷನ್, ಕೂಲಿ, ನೆರೆಹಾವಳಿ–ಪರಿಹಾರ, ರೈತರ ಆತ್ಮಹತ್ಯೆ ಫಸಲಿನ ಬೆಲೆ ಕುಸಿತ, ರೇಗಾ, ಇತ್ಯಾದಿ ಪ್ರಶ್ನೆಗಳು ಇಲ್ಲವೇ ಇಲ್ಲ. ಹಾಗಾಗಿಯೇ ಅಧಿಕಾರದ ಗದ್ದುಗೆ ಯಾರು ಪಡದರೇನು ಎಂಬ ಭಾವನೆ ಜನತೆಗೆ ಬಾರದೇ ಇದ್ದರೆ ಜನರನ್ನು ದೂಷಿಸಬೇಕಿಲ್ಲ. ಹೀಗೆ ಪ್ರಸ್ತಾಪಿಸಲು ಕಾಂಗ್ರೆಸ್‌ಗೆ ನೈತಿಕತೆಯೂ ಇಲ್ಲವೆಂಬುದೇ ನಿಜ. ಬಿಜೆಪಿ ವಿರುದ್ಧ ಸಮರ ಸಾರಿರುವ ಕಾಂಗ್ರೆಸ್ ಕೇಂದ್ರದಲ್ಲಿದ್ದು ಮಾಡುತ್ತಿರುವುದೇನು? ಭ್ರಷ್ಟಾಚಾರ–ಹಗರಣಗಳು ಜನವಿರೋಧಿ ನೀತಿಗಳು ಇದನ್ನೇ ಅಲ್ಲವೇ?

ಕೇಂದ್ರದ ಕಾಂಗ್ರೆಸ್ ಸರ್ಕಾರದ ಆಡಳಿತದ ವಿರುದ್ಧದ ಅತೃಪ್ತಿಯನ್ನು ಬಳಸಿಕೊಳ್ಳಲು ಬಿಜೆಪಿ ಹೊಂಚುಹಾಕಿ ಹೊರಟಿದ್ದರೆ, ಕಾಂಗ್ರೆಸ್ ಪಕ್ಷವು ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧದ ಅತೃಪ್ತಿ ಹುಡುಕಿ ಹೊರಟಿದೆ. ಅವರಿಬ್ಬರೂ ಪರಸ್ಪರ ಪರ್ಯಾಯ ಎಂದು ಬಿಂಬಿಸುವುದಕ್ಕೆ ಹೆಣಗುತ್ತಿದ್ದಾರೆ. ಆದ್ದರಿಂದಲೇ, ಎಡ ಮತ್ತು ಜಾತ್ಯಾತೀತ ಮೂರನೇ ಶಕ್ತಿಗಳ ವಿರುದ್ಧವೂ ಇಬ್ಬರೂ ಧಾಳಿ ನಡೆಸುತ್ತಿರುವುದು.

ಆದರೆ ಚುನಾವಣೆಯಲ್ಲಿ ಗೆದ್ದೇ ಬಿಡುವುದಾಗಿ ಹೇಳುವ ಕಾಂಗ್ರೆಸ್ ಪಕ್ಷ ನೆನಪಿಸಿಕೊಳ್ಳಬೇಕಾದ ಅಂಶಗಳೆಂದರೆ ಈಚಿನ ಎಲ್ಲಾ ಹಂತಗಳ ಚುನಾವಣೆಗಳಲ್ಲಿ ಯಾಕೆ ಸೋಲಬೇಕಾಯಿತು? ಚುನಾವಣಾ ಸಿದ್ಧತೆಯಾದರೂ ಏನು ಎಂಬ ಬಗ್ಗೆ ಕಿಂಚಿತ್ತಾದರೂ ಚಿಂತಿಸಿದೆಯೇ? ಹಾಗೆ ನೋಡಿದರೆ ಉಳಿದೆಲ್ಲಾ ಪಕ್ಷಗಳಿಗಿಂತಲೂ ಬಿಜೆಪಿಯೇ ಚುನಾವಣಾ ಸಿದ್ಧತೆಯಲ್ಲಿ ಮುಂದಿದೆ. ಇದೇ ನಿಜವಾದ ಎಚ್ಚರಿಕೆ ಗಂಟೆ ಎಲ್ಲರಿಗೂ.

ಇದು ಎಂತಹ ದುರಂತ!: ಏನೀ ವಿಪರ್ಯಾಸ! ಹೊರದೇಶದಲ್ಲಿರುವ ಕಪ್ಪು ಹಣ ಹೊರತರಬೇಕೆಂದು ಹವಾನಿಯಂತ್ರಿತ ಡೇರೆಯೊಳಗೆ ಸಕಲ ಸೌಲಭ್ಯಗಳು. ಮಧ್ಯಮಗಳ ಥಳುಕಿನ ನಡುವೆ ಉಪವಾಸ ನಡೆಸಿದ್ದ 'ಯೋಗ' ಗುರು ರಾಮದೇವರವರು ಒಂಬತ್ತೇ ದಿನಗಳಲ್ಲಿ ಅವರ ಎನರ್ಜಿ ಖಾಲಿಯಾಗಿ ಉಪವಾಸವನ್ನೇ ಹಿಂತೆಗೆಯಬೇಕಾಗಿ ಬಂದ ಪ್ರಸಂಗ. ಇನ್ನೊಂದೆಡೆ 114 ದಿನಗಳ ನಿರಂತರ ಉಪವಾಸ ನಡೆಸಿ ಕೊನೆಯುಸಿರೆಳೆದ ಸ್ವಾಮಿ ನಿಗಮಾನಂದರ ಹೋರಾಟ. ಈ ಸಾವು ಎಲ್ಲರನ್ನೂ ಕಲಕಬೇಕಿತ್ತು. ಕ್ರಿಯಾಶೀಲಗೊಳಿಸಬೇಕಿತ್ತು. ಆದರೆ ಸ್ವತಂತ್ರ ಭಾರತದಲ್ಲಿ ಎಲ್ಲವೂ ತಣ್ಣಗೆ ಮೂಲೆ ಸೇರಿದಂತೆ. ನಾಲ್ಕು ಸಾಲಿನ ಸುದ್ದಿಯಾದಂತೆ. 39 ವರ್ಷದ ನಿಗಮಾನಂದ ಉಪವಾಸ ಸತ್ಯಾಗ್ರಹ ಆರಂಭಿಸಿದ್ದು, ಫೆಬ್ರವರಿ 19 ರಂದು. ಗಂಗಾನದಿಯ ಪಾತ್ರದಲ್ಲಿನ ಕಲ್ಲು ಗಣಿಗಾರಿಕೆ ನಿಲ್ಲಿಸಿ. ಜೀವನದಿ ಉಳಿಸುವಂತೆ ಆಗ್ರಹಿಸಿದ ಹೋರಾಟವಿದು.

ರಾಮ ದೇವರವರು ಆಸ್ಪತ್ರೆಯಲ್ಲಿರುವಾಗ ಗಣ್ಯಾತಿಗಣ್ಯರು ಓಡೋಡಿ ಬಂದು ಯೋಗಕ್ಷೇಮ ವಿಚಾರಿಸಿದರೆ, ಅವರ ಪಕ್ಕದ ಬೆಡ್‌ನಲ್ಲಿದ್ದ ನಿಗಮಾನಂದರತ್ತ

ಪುಟ 15 ಕ್ಕೆ

ಕಾರ್ಟೂನ್ ಕಾರ್ನರ್



ಕೃಪೆ: ದಿ ಹಿಂದೂ

ಭಟ್ಕಳ: ಕೋಮುಗಲಭೆ ಹಿಂದಿನ ಪಿತೂರಿ ಬಯಲು -ಜಾಗೃತರಾಗುತ್ತಿರುವ ಜನತೆ

ಭಟ್ಕಳ ನಗರ ಕೋಮುಗಲಭೆಯಲ್ಲಿ ದೇಶ ಮಟ್ಟದಲ್ಲಿ ಗಮನ ಸೆಳೆದ ಪ್ರದೇಶ. ಅಂದಿನ ಶಾಸಕ ಡಾ॥ ಚಿತ್ತರಂಜನ್ ಹತ್ಯೆ, ರಥೋತ್ಸವಕ್ಕೆ ಕಲ್ಲೆಸೆತ ಪ್ರಕರಣದಿಂದ ಪ್ರಾರಂಭವಾದ ಕೋಮುಗಲಭೆಗಳು 90ರ ದಶಕದಲ್ಲಿ ವರ್ಷಾನುಗಟ್ಟಲೆ ನಡೆದು ಪದೇ ಪದೇ ಕರ್ಫ್ಯೂ ಆಗಿ ಜೀವನ ತತ್ತರಿಸುವಂತಾಗಿ, ಜನ ಬೇಸತ್ತು ಹೋಗಿದ್ದರು. ಬಿಜೆಪಿ ಮತ್ತು ಸಂಘ ಪರಿವಾರ ಒಂದೆಡೆ ಅದನ್ನು ರಾಜಕೀಯ ಅಸ್ತ್ರವಾಗಿ ಬಳಸಿಕೊಂಡು ಅಧಿಕಾರವನ್ನು, ಪ್ರಚಾರವನ್ನು ಪಡೆದು ತನ್ನ ವ್ಯಾಪ್ತಿಯನ್ನು ಎಲ್ಲೆಡೆ ಪಸರಿಸಿಕೊಂಡಿತು. ಅದೇ ರೀತಿ ಮುಸ್ಲಿಂ ಮೂಲಭೂತವಾದಿಗಳು ಸನ್ನಿವೇಶದ ದುರ್ಬಳಕೆ ಮಾಡುವಲ್ಲಿ ನಿರತರಾಗಿದ್ದರು. ಗಲಭೆ ನಡೆದು ಹಲವಾರು ವರ್ಷಗಳ ನಂತರ ಗಲಭೆಯಲ್ಲಿ ಆವೇಶದಿಂದ ಪಾಲ್ಗೊಂಡ ಯುವಜನರಿಗೆ ಸಂಘಪರಿವಾರದ ಮೂಲಭೂತವಾದಿ ಗುಣ ಅರಿವಿಗೆ ಬರುತ್ತಿದೆ. ಶ್ರೀರಾಮಸೇನೆ ಮೊನ್ನೆ ನಡೆಸಿದ ಪ್ರತಿಭಟನೆಯ ಸಂದರ್ಭದಲ್ಲಿ ದೊಡ್ಡ ಯುವಜನರ ಗುಂಪು ಸಂಸದ ಅನಂತಕುಮಾರ್ ಮತ್ತು ಬಿಜೆಪಿ ಮುಖಂಡರಿಗೆ ಧಿಕ್ಕಾರ ಕೂಗಿತು. ಮುಖಂಡರನ್ನು ಕಟುವಾಗಿ ಟೀಕಿಸಿತು. ಇದೇ ಯುವಪಡೆ ಹಿಂದೆ ಅನಂತ ಕುಮಾರರ ಜೊತೆ ಇದ್ದು, ಗಲಭೆಗೆ ಕಾಣಿಕೆ ನೀಡಿತ್ತು.

ದಿನವು ದುಡಿದು ತಿನ್ನುವ ಆಟೋ ಚಾಲಕರನ್ನು ತಮ್ಮ ಮಾತಿನಿಂದ ಬಡಿದೆಬ್ಬಿಸಿ ಕೆಲವರನ್ನು ಈ ಕೃತ್ಯಕ್ಕೆ ಬಳಸಿಕೊಳ್ಳುತ್ತಿದ್ದರು. ಈಗ ಅವರಿಗೂ ಇವರ ಧೋರಣೆ ಏನು? ನಿಜವಾಗಿ ಧರ್ಮದ ಬಗ್ಗೆ ಕಾಳಜಿಯಿಂದ ಈ ರೀತಿ ಮಾಡುತ್ತಾರೋ ಅಥವಾ ಧರ್ಮವನ್ನು ದುರ್ಬಳಕೆ ಮಾಡಿಕೊಂಡು ಚುನಾವಣೆಯಲ್ಲಿ ಗೆದ್ದು, ರಾಜಕೀಯಅಧಿಕಾರ ಹಿಡಿಯುವ ಹುನ್ನಾರವೋ ಎಂದು ಗೊತ್ತಾಗುತ್ತಿದೆ.

ಮುಸ್ಲಿಂ ಯುವಕರ ತಂಡವೂ ಈಗ ನಿಜ ವಾಸ್ತವದ ಅರಿವಾಗಿ ಎಲ್ಲ ಜನರೂ ಪಾಲ್ಗೊಳ್ಳುವ ಕಬ್ಬಡಿಯಂಥ ಗ್ರಾಮೀಣ ಕ್ರೀಡಾ ಸ್ಪರ್ಧೆ ಏರ್ಪಡಿಸಿ ಸೌಹಾರ್ದತೆಯತ್ತ ಮುಖಮಾಡಿದೆ. ಗಲಭೆಯಿಂದ ಪ್ರಯೋಜನ ಜನಸಾಮಾನ್ಯರಿಗಲ್ಲಾ ಸ್ಥಾಪಿತ ಹಿತಾಸಕ್ತಿಗಳಿಗೆ ಎಂದು ಮುಸ್ಲಿಂ ಯುವಜನರಿಗೂ ಕ್ರಮೇಣ ಅರಿವಾಗುತ್ತಿದೆ.

ಒಟ್ಟಾರೆ ಭಟ್ಕಳ ತಾಲ್ಲೂಕಿನ ಜನ ಕೋಮು ಗಲಭೆಯಿಂದ ಸಾಕಷ್ಟು ಪಾಠ ಕಲಿತಿದ್ದು ವೈಯಕ್ತಿಕ ಸಣ್ಣ ಜಗಳವನ್ನು ಕೋಮು ಗಲಭೆಯಾಗಿ ಮಾರ್ಪಾಡಾಗುತ್ತಿದ್ದ ಆ ಪರಿಸ್ಥಿತಿ ಈಗ ಇಲ್ಲಾ ಎನ್ನುವುದು ಸಮಾಧಾನಕರ ಅಂಶವಾಗಿದೆ.

ಭಟ್ಕಳ ನಗರವೆಂದರೇ ಭಯಪಡುವ ಕಾಲ ಒಂದು ಇತ್ತು. ಸರ್ಕಾರಿ ನೌಕರರು ನಗರದಲ್ಲಿ ಮನೆ ಬಾಡಿಗೆ ಪಡೆಯುತ್ತಿರಲಿಲ್ಲ. ಹೊರಪ್ರದೇಶದ ಜನ 'ಮಿನಿದುಬೈ' ಎಂದು ಪ್ರಸಿದ್ಧ ಇದ್ದ ಭಟ್ಕಳಕ್ಕೆ ವ್ಯಾಪಾರಕ್ಕೆ ಬರುತ್ತಿರಲಿಲ್ಲ. ಅದೆಲ್ಲಾ ಬದಲಾವಣೆ ಆಗಿದ್ದು ಜನ ನೆಮ್ಮದಿಯಿಂದ ಪರಸ್ಪರ ಸೌಹಾರ್ದತೆ ಸಹಕಾರ ಮನೋಭಾವನೆಯಿಂದ ಬದುಕುತ್ತಿದ್ದಾರೆ. ಈ ಸೌಹಾರ್ದತೆ, ಸಾಮರಸ್ಯದ ಬದುಕು ಇದೇ ರೀತಿ ಮುಂದುವರಿಯಲಿ, ಬಲಗೊಳ್ಳಲಿ ಎಂದೇ ಎಲ್ಲರ ಆಶಯ.

– ಸುಭಾಸ ಕೊಪ್ಪಿಕರ, ಭಟ್ಕಳ

ಎಡಪಂಥೀಯ ಕಾರ್ಯಕರ್ತರ ಮೇಲೆ ದಾಳಿ ಸಿಐಟಿಯು ಪ್ರತಿಭಟನೆ

ಪಶ್ಚಿಮಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಎಡಪಕ್ಷಗಳ ಕಾರ್ಯಕರ್ತರ ಮೇಲೆ ಹಲ್ಲೆ, ಕಚೇರಿ ಧ್ವಂಸ, ಮಾಡಿ ವಿಕೃತ ರಾಜಕೀಯ ಸೇಡು ತೀರಿಸಿ ಕೊಳ್ಳುತ್ತಿರುವುದನ್ನು ಖಂಡಿಸಿ ಸಿಐಟಿಯು ಕೇಂದ್ರ ಸಮಿತಿ ನೀಡಿದ ಕರೆಗೆ ಭಟ್ಕಳ ಸಿಐಟಿಯು ಕಾರ್ಯಕರ್ತರು ಜೂನ್ 11ರಂದು ಪ್ರತಿಭಟನೆ ನಡೆಸಿದರು.

ಸಭೆಯನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾ ಸಮಿತಿ ಖಜಾಂಚಿ ಸುಭಾಷ್ ಕೊಪ್ಪಿಕರ ವಿವರವಾಗಿ ಮಾತನಾಡಿದರು.

ಪ್ರತಿಭಟನೆ ನೇತೃತ್ವವನ್ನು ಸಿಐಟಿಯು ಜಿಲ್ಲಾ ಸಮಿತಿ ಸದಸ್ಯ ಮಾಸ್ತಿನಾಯ್ಕ, ರಾಮಚಂದ್ರ ನಾಯ್ಕ, ವೆಂಕ್ಟಾಪುರ ಟೈಲ್ಸ್ ಕಾರ್ಮಿಕ ಮುಖಂಡರಾದ ಸದಾನಂದ ನಾಯ್ಕ ಹಾಜರಿದ್ದರು.



ಪಶ್ಚಿಮಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಎಡಪಕ್ಷಗಳ ಕಾರ್ಯಕರ್ತರ ಮೇಲೆ ಹಲ್ಲೆ, ಕಚೇರಿ ಧ್ವಂಸ ಖಂಡಿಸಿ ಬೆಂಗಳೂರಿನಲ್ಲಿ ಪ್ರತಿಭಟನೆ.

ಆಪ್ರೇಸನ್ ಸಕ್ಸಸ್, ಪೇಶೆಂಟ್ ಮಿಸ್ಸಿಂಗ್

ಕ್ಯಾತೆ

ಈ. ಬಸವರಾಜು
ಮಲ್ಲೇನಹಳ್ಳಿ

ಯಣ್ಣ, ಏನೇ ಆಗ್ಲಿ, ಆಪ್ರೇಸನ್ ಮಾತ್ರ ಮಾಡಿಸ್ಕಂಬಾರ್ದು. ಮಾಡಿಸ್ಕಂಡ್ರೂ ಅಣ್ಣು ಅಂಪ್ಲ ತಿನ್ಕಂಡು ಚನ್ನಾಗಿರ್ಬೇಕು. ಇಲ್ಲ ಅಂದ್ರೆ ಬಾಳ ಕಷ್ಟ

ಊ ಕಣಣ್ಣ, ಒಂದೊಂದ್ ಸತಿ ಡಾಕ್ಟ್ರು ಕತ್ರಿಯ ವಳ್ಗೆ ಬುಟ್ಟು ವಲ್ಗೆ ಆಕಿರ್ತರೆ, ಒಂದ್ ಆಪ್ರೇಸನ್ ಮಾಡಕೋಗಿ ಇನ್ನೇನ್ನೋ ಕತ್ರಿಸಿಬುಡ್ತರೆ, ಜ್ವಾಪಾನ್ವಾಗಿರ್ಬೇಕು.

ನೀನು ಆಪ್ರೇಸನ್ ಮಾಡಿಸ್ಕಂಡು ಕಣ್ಣೆಗ್ ಕಾಣ್ದಂಗೆ ಓಡೋಗಿರರ ನೋಡಿದ್ದಿಯ?

ನಂಗ್ಯಾರೂ ಗೊತ್ತಿಲ್ವಪ್ಪ? ನಿಂಗೇನಾರ ಗೊತ್ತೆ?

ನಂಗೂ ಗೊತ್ತು, ನಿಂಗೂ ಗೊತ್ತು. ಆದ್ರೆ ನೀನು ಏಳ್ತಾ ಇಲ್ಲ ಅಷ್ಟೆಯ!

ಅದ್ಯಾರೇಳಣ್ಣ, ಇಂಗೆ ಸತಾಯಿಸ್ ಬ್ಯಾಡ!

ಅದೇ ಕಣಣ್ಣ, ನಮ್ ಪ್ರಕಾಸಣ್ಣ

ಯಾವ್ ಪ್ರಕಾಸಣ್ಣ?

ನಿಂಗೆ ಯಲ್ಲಾನೂ ಬುಡ್ಸಿ ಏಳ್ಬೇಕಪ್ಪ. ಅದೇ ನಮ್ ವರ್ತೂರು ಪ್ರಕಾಸಣ್ಣ.

ಅವ್ನು ಯಾರತ್ರ, ಎಲ್ಲಿ ಆಪ್ರೇಸನ್ ಮಾಡಿಸ್ಕಂಡಿದ್ದ?

ಏ.. ಯಡೂರಪ್ಪ ಆಪ್ರೇಸನ್ ಕಮ್ಲ ಅಂತ ಮಾಡಿದ್ನಲ, ಆಗ ವರ್ತೂರು ಪ್ರಕಾಸಣ್ಣೂ ಮಾಡಿಸ್ಕಂಡ. ಈಗ ನಾವು ಮಕ್ಳಾಗದಂಗೆ ಆಪ್ರೇಸನ್ ಮಾಡಿಸ್ಕತಿವಲ, ಆಗ ನಮಿಗೆ ದುಡ್ ಕೊಡದಿಲ್ವೆ, ಅಂಗೆಯ ಯಡೂರಪ್ಪ ಪ್ರಕಾಸಣ್ಣುಂಗೆ ಆಪ್ರೇಸನ್ ಮಾಡಿ ದುಡ್ ಕೊಟ್ಟು ಕಳಿಸದ್ನಂತೆ. ಅಂಗಾಗಿ ಪ್ರಕಾಸಣ್ಣ ಎಲ್ಯವ್ನೆ ಅನ್ನದೆ ಗೊತ್ತಾಯ್ತಾ ಇಲ್ವಂತೆ.

ನೋಡಪ್ಪ, ನೀನು ನನ್ನ ಇಂಗೆ ಯಾಮಾರುಸ್ತಿಯ! ನಾನು ನಿಜ್ವಾಗಿ ಡಾಕ್ಟ್ರು ಮಾಡ ಆಪ್ರೇಸನ್ನು ಅಂದ್ಕಂಡಿದ್ರೆ ನೀನು ನೋಡಿದ್ರೆ ಯಡೂರಪ್ನ ಆಪ್ರೇಸನ್ ಬಗ್ಗೆ ಏಳ್ತಾ ಇದ್ದಿಯ!

ಈಗ ಆಪ್ರೇಸನ್ನು ಅಂದ್ರೆ ಸದ್ದಿಕೆ ಯಡೂರಪ್ನೇ ನ್ಯನ್‌ಪಾಗದು ಕಣಣ್ಣ. ಅದ್ಕೆ ಏಳ್ದೆ.

ಪ್ರಕಾಸಣ್ಣ ಆಪ್ರೇಸನ್ ಮಾಡಿಸ್ಕಂಡ್ರೆ ದುಡ್ ಕೊಟ್ಟು ಮಿನೀಷ್ಟ್ರನ್ನೂ ಮಾಡ್ತಿನಿ ಅಂತ ಯಡೂರಪ್ಪ ಏಳಿದ್ನಂತಲ?

ಏಳಿದ್ದ, ಅದ್ನೆ ನಂಬಿಕಂಡು ಪ್ರಕಾಸಣ್ಣ ಮಾಡಿಸ್ಕಂಡ. ಮಿನೀಷ್ಟ್ರಾಯ್ತಿನಿ ಅಂತ ನ್ಯಂಟ್ರುಗ್ಯಲ್ಲ ಏಳ್ಕಂಡು ಇಂತ ದಿನ ಬೆಂಗ್ಳೂರಿಗೆ ಬಲ್ಲಿ ಅಂತವ ಬಸ್ ಸಾರ್ಜನ್ನೂ ಕೊಟ್ ಬಂದಿದ್ದ. ವಳ್ಳೆ ಕೋಟ್ನೂ ವಲಿಸ್ಕಂಡಿದ್ದ. ಯಡೂರಪ್ಪ ಇದ್ಕಿದ್ದಂಗೆ ಸುಮ್ಕಾದ್ನಂತೆ.

ಪ್ರಕಾಸಣ್ಣ ಪೋನ್ ಮಾಡಿ ಸಾಕಾದ್ನಂತೆ. ಯಡೂರಪ್ಪುನ್ ಪೋನು ಚುಚ್ ಆಫಾಗಿತ್ತಂತೆ. ಒಂದೊಂದ್ಸತಿ ಪೋನ್ ತಗಿತಲೇ ಇತ್ತಿಲ್ವಂತೆ. ಕ್ವನಿಗೆ ಬೇಜಾರಾಗಿ ಪ್ರಕಾಸಣ್ಣ ಆ ಬಟ್ಟೆ ಯಲ್ಲಾನು ಅದ್ಯಾರ್ಗೋ ದಾನ ಮಾಡಿ ಎಲ್ಲೋ ವಂಟೋದ್ನಂತೆ.

ಈ ಯಡೂರಪ್ಪ ಅದೇನ್ ಮನೆಹಾಳ್ ಕ್ಯಲ್ಸ ಮಾಡ್ತನೋ ಕಾಣಪ್ಪ. ಪಾಪ ನಮ್ ವರ್ತೂರು ಪ್ರಕಾಸಣ್ಣ ಯಾವಾಗ್ಲೂ ಕಿರೀಟ ಆಕ್ಯಂಡು. ಕತ್ತಿ ಇಡ್ಕಂಡು ಅಲ್ಲಿ ಇಲ್ಲಿ ಪ್ಲೆಕ್ಸ್ ಆಕಿಸ್ಕಂಡು. ಪೋಗ್ರಾಂ ಗಳಿಗೆ ಅಟೆಂಡ್ ಮಾಡ್ಕಂಡಿದ್ದ. ಅಂತನ್ನೇ ಇಂಗ್ ಮಾಡ್ದ ಅಂದ್ರೆ ಇನ್ಯಾರ್ಯಾರು ಏನೇನಾಗ್ಯವ್ರೋ ಕಾಣೆ.

ನೀನೇಳದು ಕರೆಟ್ಟೆಯ. ಆ ಚನ್ನಪಟ್ನದ ಅಸ್ವತ್ ಅನ್ನನೂ ದುಡ್ಡೀಸ್ಕಂಡು ಆಪ್ರೇಸನ್ ಮಾಡಿಸ್ಕಂಡ. ಈಗ ಅದೆಲ್ಲವ್ನೆ ಅಂತವ ಉಡ್ಕ ಪರಿಸ್ಥಿತಿ ಬಂದದಂತೆ.

ಅಂಗಾರೆ ನಮ್ ಪ್ರಕಾಸಣ್ಣ ಮಿನಿಸ್ಟ್ರಾಗೆದಿಲ್ಲ ಅನ್ನು?

ಏ.. ಯಡೂರಪ್ನೇ ಏಳಿಲ್ವೆ, ಇನ್ನ ಇವಾರ್ನೂ ಮಿನಿಸ್ಟ್ರ ಮಾಡಕೋಗದಿಲ್ಲ, ನಂಗೆ ಬೇಕಾದವ್ರ ಮಾಡಿಕಂಡಿದ್ದಿನಿ. ಮುಂದೆ ಅಬಿವೃದ್ಧಿ ಮಾಡದೊಂದೇ ನನ್ ಕ್ಯಲ್ಸ ಅಂತವ.

ಏನ್ ಮಾಡದೇ ಇದ್ರೂ ಅಬಿವೃದ್ಧಿ ಮಾತ್ರ ಮಾಡ್ಕತ್ತಲೇ ಅವ್ನೆ ಬುಡು. ಅದು ಯಲ್ಲಾರ್ಗೂ ಗೊತ್ತು. ಆದ್ರೆ ಈತರ ವಚನ ಬ್ರಷ್ಟ ಆಗ್ತಾರ್ದಾಗಿತ್ತು ಅಷ್ಟೆಯ.

ಇದೇನಣ್ಣ, ಯಡೂರಪ್ಪುನ್ ಮಾತ ಅವ್ನಿಗೇ ತಿರುಗುಸ್ತಾ ಇದ್ದಿಯ? ಯಡೂರಪ್ಪ ಓದ್ವರ್ಸದ್ ತನ್ನ ಕುಮಾರಣ್ಣ ವಚನ ಬ್ರಸ್ಟ ಅಂತ ಏಳ್ಕಂಡು ತಿರುಗ್ತಾ ಇದ್ದ. ಅದೇನೋ ಇತ್ತೀಚ್ಗೆ ಬುಟ್ಬಿರಂಗವ್ನೆ. ಈಗ ನೀನು ನೋಡಿದ್ರೆ ಯಡೂರಪ್ಪುನ್ನೇ ವಚನ ಬ್ರಸ್ಟ ಅಂತಾ ಇದ್ದಿಯ!

ವಚನ ಬ್ರಸ್ಟ ಅಂದ್ರೆ ಏನೇಳು?

ಕೊಟ್ ಮಾತಿಗೆ ತಪ್ಪೋನು

ಈಗ ಮಿನಿಸ್ಟ್ರ ಮಾಡ್ತೀನಿ ಅಂತ ಏಳಿ ಸುಮ್ಕಿದ್ರೆ ಇನ್ನೇನನ್ ಬೇಕು?

ನೀನೇಳದು ಕರೆಟ್ಟೆಯ. ಆದ್ರೆ ಪ್ರಕಾಸಣ್ಣ ಯಾಕೆ ಯಡೂರಪ್ಪ ವಚನ ಬ್ರಸ್ಟ ಅಂತ ಏಳದ್ ಬುಟ್ಟು ಸುಮ್ಕೆ ಅವ್ನೆ?

ಆಪ್ರೇಸನ್ ಮಾಡಿಸ್ಕಂಡವ್ನಲ ಅದ್ಕೆ. ಒಟ್ನಲಿ ಆಪ್ರೇಸನ್ ಸಕ್ಸಸ್–ಪೇಸೆಂಟ್ ಮಿಸ್ಸಿಂಗ್ ಅಂತ ಏಳ್ಬೌದು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಬೆಂಬಲ ಬೆಲೆಗಾಗಿ ಆಮದು ಸುಂಕ ಹೆಚ್ಚಳಕ್ಕೆ

ರೇಷ್ಮೆ ಬೆಳೆದ ರೈತರ ಆಕ್ರೋಶ

ಜೂನ್ 28 ರಂದು ರೇಷ್ಮೆ ಬೆಳೆಯುವ 8 ಜಿಲ್ಲೆಗಳ ಬಂದ್‌ಗೆ ಕರೆ

ಅಲ್ಲಿದ್ದರೈತರು ಆಕ್ರೋಶಗೊಂಡಿದ್ದರು. ಎಷ್ಟು ದಿನಗಳ ಕಾಲ ಹೀಗೆ ಕಾಯುವುದು.ಸರ್ಕಾರದ ಭರವಸೆ ಕೇವಲ ಕಾಲ ತಳ್ಳುವ ಹವಣಿಯೆಯಾಗಿತ್ತೇ ಹೊರತು ಕಿಂಚಿತ್ತಾದರೂ ಪರಿಹಾರವನ್ನು ನೀಡಲಿಲ್ಲ. ಒಂದಲ್ಲ, ಎರಡಲ್ಲ ಹತ್ತಾರು ಬಾರಿ ವಿವಿಧ ಹಂತಗಳ ಹೋರಾಟ ನಡೆಸಿಯಾಗಿದೆ. 'ಈಗಲೂ ನಿಲ್ಲದೇ ನಡೆಯುತ್ತಿದೆ. ತಮ್ಮ ಅಹವಾಲನ್ನು ಕೇಂದ್ರ ಸರ್ಕಾರವೂ ಕೇಳುತ್ತಿಲ್ಲ. ರಾಜ್ಯ ಸರ್ಕಾರವೂ ಕೇಳುತ್ತಿಲ್ಲ. ಹೀಗಾಗಿ ಮೊನ್ನೆ ರಾಜಧಾನಿಗೆ ಲಗ್ಗೆ ಇಟ್ಟ ರೇಷ್ಮೆ ಬೆಳೆಗಾರ ರೈತರ ಅಪಾರ ದಂಡು ಸಹನೆಯ ಕಟ್ಟೊಯೊಡೆದು ಸಿಡಿದದ್ದು ಸಹಜವೇ ಆಗಿತ್ತು.

ತಮ್ಮ ರೇಷ್ಮೆಗೂಡಿಗೆ ಸಿಗುತ್ತಿರುವ ಬೆಲೆ ತೀರಾ ಕಡಿಮೆಯಿದ್ದು, ಅಪಾರ ನಷ್ಟ ಅನುಭವಿಸುತ್ತಿದ್ದಾರೆ. ಬೆಂಬಲ ಬೆಲೆ ನೀಡಿಕೆ, ಆಮದು ಸುಂಕದ ಹೆಚ್ಚಳ ಇತ್ಯಾದಿ ಬೇಡಿಕೆಗಳಿಗೆ ಆಗ್ರಹಿಸಿ ರೈತರು ಇದೇ ಜೂನ್ 13ರಂದು

ರೇಷ್ಮೆಗೂಡಿಗೆ ಬೆಂಬಲ ಬೆಲೆ ನೀಡುವಂತೆ ಒತ್ತಾಯಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದ ಸುಂಕರಹಿತ ರೇಷ್ಮೆ ಆಮದು ವಿರೋಧಿ ಅಖಿಲ ಭಾರತ ಹೋರಾಟ ಸಮಿತಿ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಸದಸ್ಯರನ್ನು ಭೇಟಿ ಮಾಡಲು ಬಂದಿದ್ದ ಸಚಿವ ಬಿ.ಎನ್.ಬಚ್ಚೇಗೌಡ ಅವರ ಮೇಲೆ ಪ್ರತಿಭಟನಾಕಾರರು ರೇಷ್ಮೆ ಗೂಡು ಎಸೆದು ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ನಗರ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ರ‍್ಯಾಲಿ ನಡೆಸಿಧ ಪ್ರತಿಭಟನಾಕಾರರು 'ರೇಷ್ಮೆ ಆಮದು ಸುಂಕವನ್ನು ಕೇಂದ್ರ ಸರ್ಕಾರ ಕಡಿಮೆ ಮಾಡಿರುವುದರಿಂದ ದೇಶದಲ್ಲಿ ರೇಷ್ಮೆ ಬೆಳೆ ಕುಸಿದಿದೆ. ಇದರಿಂದ ರೇಷ್ಮೆ ಬೆಳೆಗಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಶೇ. 31ರಷ್ಟಿದ್ದ ರೇಷ್ಮೆ ಆಮದು ಸುಂಕವನ್ನು ಸರ್ಕಾರ ಶೇ.5ಕ್ಕೆ ಇಳಿಸಿದೆ. ಸರ್ಕಾರದ ಈ ಕ್ರಮ ದೇಶದ ರೇಷ್ಮೆ ಬೆಳೆಗಾರರ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಆಮದು ಸುಂಕವನ್ನು ಇಳಿಸಿದ ನಂತರ ದೇಶೀಯ ಮಾರುಕಟ್ಟೆಯಲ್ಲಿ ರೇಷ್ಮೆ ಬೆಲೆ ಗಣನೀಯವಾಗಿ ಕುಸಿಯುತ್ತಿದೆ. ಜನವರಿ ತಿಂಗಳಿನಲ್ಲಿ ಕೆ.ಜಿ.ಗೆ 312 ರೂಪಾಯಿ ಇದ್ದ ರೇಷ್ಮೆ ಗೂಡಿನ ಬೆಲೆ, ಆಮದು ಸುಂಕ ಕಡಿಮೆ ಮಾಡಿದ ಬಳಿಕ 229 ರೂಪಾಯಿಗೆ ಕುಸಿದಿದೆ. ಬೆಲೆ ಕುಸಿತದಿಂದ ರೇಷ್ಮೆ ಬೆಳೆಗಾರರು ಕಂಗಾಲಾಗಿದ್ದಾರೆ ಎಂದು ಸಮಿತಿಯ ಸಂಘಟನಾ ಸಂಚಾಲಕ ಜಿ.ಸಿ.ಬಯ್ಯಾರೆಡ್ಡಿ ಹೇಳಿದರು.

'ಇಂತಹ ಸಂದಿಗ್ಧ ಸ್ಥಿತಿಯಲ್ಲೂ ಕೇಂದ್ರ ಸರ್ಕಾರ ವಾರ್ಷಿಲ 2,500 ಮೆಟ್ರಿಕ್ ಟನ್ ರೇಷ್ಮೆನಯನ್ನು ಆಮದು ಮಾಡಿಕೊಳ್ಳುವ ನಿರ್ಧಾರ ಕೈಗೊಂಡಿದೆ. ಸರ್ಕಾರದ ಈ ಅವೈಜ್ಞಾನಿಕ ಕ್ರಮದಿಂದ ರೇಷ್ಮೆ ಬೆಳೆಗಾರರು ಮತ್ತಷ್ಟು ದಿವಾಳಿಯಾಗುವ ಆತಂಕ ಎದುರಾಗಿದೆ' ಎಂದು ರಾಜ್ಯ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ ಹೇಳಿದರು.

'ಸುಂಕರಹಿತ ರೇಷ್ಮೆ ಆಮದು ನೀತಿಯನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ ಕೇಂದ್ರ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಕೇಂಧ್ರ ಹಾಗೂ ರಾಜ್ಯ ಸರ್ಕಾರ ರೇಷ್ಮೆ ಬೆಳೆಗಾರರ ಸಮಸ್ಯೆಗಳ ಬಗೆ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿವೆ' ಎಂದರು.

ರೇಷ್ಮೆ ಆಮದು ಸುಂಕವನ್ನು ಶೇ.31ಕ್ಕೆ ಹೆಚ್ಚಿಸಬೇಕು, ರೇಷ್ಮೆಯನ್ನು ಆಮದು ಮಾಡಿಕೊಳ್ಳುವ ನಿರ್ಧಾರವನ್ನು ಕೈಬಿಡಬೇಕು. ರಾಜ್ಯ ಸರ್ಕಾರ ಕೆ.ಜಿ.ರೇಷ್ಮೆ ಗೂಡಿಗೆ 350 ರೂಪಾಯಿ ಬೆಂಬಲ ಬೆಲೆ ಘೋಷಿಸಬೇಕು ಎಂದು ಅವರು ಒತ್ತಾಯಿಸಿದರು.

ಪ್ರತಿಭಟನಾಕಾರರನ್ನು ಭೇಟಿ ಮಾಡಿದ ಬಚ್ಚೇಗೌಡ ಅವರು, 'ಕೇಂದ್ರ ಸರ್ಕಾರದ ಸುಂಕರಹಿತ ರೇಷ್ಮೆ ಆಮದು ನೀತಿಯಿಂದ ರೇಷ್ಮೆಗೂಡಿನ ಬೆಲೆ ಕುಸಿದಿದೆ. ರೇಷ್ಮೆ ಗೂಡಿನ ಬೆಲೆ ಕುಸಿದಿದೆ. ಬೆಲೆ ಕುಸಿತಕ್ಕೆ ರಾಜ್ಯ ಸರ್ಕಾರ ಕಾರಣವಲ್ಲ. ಆದ್ದರಿಂದ ರೇಷ್ಮೆ ಬೆಳೆಗಾರರ ಹಿತ ರಕ್ಷಣೆಗೆ ಕೇಂದ್ರ ಸರ್ಕಾರವೇ ಕ್ರಮ ಕೈಗೊಳ್ಳಬೇಕು' ಎಂದರು. ಸಚಿವರ ಈ ಹೇಳಿಕೆಯಿಂದ ಕೆರಳಿದ ಪ್ರತಿಭಟನಾಕಾರರು ಬಚ್ಚೇಗೌಡ ಅವರ ಮೇಲೆ ರೇಷ್ಮೆ ಗೂಡುಗಳನ್ನು ಎಸೆದು ಆಕ್ರೋಶ ವ್ಯಕ್ತಪಡಿಸಿದರು.

ನಂತರ ಮಾತನಾಡಿದ ಸಚಿವರು 'ರೇಷ್ಮೆ ಬೆಳೆಗಾರರ ಬೇಡಿಕೆಗಳನ್ನು ಈಡೇರಿಸುವ ಸಂಬಂಧ ಮುಖ್ಯಮಂತ್ರಿಗಳೊಂದಿಗೆ ಸಭೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು. ರೇಷ್ಮೆ ಬೆಳೆಗಾರರ ಮುಖಂಡರ ನಿಯೋಗವನ್ನು ದೆಹಲಿಗೆ ಕರೆದೊಯ್ದು ಬೆಂಬಲ ಬೆಲೆ ಘೋಷಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗುವುದು ಎಂದು ಭರವಸೆ ನೀಡಿದರು.

ಸಚಿವರ ಭರವಸೆಯಿಂದ ತೃಪ್ತರಾಗದ ಪ್ರತಿಭಟನಾಕಾರರು 'ರೇಷ್ಮೆ ಗೂಡಿಗೆ ವಾರದೊಳಗೆ ಬೆಂಬಲ ಬೆಲೆ ಘೋಷಿಸದಿದ್ದರೆ ರೇಷ್ಮೆ ಬೆಳೆಯುವ ಎಲ್ಲ 13 ಜಿಲ್ಲೆಗಳಲ್ಲಿ ಜೂನ್ 28ರಂದು ಬಂದ್ ನಡೆಸಲಾಗುತ್ತದೆ. ರೇಷ್ಮೆ ಮಾರುಕಟ್ಟೆಗಳಲ್ಲಿ ವಹಿವಾಟು ಸ್ಥಗಿತಗೊಳಿಸಿ ಉಗ್ರ ಹೋರಾಟ ನಡೆಸಲಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

ವಿವಿಧ ಜಿಲ್ಲೆಗಳ ರೇಷ್ಮೆ ಬೆಳೆಗಾರರು. ನೇಕಾರರ ಸಂಘಟನೆಗಳ ಸದಸ್ಯರು ಹಾಗೂ ರೇಷ್ಮೆ ಉದ್ದಿಮೆದಾರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.





ಬಸ್ ಪಾಸ್ ದರ ಏರಿಕೆ ವಿರುದ್ಧ ಎಸ್‌ಎಫ್‌ಐ ಬೆಂಗಳೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಡೆದ ವಿದ್ಯಾರ್ಥಿಗಳ ಪ್ರತಿಭಟನೆ



ಬೀದಿಬದಿ ವ್ಯಾಪಾರಿಗಳಿಂದ 24 ಗಂಟೆ ಧರಣಿ

ಮಂಗಳೂರಿನ ಬೀದಿ ಬದಿ ವ್ಯಾಪಾರಿಗಳು ಸಿಐಟಿಯು ನೇತೃತ್ವದಲ್ಲಿ ನಡೆಯುತ್ತಿರುವ ಹೋರಾಟಕ್ಕೆ ವ್ಯಾಪಕ ಜನಬೆಂಬಲ ವ್ಯಕ್ತವಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ- ಮಂಗಳೂರು ನಗರ ಹಾಗೂ ಆಸುಪಾಸಿನ ಜನತೆ ನಗರ ಕೇಂದ್ರವಾದ ಹಂಪನಕಟ್ಟಾ, ಸ್ಟೇಟ್ ಬ್ಯಾಂಕ್ ಪ್ರದೇಶ ಹಾಗೂ ಲೇಡಿಗೋಷನ್ ಪ್ರದೇಶಕ್ಕೆ ಕಾರ್ಯನಿಮಿತ್ತ ಭೇಟಿಕೊಟ್ಟು ವಾಪಸ್ಸಾಗುವಾಗ, ಮನೆಗೆ ಬೇಕಾದ ತುರ್ತು ಅವಶ್ಯಕತೆಗಳಿಗೆ ಆ ಪ್ರದೇಶಗಳಲ್ಲಿ ಬೀದಿ ಬದಿಯಲ್ಲಿ ವ್ಯಾಪಾರಿಗಳನ್ನೇ ಅವಲಂಬಿಸಬೇಕಾದುದು; ಅವರಿಂದ ಸಾಮಗ್ರಿಗಳನ್ನು ಅಗ್ಗದ ದರದಲ್ಲಿ ಖರೀದಿ ಮಾಡಿ ಸಮೀಪವೇ ಇರುವ ಸಿಟಿ ಹಾಗೂ ಕೇಂದ್ರ ಬಸ್ ನಿಲ್ದಾಣಗಳಿಂದ ತಮ್ಮ ತಮ್ಮ ಬಡಾವಣೆಗಳಿಗೆ ಊರುಗಳಿಗೆ ಹೋಗಲು ಸಾಧ್ಯವಾಗುತ್ತಿದ್ದುದು. ಈ ಪ್ರದೇಶದಲ್ಲಿ ನಗರಪಾಲಿಕೆ ಅವಕಾಶ ಮಾಡಿಕೊಟ್ಟಿದ್ದರಿಂದ ಸಾಲುಸಾಲಾಗಿ ನಿಲ್ಲುತ್ತಿದ್ದ ಖಾಸಗಿ ವಾಹನಗಳು ಸಾಮಾನ್ಯ ಜನರಿಗೆ ಅಡೆತಡೆಯಾಗಿವೆಯೋ ಹೊರತು ಬೀದಿಬದಿ ವ್ಯಾಪಾರಿಗಳ ಪುಟ್ಟ ಹಲಗೆ ಅಥವಾ ಸಾಮಗ್ರಿಗಳಲ್ಲ. ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ಹಾಗೂ ಇತರ ಅಭಿವೃದ್ಧಿ ಏಜೆನ್ಸಿಗಳಿಂದ ನಗರ ಸೌಂದರ್ಯ ಹಾಗೂ ಅಭಿವೃದ್ಧಿಗಾಗಿ ಪಡೆದಿದ್ದ ಸಾಲದ ಹಣದಲ್ಲಿ ಪ್ರಮುಖ ರಸ್ತೆಗಳನ್ನು ನಗರಪಾಲಿಕೆ ಕಾಂಕ್ರೀಟೀಕರಣ ಮಾಡಿದೆ; ಆದರೆ ಈ ಪ್ರಕ್ರಿಯೆಯಲ್ಲಿ ಶ್ರೀಮಂತ ವ್ಯಾಪಾರಿಗಳ ಅಂಗಡಿ ಮುಗ್ಗಟ್ಟುಗಳಿಗೆ ಒಂಚೂರೂ ಹಾನಿಯಾಗಬಾರದೆಂದು ರಸ್ತೆಗಳಿಗೆ ಪುಟ್‌ಪಾತ್‌ಗಳನ್ನೇ ರಚಿಸಿಲ್ಲ. ಬಹುಶಃ ಪುಟ್‌ಪಾತ್ ಇಲ್ಲದೆ ಕಾಂಕ್ರೀಟ್ ರಸ್ತೆಗಳು ನಿರ್ಮಾಣವಾದದ್ದು ಮಂಗಳೂರಲ್ಲೇ ಇರಬಹುದು.

ಮಾಲ್ 'ಥಳುಕು-ಬಳುಕು', ಬೀದಿ ವ್ಯಾಪಾರವೆಂಬ 'ಕೊಳಕು'


ಈ ಮೇಲಿನ ಸಂಗತಿಗಳು ಎರಡು ವರ್ಷ ಮೇಲ್ಪಟ್ಟು ಆಡಳಿತ ನಡೆಸುತ್ತಿರುವ ಬಿಜೆಪಿ ನೇತೃತ್ವದ ಮಂಗಳೂರು ಮಹಾನಗರಪಾಲಿಕೆ ಯಾರ ಪರವಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದಕ್ಕೆ ಉದಾಹರಣೆ. ನಗರ ಕೇಂದ್ರವಾದ ಹಂಪನ್ ಕಟ್ಟೆಯಲ್ಲಿರುವ ಸಿಟಿ ಸೆಂಟರ್ ಎಂಬ ಬೃಹತ್ ಮಾಲ್ ಹಾಗೂ ಇನ್ನಿತರ ಮಾಲ್‌ಗಳು, ನಗರಾಭಿವೃದ್ಧಿಯ ಯೋಜನಾ ನಿಯಮಾವಳಿಗಳನ್ನೇ ಜನರ ಪ್ರತಿಭಟನೆಯ ನಡುವೆಯೂ ಗಾಳಿಗೆ ತೂರಿ ನಿರ್ಮಾಣವಾಗಿದೆ. ಮಾಲ್ ಸಂಸ್ಕೃತಿಯು ಶ್ರೀಮಂತ ಮತ್ತು ಮೇಲು ಮಧ್ಯಮವರ್ಗದ ಜನರಿಗೆ ಮಾತ್ರ ಬೀದಿ ಬದಿಯ ವ್ಯಾಪಾರ ಅಸಹ್ಯವಾಗಿಯೂ ಕೊಳಕಾಗಿಯೂ ಕಾಣಿಸುತ್ತದೆ. ಮಾಲ್‌ಗಳ ದೊಡ್ಡಂಗಡಿಗಳ ಗಿರಾಕಿಗಳಾದ ಇವರಿಗೆ ಈ ದೊಡ್ಡಂಗಡಿಗಳವರು ಸಾಕಷ್ಟು ಕಾರ್ ಪಾರ್ಕಿಂಗ್ ಸ್ಥಳಗಳನ್ನು ಕಲ್ಪಿಸಲಿಲ್ಲವಾಗಿ, ಬೀದಿ ಬದಿ ವ್ಯಾಪಾರ ನಡೆಯುವ ಬಸ್ಸು ಸ್ಟ್ಯಾಂಡುಗಳ ಸಮೀಪ ಪುಟ್‌ಫಾತ್‌ಗಳಿರಬೇಕಾದ ಸ್ಥಳಗಳಲ್ಲಿ ಕಾರುಗಳನ್ನು ಪಾರ್ಕ್ ಮಾಡುತ್ತಾರೆ. ಈ ಮಾಲ್ ಸಂಸ್ಕೃತಿಯ ಜನರು ಹಾಗೂ ದೊಡ್ಡಂಗಡಿಗಳ ಒಡೆಯರ ಚಾಕರಿಯವರಾಗಿ ನಗರಪಾಲಿಕೆಯ ಆಡಳಿತ ನಡೆಸುತ್ತಿರುವ ಬಿಜೆಪಿ ಕಾರ್ಪೋರೇಟರ್‌ಗಳು ವರ್ತಿಸುತ್ತಿದ್ದಾರೆ. ಮೇಲಾಗಿ ನರೇಂದ್ರಮೋದಿಯ ಗುಜರಾತ್ ಸೌಂದರ್ಯ ಮಾದರಿಯನ್ನು ಕರ್ನಾಟಕದಲ್ಲಿ ಮೊತ್ತಮೊದಲು ಅನುಷ್ಠಾನಗೊಳಿಸಬೇಕೆಂದು ಮಂಗಳೂರು ಬಿಜೆಪಿಗರು ಅತ್ಯುತ್ಸಾಹದಲ್ಲಿದ್ದಾರೆ; ಅಲ್ಲಿನಂತೆ ಇಲ್ಲಿಯೂ ಬೀದಿ ವ್ಯಾಪಾರಿ ಸಮೂಹದಲ್ಲಿ ಹೆಚ್ಚಿಗೆ ಇರುವ ಮುಸ್ಲಿಂ ಪುರುಷರನ್ನು, ಕ್ರೈಸ್ತ ಮಹಿಳೆಯರನ್ನು ನಿರ್ಗತಿಕರನ್ನಾಗಿ ಮಾಡಿದಲ್ಲಿ ತಾವೂ ನರೇಂದ್ರ ಮೋದಿಗೂ ಒಂದು ಹೆಜ್ಜೆ ಮುಂದೆಯೇ ಇರುವೆವು ಎಂದು ಸ್ಥಾಪಿಸುವ ಆತುರದಲ್ಲಿದೆ ಮಂಗಳೂರು ಮಹಾನಗರಪಾಲಿಕೆ. ಇದರ ಭಾಗವಾಗಿಯೇ ಬೀದಿಬದಿ ವ್ಯಾಪಾರಿಗಳನ್ನು



ಎತ್ತಂಗಡಿ ಮಾಡಲು 'ಟೈಗರ್' ಹೆಸರಿನ ಹಾಗೂ ಹುಲಿ ಚರ್ಮದ ಬಣ್ಣದ ಲೇಪ ಹೊಂದಿದ ಲಾರಿಯೊಂದನ್ನು ಪಾಲಿಕೆ ದಣಿಗಳು ಆಗೀಗ ದರೋಡೆಗೆಂದು ಅಟ್ಟುತ್ತಿದ್ದಾರೆ.

ಹರಿದು ಬಂದ ಬೆಂಬಲ

ಬಿಜೆಪಿ ನಗರಾಡಳಿತದ ಹತ್ತು ಹಲವು ಹುನ್ನಾರಗಳನ್ನು, ಕುತಂತ್ರಗಳನ್ನು, ದೌರ್ಜನ್ಯಗಳನ್ನು ಹಾಗೂ ಅದರ ಹಿಂದಿನ ರಾಜಕೀಯ ಸಾಮಾಜಿಕ ನಿಲುವುಗಳನ್ನು ಬೀದಿ ಬದಿ ವ್ಯಾಪಾರಸ್ಥರ ಬೆಂಬಲಕ್ಕೆ ನಿಂತ ಹೋರಾಟ ಸಮಿತಿಯು 24 ಗಂಟೆಗಳ ಧರಣಿ ಸತ್ಯಾಗ್ರಹ ಬಯಲಿಗೆಳೆಯಿತು. ಇದು ಕೇವಲ ಮಂಗಳೂರು ನಗರ ಕೇಂದ್ರದಲ್ಲಿರುವ 350 ಬೀದಿ ಬದಿ ವ್ಯಾಪಾರಿಗಳ ಹಾಗೂ ಅವರ ಕುಟುಂಬದ ಪ್ರಶ್ನೆ ಮಾತ್ರವಲ್ಲ. ತಮ್ಮ ಆಡಳಿತದ ಅವಧಿಯಲ್ಲಿ ಈಗಾಗಲೇ ಬಿಜೆಪಿ ನೇತೃತ್ವದ ಆಡಳಿತವು ಮಂಗಳೂರು ನಗರಪಾಲಿಕೆಯಲ್ಲೂ ರಾಜ್ಯದಲ್ಲೂ ಜನ ಸಾಮಾನ್ಯರ ಬದುಕನ್ನು ನಿರ್ಗತಿಕಗೊಳಿಸುವ ಹಾಗೂ ಭೂ ಮಾಫಿಯಾವನ್ನು ಗಣಿಕಳ್ಳರನ್ನು ಪೋಷಿಸುವ ಕಾರ್ಯಕ್ರಮನ್ನು ಮಾತ್ರವೇ ಹಾಕಿಕೊಂಡಿದೆ ಎಂಬುದನ್ನು ಪ್ರಸ್ತುತಪಡಿಸಿತು. ಇದಕ್ಕಾಗಿಯೇ ಹೋರಾಟ ಸಮಿತಿಯು ನಡೆಸುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಸಿಪಿಐ(ಎಂ), ಕಾಂಗ್ರೆಸ್, ಜಾತ್ಯಾತೀತ, ಜನತಾದಳ ಪಕ್ಷ, ದಲಿತ ಸಂಘರ್ಷ ಸಮಿತಿ, ಸಾಮೂಹಿಕ ಸಂಘಟನೆಗಳು, ಪ್ರಗತಿಪರ ಸಂಘಟನೆಗಳು, ವಿದ್ಯಾರ್ಥಿ ಯುವಜನ ಸಂಘಟನೆಗಳೂ ಭಾಗವಹಿಸಿದವು.



ವಾಸುದೇವ ಉಚ್ಚಿಲ

ಸುರಿವ ಮಳೆಯ ನಡುವೆಯೂ

ಜೂನ್ 15 ರ ಬೆಳಿಗ್ಗೆನಿಂದ ಮರುದಿನ ಬೆಳಿಗ್ಗೆ 10ಗಂಟೆಯವರೆಗೂ 24 ಗಂಟೆಗಳ ಧರಣಿ ಸತ್ಯಾಗ್ರಹವನ್ನು ಹೋರಾಟ ಸಮಿತಿ ಆಯೋಜಿಸಿತ್ತು. ಈ ಎರಡೂ ದಿನಗಳಲ್ಲಿ ಪದೇಪದೇ ಬಿಡದೆ ಸುರಿಯುವ ಮಳೆಯ ನಡುವೆಯೂ ನಗರ ಪಾಲಿಕೆ ಕಛೇರಿ ಮುಂಭಾಗದಲ್ಲಿ ನಡೆದ ಸತ್ಯಾಗ್ರಹಕ್ಕೆ ಜನಭೇಟಿ ಕೊಡುತ್ತಲೇ ಇದ್ದರು. ನಗರಪಾಲಿಕೆ ಕಛೇರಿ ಎದುರು ಮುಖ್ಯರಸ್ತೆಯೇ ಹಾದುಹೋಗುತ್ತಿದ್ದುದರಿಂದ ಅಲ್ಲಿ ಯಾವ ರೀತಿಯಲ್ಲಿ ಶೀಟುಗಳ ಚಪ್ಪರವನ್ನು ಹಾಕುವಂತಿರಲಿಲ್ಲ. ಧರಣಿ ಸತ್ಯಾಗ್ರಹ ಮೊದಲೇ ಘೋಷಿತವಾದುದರಿಂದ ಪೋಲೀಸರು ಪಾಲಿಕೆ ಕಟ್ಟಡದ ಮುಂಭಾಗದ ಗೇಟುಗಳನ್ನು ಹಾಕಿ ಗೇಟಿನ ಒಳಗೂ ಹೊರಗೂ ಕಾವಲು ಕಾಯುತ್ತಿದ್ದರು. ಹೊರಗೆ ಮಳೆ ಸುರಿಯುತ್ತಿದ್ದು, ಹಾಕಿದ್ದ ಗೇಟಿನ ಹೊರಭಾಗದ ಮೊಗಸಾಲೆಯಲ್ಲೇ ಸತ್ಯಾಗ್ರಹಿಗಳು ಸ್ವಲ್ಪ ಜನ ಧರಣಿ ನಿರತರಾಗಿದ್ದರೆ, ಹೆಚ್ಚಿನ ಜನ ಹೊರಗಿನ ದಾರಿ ಮೇಲೆ ಹಾಗೂ ರಸ್ತೆ ದಂಡೆಯನ್ನು ಆಶ್ರಯಿಸಿ ಕುಳಿತಿದ್ದರು. ರಸ್ತೆಯಲ್ಲಿ ನಿಲ್ಲಿಸಿದ್ದ ಆಟೋರಿಕ್ಷಾವೊಂದಕ್ಕೆ ಸೌಂಡ್ ಸಿಸ್ಟಂನ್ನು ಅಳವಡಿಸಿದ್ದರಿಂದ ಮೊಗಸಾಲೆಯ ಮುಂದಿನ ದಾರಿಯಲ್ಲಿ ನಿಲ್ಲಿಸಿದ್ದ ಮೈಕ್‌ನಲ್ಲಿ ಭಾಷಣಕಾರರು ಮಾಡುತ್ತಿದ್ದ ಭಾಷಣಗಳನ್ನು ಧರಣಿ ನಿರತರು ನಿಂತು ಕುಳಿತು ಆಲಿಸುತ್ತಿದ್ದರು.

ಧರಣಿಯನ್ನು ಉದ್ಘಾಟಿಸಿ ಮಹಾನಗರ ಪಾಲಿಕೆಯ ಹಿರಿಯ ಸದಸ್ಯ ಮರಿಯಮ್ಮ ಥಾಮಸ್ ಮಾತನಾಡಿದರು. ಸೂಕ್ತ [illegible]ಯವನ್ನು ಮಾಡದೆ ಬೀದಿ ಬದಿ ವ್ಯಾಪಾರಿಗಳನ್ನು ಎಬ್ಬಿಸಬಾರದು ಎಂಬುದಾಗಿ ಸುಪ್ರೀಂ ಕೋರ್ಟ್ ಈಗಾಗಲೇ ತೀರ್ಪು ನೀಡುವುದರಿಂದ, ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಆಗ್ರಹಿಸಿದರು. 199[illegible]ರಿಂದಲೂ ಮಂಗಳೂರಿನ ಬೀದಿಬದಿ ವ್ಯಾಪಾರಿಗಳ ಹಾಗೂ ರೈತ ಮಹಿಳೆಯರ ಹಕ್ಕುಗಳ ಹೋರಾಟಗಳಲ್ಲಿ ತೊಡಗಿಕೊಂಡಿರುವ ಪ್ರೊ: ರೀಟಾ ನೊರೊನ್ಹಾ ಮಾತನಾಡಿ, ಬೀದಿ ಬದಿ ವ್ಯಾಪಾರಿಗಳಿಗೆ 2009ರ ರಾಷ್ಟ್ರೀಯ ನೀತಿ ಪ್ರಕಾರ ಜನನಿಬಿಡ ಪ್ರದೇಶಗಳಲ್ಲಿ ನೈಸರ್ಗಿಕ ಮಾರುಕಟ್ಟೆಯ ರಚನೆಗೆ ಮಂಗಳೂರು ನಗರಪಾಲಿಕೆ ಮುಂದಾಗದೆ ಏಕಾಏಕಿಯಾಗಿ ಅವರನ್ನು ಎತ್ತಂಗಡಿ ಮಾಡುವ ಮೂಲಕ ಅವರ ಮಾನವಹಕ್ಕುಗಳನ್ನು ಉಲ್ಲಂಘಿಸಲಾಗಿದೆ ಎಂದು ಖಂಡಿಸಿದರು. 'ಸಾಂವಿಧಾನಿಕ ಚಳವಳಿ ಮಂಗಳೂರು' ಸಂಘಟನೆಯ ನಾಯಕಿಯೂ ಆಗಿರುವ ಅವರು, ಬೀದಿ ಬದಿ ವ್ಯಾಪಾರಿಗಳು ಇಂದು ತಮ್ಮ ಹಕ್ಕಿನ ಪ್ರಶ್ನೆಗಾಗಿ ಹೋರಾಟ ನಡೆಸುತ್ತಿದ್ದು, ಅವರಿಗೆ ಪರ್ಯಾಯ ವ್ಯವಸ್ಥೆಯನ್ನು ಬೀದಿಬದಿಯಲ್ಲೇ ಕಲ್ಪಿಸಬೇಕೆಂದು ಒತ್ತಾಯಿಸಿದರು.

ರಾತ್ರಿ ಹಗಲೂ ಹೋರಾಟ

ಸಿಪಿಎಂ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಜಿ.ಮಾಧವ, ಜೆಡಿ(ಎಸ್)ದ.ಕ. ಜಿಲ್ಲಾ ಕಾರ್ಯದರ್ಶಿ ಎಂ.ಜಿ.ಹೆಗಡೆ, ಎಡಿಸಿಸಿ ಸದಸ್ಯ ಹಾಗೂ ಜನಪರ ಹೋರಾಟಗಾರ ಸಿ.ವಿ.ಮೋಹನ್, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ಜಿಲ್ಲಾ ಸಂಚಾಲಕ ಎಸ್.ಪಿ. ಆನಂದ ಮೊದಲಾದವರು ಧರಣಿ ಸತ್ಯಾಗ್ರಹವನ್ನು ಬೆಂಬಲಿಸಿ ಮತನಾಡಿದರು. ರಾತ್ರಿ 10 ಗಂಟೆಯವರೆಗೂ ಭಾಷಣ, ಕ್ರಾಂತಿಗೀತೆಗಳು ಸಾಗುತ್ತಿದ್ದವು. ನಗರಪಾಲಿಕೆಯ ಕಾಂಗ್ರೆಸ್ ಹಾಗೂ ಜೆಡಿ(ಎಸ್) ಕಾರ್ಪೋರೇಟರ್ ಗಳಲ್ಲೂ ಅನೇಕರು ಬೆಂಬಲಿಸಿ ಮಾತನಾಡಿದರು. ಸಿಪಿ(ಐ)ಎಂ ಪಕ್ಷದ ನಗರಪಾಲಿಕೆ ಸದಸ್ಯೆ ಜಯಂತಿ ಬಿ.ಶೆಟ್ಟಿ ಅವರೂ ಉಪಸ್ಥಿತರಿದ್ದರು. ಹೋರಾಟಕ್ಕೆ ನೇತೃತ್ವ ನೀಡಿದ ಸಿಐಟಿಯು ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಮತ್ತು ಬೀದಿ ಬದಿ ವ್ಯಾಪಾರಸ್ಥರ ಸಂಘ ಗೌರವಾಧ್ಯಕ್ಷ ಸುನೀಲ್‌ಕುಮಾರ್ ಬಜಾಲ್. ಹೋರಾಟ ನಿರತರಿಗೆ ಸ್ಫೂರ್ತಿಯನ್ನು ಕೊಡುವ ಮಾತನಾಡಿದರು. ಅಲ್ಲದೆ ಬೀದಿಬದಿ ವ್ಯಾಪಾರಿಗಳನ್ನು ದಮನಮಾಡುವ ರಾಜಕೀಯದ ಸೂಕ್ಷ್ಮಗಳ ವಿವರ ನೀಡಿದರು. ಹೋರಾಟಗಾರರನ್ನು ಉದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಕೆ.ಯಾದವಶೆಟ್ಟಿ, ವಿಮಾ ನೌಕರರ ಸಂಘಟನೆಯ ರಾಘವೇಂದ್ರರಾವ್, ಬ್ಯಾಂಕ್ ಎಂಪ್ಲಾಯೀಸ್ ಫೆಡರೇಷನ್ನಿನ ಬಿ.ಎಂ.ಮಾಧವ, ಸಿಪಿಐ(ಎಂ) ಪಕ್ಷದ ಜೆ.ಬಾಲಕೃಷ್ಣಶೆಟ್ಟಿ, ಬೀಡಿ ಕಾರ್ಮಿಕ ಫೆಡರೇಷನ್ನಿನ ಸುಕುಮಾರ್, ವಿಚಾರವಾದಿ ಸಂಘದ ರಾಷ್ಟ್ರೀಯ ಅಧ್ಯಕ್ಷ ನರೇಂದ್ರ ನಾಯಕ್, ಅಖಿಲ ಭಾರತ ನ್ಯಾಯವಾದಿಗಳ ಸಂಘದ [illegible], ಜನವಾದಿ ಮಹಿಳಾ ಸಂಘಟನೆಯ ಭಾರತಿ ಬೋಳಾರ, ಡಿವೈಎಫ್ಐನ ಮುನೀರ್ ಕಾಟಿಪಳ್ಳ, ಎಸ್‌ಎಫ್‌ಐನ ಮನೋಜ್ ವಾಮಂಜೂರು, ಸಮುದಾಯದ ವಾಸುದೇವ ಉಚ್ಚಿಲ್, ಪ್ರಗತಿಪರ ಚಿಂತಕರ ವೇದಿಕೆಯ ಅಧ್ಯಕ್ಷ ಪಿ.ಎ.

ಪುಟ 15 ಕ್ಕೆ

ಸಿಎಜಿಯ ಇತ್ತೀಚಿನ 200 ಪುಟಗಳ ವರದಿ ಪೆಟ್ರೋಲಿಯಂ ವಲಯದ, ವಿಶೇಷವಾಗಿ ಅನಿಲ ಶೋಧನೆಯ ಕ್ಷೇತ್ರದಲ್ಲಿ, ಖಾಸಗೀ ಕಂಪನಿಗಳಿಗೆ ನೆರವಾಗುವ ಗಂಭೀರ ಅಕ್ರಮಗಳನ್ನು ಕಂಡು ಹಿಡಿದಿದೆ. ಇದು ಕಳೆದ ನಾಲ್ಕು ವರ್ಷಗಳಲ್ಲಿ ಎಡಪಕ್ಷಗಳ ಸಂಸತ್ ಸದಸ್ಯರು ಪೆಟ್ರೋಲಿಯಂ ಮತ್ತು ತೈಲ ಮಂತ್ರಿಗಳಿಗೆ ಬರೆದ ಏಳು ಪತ್ರಗಳಲ್ಲಿ ಮತ್ತು ಪ್ರಧಾನ ಮಂತ್ರಿಗಳಿಗೆ ಬರೆದ ಮೂರು ಪತ್ರಗಳಲ್ಲಿ ಎತ್ತಿದ ಸಂದೇಹಗಳನ್ನು ಪುಷ್ಟಿಗೊಳಿಸಿದೆ. ಇಂತಹ ಸಂದೇಹಗಳಿಗೆ ಸರಕಾರ ಯಾವುದೇ ಸ್ಫುಟವಾದ ಉತ್ತರವನ್ನೂ ನೀಡದೆ, ಅಥವ ಯಾವುದೇ ತನಿಖೆಯನ್ನೂ ನಡೆಸದೆ ದಿವ್ಯಮೌನ ವಹಿಸುವುದು ಈಗ ಈ ದೇಶದ ಹಣೆಬರೆಹವಾಗಿ ಬಿಟ್ಟಿದೆ ತಾನೇ! ಇದು ಚಮಚಾ ಬಂಡವಾಳಶಾಹಿ ದೇಶದಲ್ಲಿ ತರುತ್ತಿರುವ ಮಹಾವಿನಾಶದ ಇನ್ನೊಂದು ಉದಾಹರಣೆಯಲ್ಲದೆ ಬೇರೇನೂ ಅಲ್ಲ.

ಮತ್ತೊಂದು ಮಹಾ ಹಗರಣ: ಚಮಚಾ ಬಂಡವಾಳಶಾಹಿಗೆ ಸರಕಾರದ ಕೃಪಾಪೋಷಣೆ


('ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಜೂನ್ 20, 2011ರ ಸಂಚಿಕೆ.. ಸಂಪಾದಕೀಯ ಆಧರಿಸಿ)

ಮತ್ತೊಂದು ಹಗರಣ ಅನಾವರಣಗೊಳ್ಳಲು ಕಾದು ಕುಳಿತಿರುವಂತಿದೆ. ಭಾರತದ ಮಹಾಲೆಕ್ಕ ಪರಿಶೋಧಕರ(ಸಿ.ಎ.ಜಿ.) ದಿನಾಂಕ ಜೂನ್ 7, 2011 ರ 200 ಪುಟಗಳ ವರದಿ ಪೆಟ್ರೋಲಿಯಂ ವಲಯದ, ವಿಶೇಷವಾಗಿ ಅನಿಲ ಶೋಧನೆಯ ಕ್ಷೇತ್ರದಲ್ಲಿ, ಖಾಸಗೀ ಕಂಪನಿಗಳಿಗೆ ನೆರವಾಗುವ ಗಂಭೀರ ಅಕ್ರಮಗಳನ್ನು ಕಂಡು ಹಿಡಿದಿದೆ. ಈ ವರದಿಯ ಕೆಲವು ವಿವರಗಳು ಮಾಧ್ಯಮಗಳಲ್ಲಿ ವರದಿಯಾಗಿವೆ. ನಿಜ, ಇದು ಇನ್ನೂ ಸಂಬಂಧಪಟ್ಟ ಮಂತ್ರಾಲಯದ ಟಿಪ್ಪಣಿಗಳಿಗೆಂದು ಕಳಿಸಿರುವ ಕರಡು ವರದಿ. ಅದರ ಉತ್ತರದ ಆಧಾರದಲ್ಲಿ ಅಂತಿಮ ಆವೃತ್ತಿ ಸಂಸತ್ತಿನ ಮುಂದೆ ಬರುತ್ತದೆ– ದೂರಸಂಪರ್ಕ ಮಂತ್ರಾಲಯದ 2ಜಿ ತರಂಗಾಂತರ ಮಾರಾಟದ ಸಿಎಜಿ ವರದಿಯಂತೆ.

ಆದರೆ, ಸಿಎಜಿಗೆ ಕಂಡುಬಂದ ಅಂಶಗಳನ್ನು ಕುರಿತ ಮಾಧ್ಯಮ ವರದಿಗಳು ಕಳೆದ ನಾಲ್ಕು ವರ್ಷಗಳಲ್ಲಿ ಎಡಪಕ್ಷಗಳ ಸಂಸತ್ ಸದಸ್ಯರು ಎತ್ತಿದ ಸಂದೇಹಗಳನ್ನು ಪುಷ್ಟಿಗೊಳಿಸಿವೆ. ಡಿಸೆಂಬರ್ 12, 2006ರಂದು ಸಿಪಿಐ(ಎಂ) ಸಂಸತ್ ಸದಸ್ಯರಾದ ದಿವಂಗತ ಚಿತ್ತಬ್ರತ ಮಜುಂದಾರ್ ಮತ್ತು ತಪನ್ ಕುಮಾರ್ ಸೇನ್‌ರವರ ಪ್ರಶ್ನೆಗೆ ಆಗಿನ ತೈಲ ಮತ್ತು ನೈಸರ್ಗಿಕ ಅನಿಲ ಇಲಾಖೆಯ ರಾಜ್ಯಮಂತ್ರಿಗಳ ಉತ್ತರ ನಿಜಸಂಗತಿಯನ್ನು ಬಯಲು ಮಾಡಿತು– ಸರಕಾರ ಭಾರೀ ಪ್ರಮಾಣದಲ್ಲಿ ಆದಾಯವನ್ನು ಕಳಕೊಳ್ಳುವ ಸಾಧ್ಯತೆಯ ಸೂಚನೆ ಅದರಲ್ಲಿ ಕಂಡು ಬಂತು. ಡಿಸೆಂಬರ್ 21, 2006 ರಂದು ಸಿಪಿಐ(ಎಂ) ಸಂಸತ್ ಸದಸ್ಯ ತಪನ್ ಸೇನ್ ಆಗಿನ ಸಂಪುಟ ದರ್ಜೆಯ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಸರಕಾರ ಹೇಗೆ ಅಪಾರ ಆದಾಯಗಳನ್ನು ಕಳಕೊಳ್ಳಬಹುದು ಎಂಬುದನ್ನು ವಿವರಿಸಿದ್ದರು:

"ಮೇಲೆ ಹೇಳಿದ ಉತ್ತರದ ಭಾಗ (ಸಿ) ಮತ್ತು (ಡಿ)ಯಲ್ಲಿ ರಿಲಯಂಸ್ ಇಂಡಸ್ಟ್ರೀಸ್ ಲಿಮಿಟೆಡ್(ಆರ್‌ಐಎಲ್) ಮತ್ತು ನಿಕೊ ಈ ಎರಡು ಕಂಪನಿಗಳ ಕೂಟ ಅನಿಲ ಉತ್ಪಾದನೆಯನ್ನು 40ರಿಂದ 80 ಎಂಎಂಎಸ್‌ಸಿಎಂಡಿ(ಒಂದು ಅಳತೆ)ಗೇರಿಸುವ ಮತ್ತು ಬಂಡವಾಳ ಖರ್ಚನ್ನು 2.47 ಬಿಲಿಯ ಡಾಲರುಗಳಿಂದ 8.84 ಬಿಲಿಯ ಡಾಲರುಗಳಿಗೇರಿಸುವ ಒಂದು ಅಧಿಕ ಅಂಶವನ್ನು ಅಭಿವೃದ್ಧಿ ಯೋಜನೆಗೆ ಸೇರಿಸಿ ಮಂಡಿಸಿತ್ತು. ಉತ್ಪಾದನೆಯ ಪ್ರಮಾಣ ಹೆಚ್ಚಾದಾಗ ಉತ್ಪಾದನೆಯ ಖರ್ಚಿನ ದರ ಸಾಮಾನ್ಯವಾಗಿ ಇಳಿಯುತ್ತದೆ. ಬಹಳ ಆಶ್ಚರ್ಯದ ಸಂಗತಿಯೆಂದರೆ, ಇಲ್ಲಿ ಅದು ಹೆಚ್ಚಿದೆ. ಈ ಬ್ಲಾಕನ್ನು ಈ ಕೂಟಕ್ಕೆ ನೀಡಿದ್ದು ಭಾರತ ಸರಕಾರದೊಂದಿಗೆ ಲಾಭದ ಹಂಚಿಕೆಯ ಆಧಾರದಲ್ಲಿ. ಆದ್ದರಿಂದ 'ಚಿನ್ನದ ಲೇಪನ'ದ ಅಂದರೆ, ಬಂಡವಾಳ ಖರ್ಚನ್ನು ಹಿಗ್ಗಿಸಿ ಕೊಟ್ಟಿರುವ ಬಲವಾದ ಸಾಧ್ಯತೆ ಇದೆ. ಭಾರತ ಸರಕಾರದೊಂದಿಗೆ ಲಾಭವನ್ನು ಹಂಚಿಕೊಳ್ಳುವ ಮೊದಲು ಈ ಕೂಟ ಹೀಗೆ ಹಿಗ್ಗಿಸಿದ ಖರ್ಚನ್ನು ಮುರಿದುಕೊಂಡೇ ಲೆಕ್ಕಹಾಕುತ್ತದೆ. ಆದ್ದರಿಂದ ಬಂಡವಾಳ ಖರ್ಚಿನ ಇಂತಹ ಚಿನ್ನದ ಲೇಪನದಿಂದ ಸರಕಾರದ ಪಾಲು ಗಮನಾರ್ಹವಾಗಿ ಇಳಿಯುತ್ತದೆ. ಆದ್ದರಿಂದ ಪ್ರಸ್ತಾವಿತ ಬಂಡವಾಳ ಹೂಡಿಕೆಯನ್ನು ಪ್ರಸಕ್ತ ತಪ್ಪೆಣಿಕೆಯ ಅನಿಲ ಬೆಲೆಗಳ ಹಿನ್ನೆಲೆಯಲ್ಲಿ ಭಾರತ ಸರಕಾರದ ಪಾಲಿನ ಲಾಭಕ್ಕೆ ಸಂಬಂಧಿಸಿದಂತೆ ತಕ್ಷಣವೇ ಮರು ಪರೀಕ್ಷಿಸುವುದು ಅನಿವಾರ್ಯವಾಗಿದೆ.

ಭಾರತ ಸರಕಾರದ, ಅರ್ಥಾತ್ ಅನಿಲದಂತಹ ನೈಸರ್ಗಿಕ ಸಂಪನ್ಮೂಲದ ಒಡೆಯರಾದ ಈ ದೇಶದ ಜನತೆಯ ಪಾಲನ್ನು ಕಿತ್ತುಕೊಂಡು ಹೆಚ್ಚಿನ ಲಾಭ/ಪ್ರಯೋಜನ ಪಡೆಯುವುದನ್ನು ನಿಷೇಧಿಸಲು ತಕ್ಷಣವೇ ಖರ್ಚಿನ ಪಾರದರ್ಶಕ ಮೌಲ್ಯಮಾಪನಕ್ಕೆ ಆದೇಶ ನೀಡಬೇಕು ಎಂದು ನಿಮ್ಮನ್ನು ವಿನಂತಿಸಿಕೊಳ್ಳುತ್ತೇನೆ."



ಹೊಸ ಹಣೆಬರಹ

ಇಂತಹ ವೀಕ್ಷಣೆಗಳಿಗೆ, ಯಾವುದೇ ಸ್ಫುಟವಾದ ಉತ್ತರವೂ ಇಲ್ಲ, ಅಥವ ಸರಕಾರದಿಂದ ಯಾವುದೇ ತನಿಖೆಯೂ ಇಲ್ಲ– ಇದು ಈಗ ಈ ದೇಶದ ಹಣೆಬರೆಹವಾಗಿ ಬಿಟ್ಟಿದೆ ತಾನೇ! ಸಿಪಿಐ(ಎಂ) ಸಂಸತ್ ಸದಸ್ಯರು ಒಟ್ಟು ಏಳು ಪತ್ರಗಳನ್ನು ಪೆಟ್ರೋಲಿಯಂ ಮತ್ತು ತೈಲ ಮಂತ್ರಿಗಳಿಗೆ ಮತ್ತು ಮೂರು ಪತ್ರಗಳನ್ನು ಪ್ರಧಾನ ಮಂತ್ರಿಗಳಿಗೆ ಬರೆದಿದ್ದಾರೆ. ಇಂತಹ ಮೋಸ ನಿಜವಾಗಿಯೂ ನಡೆದಿದೆ ಎಂಬುದನ್ನು ಈಗ ಸಿಎಜಿ ತನ್ನ ಪ್ರಾಥಮಿಕ ಪತ್ತೆಗಳಿಂದ ದೃಢಪಡಿಸಿದೆ.

ಇದು ಖಾಸಗೀ ಕಂಪನಿಗಳು ಸರಕಾರದ ರೆವಿನ್ಯೂ ಆದಾಯಕ್ಕೆ ಕನ್ನ ಹಾಕಿ ಅನಿರೀಕ್ಷಿತ ಸೂಪರ್ ಲಾಭಗಳನ್ನು ದೋಚುವ ಇನ್ನೊಂದು ಉದಾಹರಣೆ ಎಂಬುದು ಸ್ಪಷ್ಟ. ಸಿಎಜಿ ಈ ಕಾಂಟ್ರಾಕ್ಟ್‌ನ ಉಸ್ತುವಾರಿಯಲ್ಲಿ ಅಥವ ಅದರ ಪ್ರಮುಖ ಅಂಶಗಳಿಗೆ ಮಂಜೂರಾತಿ ನೀಡುವಲ್ಲಿ 'ಹೈಡ್ರೊಕಾರ್ಬನ್ ಮಹಾನಿರ್ದೇಶನಾಲಯ' (ಡಿಜಿಹೆಚ್)ದ ಪಾತ್ರವನ್ನು ಪ್ರಶ್ನಿಸಿದೆ. ಇದು 'ಚಮಚಾ ಬಂಡವಾಳಶಾಹಿ' ಬಯಲಿಗೆ ಬಂದಿರುವ ಇನ್ನೊಂದು ಉದಾಹರಣೆಯಲ್ಲದೆ ಬೇರೇನೂ ಅಲ್ಲ. ನವ–ಉದಾರವಾದಿ ಆರ್ಥಿಕ ಸುಧಾರಣೆಗಳು ಚಮಚಾ ಬಂಡವಾಳಶಾಹಿಯನ್ನು ಸಮೃದ್ಧವಾಗಿ ಬೆಳೆಸುವ ಮೂಲಕ ಭ್ರಷ್ಟಾಚಾರಕ್ಕೆ ಇದುವರೆಗೆ ಗೊತ್ತಿರದ ಮಾರ್ಗಗಳನ್ನು ತೆರೆದುಕೊಟ್ಟಿದೆ ಎಂಬುದನ್ನು ಇತ್ತೀಚಿನ ವರ್ಷಗಳಲ್ಲಿ ನೋಡಿದ್ದೇವೆ. ಭಾರತಕ್ಕೆ ತನ್ನ ಎಲ್ಲಾ ಜನರಿಗೂ ಶಿಕ್ಷಣ, ಆರೋಗ್ಯ ಮತ್ತು ಉತ್ತಮ ಜೀವನ ಒದಗಿಸಲು ಸಂಪನ್ಮೂಲಗಳ ಕೊರತೆಯಿಲ್ಲ. ಆದರೆ, ಭ್ರಷ್ಟಾಚಾರ, ಈ ಸಂಪನ್ಮೂಲಗಳನ್ನು ಲೂಟಿ ಹೊಡೆದು 'ಆಮ್ ಆದ್ಮಿ'ಗೆ ಒಂದು ಉತ್ತಮ ಜೀವನ ಸಿಗದಂತೆ ವಂಚಿಸುತ್ತಿದೆ. ಈ ಪ್ರಕ್ರಿಯೆಯಲ್ಲಿ, ಇಂತಹ ಭ್ರಷ್ಟಾಚಾರ, ವಾಸ್ತವವಾಗಿ, ಭಾರತ ತನ್ನ ಅಪಾರ ಸಾಧ್ಯತೆಗಳನ್ನು ಈಡೇರಿಸಿಕೊಳ್ಳದಂತೆ ವಂಚಿಸುತ್ತಿದೆ.

ಸುಲಿಗೆಗೆ ಉತ್ತೇಜನೆ

ಲಾಭವನ್ನು ಗರಿಷ್ಟಗೊಳಿಸುವುದು ಬಂಡವಾಳಶಾಹಿಯ ಜೀವಾಳ. ಇದನ್ನು ಸಾಧಿಸಲು ಅದು ಯಾವ ಮಟ್ಟಕ್ಕೂ ಹೋಗಬಲ್ಲದು, ಸತತವಾಗಿ ಎಲ್ಲಾ ಕಾನೂನುಗಳನ್ನು ಉಲ್ಲಂಘಿಸಬಲ್ಲುದು, ಎಲ್ಲಾ ನಿಯಂತ್ರಣಗಳನ್ನು ಮುರಿಯಬಲ್ಲುದು, ವ್ಯವಸ್ಥೆಯನ್ನೇ ಬುಡಮೇಲು ಮಾಡಬಲ್ಲುದು. ಈ ಸುಲಿಗೆಕೋರ ಪ್ರವೃತ್ತಿಯನ್ನು ತಡೆಯುವ ಬದಲು ಚಮಚಾಗಳನ್ನು ಪ್ರೋತ್ಸಾಹಿಸಿ ಉತ್ತೇಜಿಸುವ ಒಂದು ಸರಕಾರ, ಚಮಚಾ ಬಂಡವಾಳಶಾಹಿಯನ್ನು ಪೋಷಿಸುವ ಸರಕಾರ. ನವ–ಉದಾರವಾದ ತೆರೆದು ಕೊಟ್ಟಿರುವ ಭ್ರಷ್ಟಾಚಾರದ ಇಂತಹ ಹೊಸ ಮಾರ್ಗಗಳು, ಅವುಗಳ ಜೊತೆಗೆ ಈ ಚಮಚಾ ಬಂಡವಾಳಶಾಹಿ ದೇಶದಲ್ಲಿ ಮಹಾ ವಿನಾಶವನ್ನೇ ತರುತ್ತಿದೆ.

ಇಂತಹ ವಂಚಕ ವ್ಯವಹಾರಗಳಲ್ಲಿ ತೊಡಗಿರುವವವರ ವಿರುದ್ಧ ಅವರು ಅವನ್ನು ಮತ್ತೆ ಎಸಗದಂತೆ ಮಾಡುವ ಕ್ರಮಗಳನ್ನು ಕೈಗೊಂಡು ಚಮಚಾ ಬಂಡವಾಳಶಾಹಿಯ ಇಂತಹ ಅಭಿವ್ಯಕ್ತಿಗಳನ್ನು ನಿರ್ಮೂಲ ಗೊಳಿಸಬೇಕಾಗಿದೆ ಎಂಬ ಸಂಗತಿಯತ್ತ ನಾವು ಈ ಅಂಕಣದಲ್ಲಿ ಮತ್ತೆ–ಮತ್ತೆ ಗಮನ ಸೆಳೆದಿದ್ದೇವೆ. ಈಗಾಗಲೇ, ಇಂತಹ ಹಗರಣಗಳ ಸರಣಿ ನಮ್ಮ ಸಂಪನ್ಮೂಲಗಳ ಒಂದು ಬೃಹತ್ ಭಾಗವನ್ನು ಲೂಟಿ ಹೊಡೆದಿದೆ. ಇದರ ಬದಲು, ಇವನ್ನು ನಮ್ಮ ಜನತೆಯ ಕಲ್ಯಾಣಕ್ಕೆ ಬಳಸಿದ್ದರೆ, ಖಂಡಿತವಾಗಿಯೂ, ಭಾರತ ತನ್ನ ಜನತೆಗೆ ಎಷ್ಟೋ ಪಟ್ಟು ಉತ್ತಮ ಬದುಕಿನ ಮಟ್ಟವನ್ನು ಕೊಟ್ಟಿರುವ ಜಾಗತಿಕ ಮುಖಂಡ ದೇಶಗಳಲ್ಲಿ ಒಂದಾಗಿರಬಹುದಿತ್ತು. ಈಗ ಭ್ರಷ್ಟಾಚಾರದ ವಿರುದ್ಧ ನಡೆದಿರುವ ಸಮರ ಮಹತ್ವಪೂರ್ಣ ನೈತಿಕ ಆಯಾಮ ಹೊಂದಿದೆ ಎಂಬುದು ನಿಜ. ಆದರೆ ಅದು ಭೌತಿಕವಾಗಿ ಉತ್ತಮವಾದ ಭಾರತವನ್ನು ನಿರ್ಮಿಸುವ ಚೈತನ್ಯವೂ ಆಗಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ರಾಷ್ಟ್ರೀಯ ಸಂಪನ್ಮೂಲಗಳ ಪಾಲಿನಿಂದ ಬಡವರನ್ನು ವಂಚಿಸುವ ಹುನ್ನಾರ

ಏನೇ ಆಗಲಿ ರೇಷನ್ ವ್ಯವಸ್ಥೆಯನ್ನು ಸಾಧ್ಯವಾದಷ್ಟು ಜನರಿಗೆ ವಂಚಿಸಬೇಕು.ಸರಕಾರದ ಮೇಲೆ ಇದೊಂದು ದೊಡ್ಡ ಹೊರೆ ಎಂಬುದು ನಮ್ಮ ಆಳುವವರ ಚಿಂತನೆ, ಧೋರಣೆ. ಅದಕ್ಕೆ ನೂರೆಂಟು ತಂತ್ರಗಳು, ವಾದಗಳು. ಎಲ್ಲರಿಗೂ ಪಡಿತರ ಆಹಾರ ಸಿಕ್ಕರೆ ಜನರ ಹಸಿವು ಇರುವುದಿಲ್ಲವೇ? ದೇಶದ ಆಹಾರ ಭದ್ರತೆ ಹೆಚ್ಚುವುದಿಲ್ಲವೇ? ಅಪಾರ ಆಹಾರ ಗೋದಾಮಿಗಳಲ್ಲಿ ಹುಳು ಹುಪ್ಪಟಗಳ ಪಾಲಾಗುವುದು ತಪ್ಪುವುದಿಲ್ಲವೇ?

ಬಡವರಿಗೆ ನೆರವಾಗುವುದೇ ಬಿಪಿಎಲ್ ಗಣತಿ?

ಬೃಂದಾ ಕಾರಟ್ | ಸಂಗ್ರಹಾನುವಾದ - ವಿಶ್ವ ಕುಂದಾಪುರ

ದೇಶದ ಆಯ್ದ ಕೆಲವೇ ರಾಜ್ಯಗಳಲ್ಲಿ 2011ರ ಗ್ರಾಮೀಣ ಪ್ರದೇಶಗಳ ಬಿಪಿಎಲ್ ಗಣತಿ ಜೂನ್ ತಿಂಗಳಲ್ಲಿ ಆರಂಭ ವಾಗಲಿದೆ. ಮೊದಲಿಗೆ ತ್ರಿಪುರಾದಲ್ಲಿ ಈ ಕಾರ್ಯ ನಡೆಯಲಿದೆ. ಪ್ರತಿರಾಜ್ಯದಲ್ಲಿನ ಬಡವರ ಸಂಖ್ಯೆಯನ್ನು ಯೋಜನಾ ಆಯೋಗ ಈಗಾಗಲೇ ನಿರ್ಧರಿಸಿದೆ. ಉದಾಹರಣೆಗೆ ತ್ರಿಪುರಾದಲ್ಲಿ ಬಿಪಿಎಲ್ ಗಣತಿಯ ನಂತರ ಎಷ್ಟು ಬಡಜನರಿದ್ದಾರೆ ಎಂದು ಗುರುತಿಸಿದ್ದಾಗ್ಯೂ, ಆ ರಾಜ್ಯದ ಕೇವಲ ಶೇ.49 ಮಂದಿಗೆ (ರಾಜ್ಯಗಳ ಪಟ್ಟಿ ನೋಡಿ) ಬಿಪಿಎಲ್ ಕಾರ್ಡ್‌ಗಳನ್ನು ನೀಡಲಾಗುವುದು. ಹೀಗಾಗಿ ಬಾರೀ ಪ್ರಮಾದ ಉಳಿದು ಹೋಗುತ್ತದೆ. ಯೋಜನಾ ಆಯೋಗವು ತನ್ನ ಬೋಗಸ್ ಅಂದಾಜಿನ ಆಧಾರದಲ್ಲಿ ಪ್ರತಿ ರಾಜ್ಯದ ಸಂಖ್ಯೆಯನ್ನು (ಬಡತನ ಕೋಟಾ) ನಿರ್ಧರಿಸುತ್ತದೆ. ಅದೇ ವೇಳೆಗೆ ಕೇಂದ್ರದ ಗ್ರಾಮೀಣಾಭಿವೃದ್ಧಿ ಖಾತೆ ಹಾಗೂ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವಾಲಯಗಳು ಈ ಸಂಖ್ಯೆಯಲ್ಲಿ ಯಾರನ್ನು ಸೇರಿಸಬೇಕು ಎಂದು ಗುರುತಿಸುತ್ತವೆ.

ಭಾರತದಂಥ ಅಸಂಖ್ಯಾತ ಬಡಜನರು ಇರುವ ದೇಶವೊಂದರಲ್ಲಿ ಬಡವರನ್ನು ಲೆಕ್ಕ ಹಾಕುವ ಪ್ರಕ್ರಿಯೆಯು ಸಾರ್ವತ್ರಿಕ ಹಕ್ಕುಗಳ ಮೇಲೆ ದಾಳಿ ನಡೆಸುವುದಕ್ಕೆ ಗುರಿಯಾಗಿಸಿಕೊಂಡು ರೂಪಿಸುವ ಅಮಾನವೀಯ ನೀತಿಗಳಿಗೆ ಎಡೆ ಮಾಡುವುದಕ್ಕೆ ಅನುಕೂಲವಾಗುವಂತೆ ತಪ್ಪು ಲೆಕ್ಕಾಚಾರ ಹಾಗೂ ಬಡವರನ್ನು ಒಡೆಯುವ ಕ್ರಿಯೆಗೆ ಆಸ್ಪದ ಮಾಡಿಕೊಡುತ್ತದೆ.

ಆದರೆ, ಅದು ಪ್ರಸಕ್ತ ಆರ್ಥಿಕ ನೀತಿಯ ಚೌಕಟ್ಟಿನ ಅಂಗವಾಗಿರುವುದರಿಂದ ಗಣತಿಯ ನಿಜವಾದ ಹುನ್ನಾರವನ್ನು ಗಮನಹರಿಸುವುದು ಅವಶ್ಯ.



ಬಿಪಿಎಲ್ ಪ್ರಶ್ನಾವಳಿ:

ಗ್ರಾಮೀಣ ಬಿಪಿಎಲ್ ಪ್ರಶ್ನಾವಳಿ ಆಗಲೇ ಸಿದ್ಧಗೊಂಡಿದೆ. ಆದರೆ ನಗರ ಬಿಪಿಎಲ್ ಪ್ರಶ್ನಾವಳಿ ಇನ್ನೂ ಅಂತಿಮಗೊಳ್ಳಬೇಕಿದೆ. ಬಡವರನ್ನು ಗುರುತಿಸಲು ಗ್ರಾಮೀಣಾಭಿವೃದ್ಧಿ ಇಲಾಖೆ ಬಳಸುತ್ತಿದ್ದ ಹಿಂದಿನ ಪ್ರಶ್ನಾವಳಿಗೆ ವ್ಯಾಪಕ ಟೀಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಅದರಲ್ಲಿನ ಸಮಸ್ಯೆಗಳನ್ನು ನಿವಾರಿಸುವುದಾಗಿ ಸರ್ಕಾರ ಸಂಸತ್ತಿನಲ್ಲಿ ಆಶ್ವಾಸನೆ ನೀಡಿತ್ತು.

ಹೊಸ ಪ್ರಶ್ನಾವಳಿಯನ್ವಯ 260ಕ್ಕೂ ಹೆಚ್ಚು ಗ್ರಾಮಗಳಲ್ಲಿ ಮಾದರಿ ಅಧ್ಯಯನವೂ ಸೇರಿದಂತೆ ವ್ಯಾಪಕ ಚಟುವಟಿಕೆಯನ್ನು ನಡೆಸಲಾಗಿದೆ. ಮನುಷ್ಯನೊಬ್ಬ ದಿನದಲ್ಲಿ ಎಷ್ಟು ಬಾರಿ ಊಟ ಮಾಡುತ್ತಾನೆ. ಅಥವಾ ಮಹಿಳೆಯ ಬಳಿ ಎಷ್ಟು ಸೀರೆಗಳಿವೆ ಎಂಬ ಕೆಲವು ಅತ್ಯಂತ ಆಕ್ಷೇಪಾರ್ಹ ಅಂಶಗಳು 2002ರ ಪ್ರಶ್ನಾವಳಿಯಲ್ಲಿ ಒಳಗೊಂಡಿದ್ದವು. ಬಿಪಿಎಲ್ ವರ್ಗೀಕರಣವನ್ನು ನಿರ್ಧರಿಸಕ್ಕಾಗಿ ಈ ಪ್ರಶ್ನೆಗಳನ್ನು ಕೇಳಲಾಗುತ್ತಿತ್ತು. ಒಂದೇ ಊಟ ಮಾಡುತ್ತಿದ್ದರೆ ಅಥವಾ ಒಂದೇ ಸೀರೆ ಹೊಂದಿದ್ದರೆ ಅಂಥವರನ್ನು ಬಿಪಿಎಲ್ ವಿಭಾಗಕ್ಕೆ ಪರಿಗಣಿಸಲಾಗುತ್ತಿತ್ತು. ಇದೀಗ ಈ ಆಕ್ಷೇಪಾರ್ಹ ಪ್ರಶ್ನೆಗಳನ್ನು ತೆಗೆದುಹಾಕಿರುವುದನ್ನು ಹೊರತುಪಡಿಸಿದರೆ ಬಡವರನ್ನು ಗುರುತಿಸಲು ರೂಪಿಸಿರುವ ವಿಧಾನ ತೀರಾ ಪ್ರಶ್ನಾರ್ಹವಾಗಿದೆ.

ಈ ವಿಧಾನವು ಸ್ವಯಂ ಚಾಲಿತ ಹೊರತುಪಡಿಸುವಿಕೆ (ಆಟೋಮ್ಯಾಟಿಕ್ ಎಕ್ಸ್‌ಕ್ಲ್ಯೂಶನ್) ವಿಭಾಗ ಮತ್ತು ಸ್ವಯಂ ಚಾಲಿತ ಅಂತರ್ಗತ (ಆಟೋಮ್ಯಾಟಿಕ್ ಇನ್‌ಕ್ಲ್ಯೂಶನ್) ವಿಭಾಗಗಳನ್ನು ಒಳಗೊಂಡಿದ್ದು, ಅವು ಹೊಸ ಸೇರ್ಪಡೆಗಳಾಗಿವೆ. ಆದರೆ ಅದು ಇತರರಿಗೆ ರ್‍ಯಾಂಕಿಂಗ್ ವ್ಯವಸ್ಥೆಯನ್ನು ಹಾಗೇ ಉಳಿಸಿಕೊಂಡಿದೆ. 2002ರ ಬಿಪಿಎಲ್ ಪ್ರಶ್ನಾವಳಿಯಲ್ಲಿ 13 ಪ್ರಶ್ನೆಗಳಿದ್ದು ಪ್ರತಿಯೊಂದಕ್ಕೆ 0–4 ಅಂಕಗಳಿದ್ದು, ಒಟ್ಟು ಅಂಕ 0–52 ಆಗಿತ್ತು. ಬರೀ 0 ಆಗಿದ್ದರೆ ಕಡು ಬಡವರು ಎಂದು ಪರಿಗಣಿಸ ಲಾಗುತ್ತಿತ್ತು. ಈಗಿನ ಪ್ರಶ್ನಾವಳಿಯಲ್ಲಿ ಏಳು ಪ್ರಶ್ನೆಗಳಿದ್ದು 0–7 ಅಂಕಗಳಿವೆ 7 ಅಂಕವು ಕಡು ಬಡತವನ್ನು ಸಂಕೇತಿಸುತ್ತದೆ.

ಹೊರಗಿಡುವ ಹುನ್ನಾರ :

ಗ್ರಾಮೀಣ ಭಾರತದಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳ ವಾಸ್ತವತೆಯನ್ನು ಪರಿಗಣಿಸಿದಾಗ ಹಾಗೂ ಗ್ರಾಮೀಣ ಶ್ರೀಮಂತರು, ದೊಡ್ಡ ಭೂ ಮಾಲೀಕರು ಮತ್ತು ರೈತರು, ದೊಡ್ಡ ವ್ಯಾಪಾರಸ್ಥರು ಮತ್ತು ಗುತ್ತಿಗೆದಾರರ ಅಸ್ತಿತ್ವನ್ನು ಗಣನೆಗೆ ತೆಗೆದುಕೊಂಡರೆ ಬಿಪಿಎಲ್ ಗಣತಿಯ ಅತಿ ಸುಲಭವಾಗಿ ಪರಿಶೀಲಿಸಬಹುದಾದ ಹೊರತುಪಡಿಸುವಿಕೆ ವಿಭಾಗವು ತೀರಾ ಆಕ್ಷೇಪಾರ್ಹದಾದುದಾಗಿದೆ. ಆದರೆ ಹೊರತುಪಡಿಸುವಿಕೆ ವಿಭಾಗವನ್ನು ವಾಸ್ತವಕ್ಕಿಂತ ಇನ್ನಷ್ಟು ಹಿಗ್ಗಿಸುವ ದೃಷ್ಟಿಯಿಂದ ಈಗಿನ ಮಾನದಂಡವನ್ನು ರೂಪಿಸಿರುವಂತೆ ಕಾಣುತ್ತದೆ.

ಹೊರಗಿಡುವ 'ಗುರಿ'ಯನ್ನು ಗ್ರಾಮೀಣ ಜನಸಂಖ್ಯೆಯ ಪ್ರತಿಶತ 30 ರಷ್ಟಕ್ಕೆ ನಿಗದಿಪಡಿಸಲಾಗಿದೆ ಎಂದು ಹೇಳಲಾಗಿದೆ. ಇದು ಪ್ರಸಕ್ತ ಎಕ್ಸ್‌ಕ್ಲ್ಯೂಶನ್ ವಿಭಾಗದ ಆಧಾರದಲ್ಲಿ ನಡೆಸಿದ ಮಾದರಿ ಅಧ್ಯಯನದಲ್ಲಿ ಗುರುತಿಸಲಾದ ಪ್ರತಿಶತದಷ್ಟಾಗುತ್ತದೆ. ಹೊರತುಪಡಿಸುವಿಕೆ ಪಟ್ಟಿಯಿಂದ ಸರ್ಕಾರಿ ನೌಕರರನ್ನು, ಆದಾಯ ತೆರಿಗೆದಾರರನ್ನು, ಟ್ರ್ಯಾಕ್ಟರ್ ಮಾಲೀಕರನ್ನು ಅಥವಾ ಕಿಸಾನ್ ಕ್ರೆಡಿಟ್ ಕಾರ್ಡ್ ಹೊಂದಿರುವವರನ್ನು (ರೂ.50ಸಾವಿರವರೆಗಿನ ಸಾಲದಾರರು)

ಪುಟ 9 ಕ್ಕೆ

ಭಿಕ್ಷುಕರಲ್ಲದವರಿಗೆ ಯಾಕೆ ರೇಷನ್ ಭಿಕ್ಷೆ ಅಲ್ಲವೇ?

ಒಂದೆಡೆ ಹೊರಗಿಡುವಿಕೆ ಪಟ್ಟಿ ಹೇಗೆ ಅವೈಜ್ಞಾನಿಕವೋ ಅದೇ ರೀತಿ ಸ್ವಯಂ ಚಾಲಿತ ಅಂತರ್ಗತ ಪಟ್ಟಿಯೂ ಅಷ್ಟೇ ಅಸಂಬಂಧವೂ ಅಸಂಗತವೂ ಆಗಿದೆ. ಎಷ್ಟು ಅಸಂಗತ ಹಾಗೂ ಸಂಕುಚಿತವಾದುದೆಂದರೆ ಗ್ರಾಮೀಣ ಬಡವರ ಪ್ರತಿಶತ ಇದರಷ್ಟನ್ನು ಕೂಡ ಅದು ಒಳಗೊಳ್ಳುವ ಸಂಭವವಿಲ್ಲ. ಅನಾಥ ಜನರು ಭಿಕ್ಷೆಯಿಂದ ಜೀವನ ಸಾಗಿಸುತ್ತಾರೆ ಎಂದು ವ್ಯಾಖ್ಯಾನಿಸಲಾಗಿದೆ. ಹೀಗಾಗಿ ಅವರು ಸ್ವಯಂಚಾಲಿತ ಪಟ್ಟಿಗೆ ಸೇರುತ್ತಾರೆ. ಆದರೆ, ಉದಾಹರಣೆಗಾಗಿ, ಇಬ್ಬರು ಹಿರಿಯ ನಾಗರೀಕರ ಕುಟುಂಬ ವೊಂದಿದೆ ಎಂದಿಟ್ಟುಕೊಳ್ಳೋಣ. ಅವರು ಜೀವನೋಪಾಯಕ್ಕಾಗಿ ತಿಂಗಳಲ್ಲಿ ನಾಲ್ಕರಿಂದ ಐದು ದಿನ ಕೆಲಸ ಮಾಡುವ ಒತ್ತಡಕ್ಕೊಳಗಾದರೆ ಅವರನ್ನು 'ಅನಾಥರು' ಎಂದು ಪರಿಗಣಿ ಸುವುದಿಲ್ಲ. ಯಾಕೆಂದರೆ ಅವರು 'ಭಿಕ್ಷೆ' ಬೇಡುವುದಿಲ್ಲ.

'ಕಾನೂನುಬದ್ಧವಾಗಿ ಬಿಡುಗಡೆಯಾದ ಜೀತದಾಳು' ಇಂಥ ಇನ್ನೊಂದು ವಿಚಿತ್ರ ಅಂಶ. ಕಾನೂನುಬದ್ಧವಾಗಿ ಬಿಡುಗಡೆಯಾದ ಜೀತದಾಳುಗಳನ್ನು ಸ್ವಯಂಚಾಲಿತ ಅಂತರ್ಗತ ಪಟ್ಟಿಯಲ್ಲಿ ಸೇರಿಸಲಾಗುತ್ತದೆ. ಒಂದು ವೇಳೆ ಜೀತದಾಳು ತಪ್ಪಿಸಿಕೊಂಡು ಪಲಾಯನ ಮಾಡಿದ್ದರೆ, ಅಂಥವರು 'ಕಾನೂನು ಬದ್ಧವಾಗಿ ಬಿಡುಗಡೆ ಗೊಂಡವರು' ಎಂದು ಪರಿಗಣಿಸ ಲಾಗುವುದಿಲ್ಲ; ಹೀಗಾಗಿ ಅವರು ಸ್ವಯಂಚಾಲಿತವಾಗಿ ಅಂತರ್ಗತಗೊಳ್ಳುವ ಹಕ್ಕನ್ನು ಹೊಂದಿರುವುದಿಲ್ಲ. "ವಸತಿಯಿಲ್ಲದ ಕುಟುಂಬಗಳು, ದೈಹಿಕ ವಾಗಿ ಮಲ ಹೊರುವವರು ಮತ್ತು ಮೂಲ ಬುಡಕಟ್ಟು ಗುಂಪುಗಳು" ಅಂತರ್ಗತಪಟ್ಟಿಯಲ್ಲಿ ಬರುವ ಇತರ ವರ್ಗಗಳು.

ಈ ಐದಂಶದ ಸ್ವಯಂಚಾಲಿತ ಅಂತರ್ಗತ ವಿಭಾಗವು ಸಾಮಾಜಿಕ ವಾಸ್ತವತೆಯ ಅಣಕವಾಗಿದೆ. ಯಾಕೆಂದರೆ ಅದು ಎಸ್‌ಸಿ/ಎಸ್‌ಟಿ, ಅಂಗವಿಕಲರು, ವಿಧವೆಯರು, ಕ್ಯಾಷುಯಲ್ ದೈಹಿಕ ಕಾರ್ಮಿಕರು ಇತ್ಯಾದಿ ಯಾವುದೇ ಸಾಮಾಜಿಕ ವಿಭಾಗಗಳನ್ನು ಒಳಗೊಂಡಿಲ್ಲ.

ಕನ್ನಡ ವಾರಪತ್ರಿಕೆ

ಹೊರಗಿಟ್ಟರೆ ಯಾರೂ ಆಕ್ಷೇಪಿಸಲಾರರು. ಆದರೆ ದ್ವಿಚಕ್ರ ವಾಹನ ಮಾಲೀಕರನ್ನು ಟ್ರ್ಯಾಕ್ಟರ್ ಮಾಲೀಕರಂತೇ ಪರಿಗಣಿಸಿ ಅವರನ್ನು ಸ್ವಯಂಚಾಲಿತರಾಗಿ ಹೊರಗಿಡುವುದು ಯಾಕೆ? ಸ್ಥಿರ ದೂರವಾಣಿ (ಲ್ಯಾಂಡ್ ಲೈನ್) ಹೊಂದಿರುವವರನ್ನು ಹೊರಗಿಡುವುದು ಯಾವ ನ್ಯಾಯ? ಕಡು ಕಷ್ಟದಲ್ಲಿರುವ ಪರಿಶಿಷ್ಟಜಾತಿ/ಪಂಗಡ ಕುಟುಂಬಗಳು ಅಥವಾ ಅಂಗವಿಕಲರು ಗ್ರಾಮಗಳಲ್ಲಿ ಲ್ಯಾಂಡ್‌ಲೈನ್ ಪೋನ್ ಬೂತ್‌ಗಳನ್ನು ಇಟ್ಟುಕೊಳ್ಳಲು ಅವಕಾಶ ಸನ್ನಿವೇಶದಲ್ಲಿ ಈ ಕ್ರಮ ಸಾಧುವೇ? ವಾಸ್ತವವಾಗಿ, ಮೊಬೈಲ್ ಪೋನ್‌ಗಳ ಹಾವಳಿಯಿಂದಾಗಿ ಈ ಲ್ಯಾಂಡ್‌ಲೈನ್‌ನ ಬೂತ್‌ಗಳು ನಷ್ಟದಲ್ಲಿ ನಡೆಯುತ್ತಿವೆ. 2.5 ಎಕರೆ ನೀರಾವರಿ ಜಮೀನು ಹೊಂದಿದ್ದು ಕೊಳವೆ ಬಾವಿಯಿರುವ ರೈತರನ್ನೂ ಪಟ್ಟಿಯಿಂದ ಹೊರಗಿಡುವಂಥದ್ದು ಇನ್ನೂ ತೀರಾ ಕೆಟ್ಟ ಸನ್ನಿವೇಶವಾಗಿದೆ.

ರೈತರ ಆದಾಯದಲ್ಲಿ ಭಾರೀ ಏರು ಪೇರು. ಬಡ ರೈತ ಕುಟುಂಬಗಳ ಸಾಲದ ಹೊರೆ, ಹವಾಮಾನ ವೈಪರೀತ್ಯ ಬರ ಹಾಗೂ ಪ್ರವಾಹ–ಇಂಥ ಪರಿಸ್ಥಿತಿಯಲ್ಲಿ ಸ್ವಯಂಚಾಲಿತವಾಗಿ ಹೊರಗಿಡುವುದು ಗ್ರಾಮೀಣ ಭಾರತದ ಬಹುಸಂಖ್ಯಾತ ಜನತೆಗೆ ಎಸಗುವ ಘೋರ ಅನ್ಯಾಯ ವಾಗುತ್ತದೆ. ಸರ್ಕಾರದೊಂದಿಗೆ ನೋಂದಾಯಿಸಿದ ಕೃಷಿಯೇತರ ಸಂಸ್ಥೆ ಯನ್ನು ಹೊಂದಿರುವ ಕುಟುಂಬ ವನ್ನು ಹೊರಗಿಡುವುದು ಕೂಡ ಪ್ರಶ್ನಾರ್ಹ ವಾದುದಾಗಿದೆ.



ಉದಾಹರಣೆಗೆ: ಮಹಿಳಾ ಸ್ವಸಹಾಯ ಗುಂಪುಗಳು ನಡೆಸುವ ಅತಿಸಣ್ಣ ಸಂಸ್ಥೆಗಳನ್ನು ಸರ್ಕಾರದೊಂದಿಗೆ ನೋಂದಾಯಿಸ ಲಾಗಿರುತ್ತದೆ. ಅಂದ ಮಾತ್ರಕ್ಕೆ ಅವುಗಳನ್ನು ಹೊರಗಿಡುವುದು ಸರಿಯೇ? ಸ್ವಯಂ ಚಾಲಿತ ಹೊರಗಿಡುವ ಪಟ್ಟಿಯೇ ಅನ್ಯಾಯದಿಂದ ಕೂಡಿದ್ದಾಗಿದ್ದು, ಅದನ್ನು ಸರಿಪಡಿಸಬೇಕಾಗಿದೆ.

ಏಳು ಪ್ರಶ್ನೆಗಳ ಆಧಾರದಲ್ಲಿ ರ್‍ಯಾಂಕಿಂಗ್ ನೀಡುವ ಪರಿಕಲ್ಪನೆಯನ್ನು ಉಳಿಸಿಕೊಂಡಿರುವುದು ಬಿಪಿಎಲ್ ಪ್ರಶ್ನಾವಳಿಯದೊಡ್ಡ ಸಮಸ್ಯಾತ್ಮಕ ಭಾಗವಾಗಿದೆ. ಇಂಥ ಸಂಕುಚಿತ ಸ್ವಯಂಚಾಲಿತ ಅಂತರ್ಗತಗೊಳಿಸುವಿಕೆ ಮಾನದಂಡದೊಂದಿಗೆ ಬಹುಸಂಖ್ಯಾತ ಗ್ರಾಮೀಣ ಬಡವರನ್ನು ಬಡವರು ಅಥವಾ ಬಡವರಲ್ಲದವರು ಎಂದು ರ್‍ಯಾಂಕಿಂಗ್ ವ್ಯವಸ್ಥೆಯ ಮೂಲಕ ಪರಿಗಣಿಸಲಾಗುತ್ತದೆ. ಪ್ರಶ್ನೆಗಳು ಅಸಂಬದ್ಧವಾಗಿದ್ದು, ವಾಸ್ತವ ಪರಿಸ್ಥಿತಿಯೊಂದಿಗೆ ಯಾವುದೇ ಸಂಬಂಧವಿರುವುದಿಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ ಪ್ರಸಕ್ತ ಬಿಪಿಎಲ್ ಗಣತಿಯು ಬಡವರ ಗುರುತಿಸುವಿಕೆಯನ್ನು ಇನ್ನಷ್ಟು ಸಂಕುಚಿತ ಗೊಳಿಸುವ ಹಾಗೂ ಯೋಜನಾ ಆಯೋಗ ನಿಗದಿಪಡಿಸಿದ ಬಡವರ ಸಂಖ್ಯೆಯ ಸಂಪೂರ್ಣ ಏಕಪಕ್ಷೀಯ ಹಾಗೂ ಅನ್ಯಾಯಯುತ ಅಂದಾಜುಪಟ್ಟಿಗೆ ಸರಿಹೊಂದುವಂತೆ ರೂಪಿಸು ವಂಥದ್ದಾಗಿದೆ. ಅದು ಆಹಾರ ಭದ್ರತೆ ಕಾನೂನಿಗೆ ಸಂಬಂಧಿಸಿದ ರಾಷ್ಟ್ರೀಯ ಸಲಹಾ ಸಮಿತಿ (ಎಸ್‌ಎಸಿ)ಯ ಕರಡು ಪ್ರಸ್ತಾವನೆಗೆ ಸರಿಹೊಂದಿಕೊಳ್ಳು ವಂಥದ್ದಾಗಿದೆ.

ಒಟ್ಟಿನಲ್ಲಿ ಇದೇ ಬಿಪಿಎಲ್ ಗಣತಿ ಪ್ರಕ್ರಿಯೆ ಬಡವರಿಗೆ ಸಹಾಯಕಾರಿಯಾಗಿಲ್ಲ. ಅದು ದೇಶದ ಬಡಜನತೆಯ ಗಾಯಕ್ಕೆ ಉಪ್ಪನ್ನು ಸವರುತ್ತದೆ. ಲಕ್ಷಾಂತರ ಬಡ ಜನರು ಬಿಪಿಎಲ್ ಕಾರ್ಡ್‌ನಿಂದ ವಂಚಿತರಾಗುತ್ತಾರೆ. ಈ ಪ್ರಕ್ರಿಯೆಯು ರಾಷ್ಟ್ರೀಯ ಸಂಪನ್ಮೂಲಗಳಲ್ಲಿ ಬಡವರಿಗೆ ಸಿಗಬೇಕಾದ ನ್ಯಾಯಯುತ ಪಾಲಿನಿಂದ ವಂಚಿಸುತ್ತಾರೆ. ●

2004–2005ರ ಅಂತಿಮ ಬಡತನ ರೇಖೆ ಮತ್ತು ಬಡವರ ಸಂಖ್ಯೆ

ರಾಜ್ಯ	ಗ್ರಾಮೀಣ ಬಡತನ ರೇಖೆ	ಗ್ರಾಮೀಣ ಪ್ರತಿಶತ ಬಡವರು	+10% ಅಸ್ಥಿರ ಬಡವರು
ಆಂಧ್ರಪ್ರದೇಶ	433.43	32.3	35.53
ಅರುಣಾಚಲ ಪ್ರದೇಶದ	547.14	33.6	36.96
ಅಸ್ಸಾಂ	478	36.4	40.04
ಬಿಹಾರ	433.43	55.7	61.27
ಛತ್ತೀಸ್‌ಗಢ	398.92	55.1	60.61
ದೆಹಲಿ	541.39	15.6	17.16
ಗೋವಾ	608.76	28.1	30.91
ಗುಜರಾತ್	501.58	39.1	43.01
ಹರ್ಯಾಣ	529.42	24.8	27.28
ಹಿಮಾಚಲ ಪ್ರದೇಶ	520.4	25	27.5
ಜಮ್ಮು & ಕಾಶ್ಮೀರ	522.3	14.1	15.51
ಝುರ್ಖಂಡ್	404.79	51.6	56.76
ಕರ್ನಾಟಕ	417.84	37.5	41.25
ಕೇರಳ	537.31	20.2	22.22
ಮಧ್ಯಪ್ರದೇಶ	408.41	53.6	58.96
ಮಹಾರಾಷ್ಟ್ರ	484.89	47.9	52.69
ಮಣಿಪುರ	578.11	39.3	43.23
ಮೇಘಾಲಯ	503.32	14	15.4
ಮಿಜೋರಾಂ	639.27	23	25.3
ನಾಗಾಲ್ಯಾಂಡ್	687.3	10	11
ಒರಿಸ್ಸಾ	407.78	60.8	66.88
ಪುದುಚೇರಿ	385.45	22.9	25.19
ಪಂಜಾಬ್	543.51	22.1	24.31
ರಾಜಸ್ಥಾನ	478	35.8	39.38
ಸಿಕ್ಕಿಂ	531.65	31.8	34.98
ತಮಿಳುನಾಡು	441.69	37.5	41.25
ತ್ರಿಪುರಾ	450.49	44.5	48.95
ಉತ್ತರಪ್ರದೇಶ	435.14	42.7	46.97
ಉತ್ತರಾಂಚಲ	486.24	35.1	38.61
ಪಶ್ಚಿಮಬಂಗಾಳ	445.38	38.2	42.02
ಅಖಿಲ ಭಾರತ	446.68	41.8	45.98

ಜುಲೈ 1 ರಿಂದ 7, 2011 ಪಶ್ಚಿಮಬಂಗಾಳ : ಎಡರಂಗದ ಮೇಲಿನ ದಾಳಿ ವಿರುದ್ಧ ರಾಷ್ಟ್ರ ವ್ಯಾಪಿ ಪ್ರತಿಭಟನೆ

ಜೂನ್ 11 ಮತ್ತು 12ರ ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಚುನಾವಣಾ ವಿಮರ್ಶೆ

ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಅಸ್ಸಾಂ ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ನಡೆದ ವಿಧಾನಸಭಾ ಚುನಾವಣಾ ಫಲಿತಾಂಶದ ಬಗ್ಗೆ ಕೇಂದ್ರ ಸರ್ಕಾರ ವಿವರವಾದ ವಿಮರ್ಶೆಯನ್ನು ನಡೆಸಿತು.

ಪಶ್ಚಿಮ ಬಂಗಾಳದಲ್ಲಿ ಎಡರಂಗದ ಹೀನಾಯ ಸೋಲಿನ ಕಾರಣಗಳ ಬಗ್ಗೆ ಕೇಂದ್ರ ಸಮಿತಿ ಪರಿಶೀಲನೆ ನಡೆಸಿತು. ರಾಜ್ಯದಲ್ಲಿ ಸಿಪಿಐಎಂ ಮತ್ತು ಎಡರಂಗಕ್ಕೆ ವಿವಿಧ ಜನವಿಭಾಗಗಳ ಬೆಂಬಲ ಕ್ಷೀಣಿಸಲು ಉಂಟಾದ ಕಾರಣಗಳನ್ನು ಬೊಟ್ಟು ಮಾಡಲಾಯಿತು. ಲೋಕಸಭಾ ಚುನಾವಣೆಯಲ್ಲಿ ಉಂಟಾದ ಭಾರೀ ಸೋಲಿನ ಬಳಿಕ ಸಿಪಿಐಎಂ ಮತ್ತು ಎಡಪಕ್ಷಗಳ ಮೇಲೆ ಬೃಹತ್ ದಾಳಿಗಳು ನಡೆದವು. ತೃಣಮೂಲ ಕಾಂಗ್ರೆಸ್ ನೇತೃತ್ವದಲ್ಲಿ ಹತಾಶ ರಾಜಕೀಯ ಪಕ್ಷಗಳು ಮತ್ತು ವಿವಿಧ ಗುಂಪುಗಳು ಒಂದಾಗಿ ಎಡರಂಗವನ್ನು ಚುನಾವಣೆಯಲ್ಲಿ ಎದುರಿಸಿತು. ಎಡರಂಗವನ್ನು ನಿರ್ನಾಮ ಮಾಡುವ ನಿಟ್ಟಿನಲ್ಲಿ ಉಗ್ರ ಬಲಪಂಥದಿಂದ ಹಿಡಿದು ಮಾವೋವಾದಿಗಳ ವರೆಗೆ ಎಲ್ಲರೂ ಒಟ್ಟಾದರು.

ಮೂರು ದಶಕಕ್ಕೂ ಹೆಚ್ಚಿನ ಅವಧಿಯಲ್ಲಿ ಎಡರಂಗದ ಸರ್ಕಾರ ನಡೆಸಿದ ಮಹತ್ತರ ಸಾಧನೆಗಳ ಹೊರತಾಗಿಯೂ ಆಡಳಿತ ಜಾರಿಗೊಳಿಸಿದ ಕೆಲವು ಕಾರ್ಯಕ್ರಮ ಮತ್ತು ಕೆಲ ನೀತಿಗಳಲ್ಲಿ ಜನಕಲ್ಯಾಣ ಮಾಡುವಲ್ಲಿ ಲೋಪಗಳು ಮತ್ತು ಬಲಹೀನತೆಗಳು ಇದ್ದವು. ಸಿಂಗೂರು ಮತ್ತು ನಂದಿಗ್ರಾಮದಲ್ಲಿ ನಮ್ಮ ತಪ್ಪುಗಳು ದುಬಾರಿಯಾಗಿ ಪರಿಣಮಿಸಿದವು. ಇದರ ಜೊತೆಗೆ ಸಂಘಟನಾತ್ಮಕ ವಿಷಯದಲ್ಲೂ ಗಂಭೀರ ವಿಚಾರ ವಿಮರ್ಶೆ ನಡೆಯಿತು. ವಿವಿಧ ಜನಸಮುದಾಯದ ಜೊತೆಗೆ ಸಂಪರ್ಕ ಬೆಳೆಸುವಲ್ಲಿ ನ್ಯೂನ್ಯತೆಗಳು ಮತ್ತು ಸಂಘಟನಾತ್ಮಕ ಕೊರತೆಗಳು ಕೂಡ ಈ ಸೋಲಿಗೆ ಪ್ರಮುಖ ಕಾರಣಗಳಾದವು ಎಂಬುದನ್ನು ವಿಮರ್ಶೆಯಲ್ಲಿ ಗಮನಿಸಲಾಯಿತು. ಈ ತಪ್ಪನ್ನು ಸರಿಪಡಿಸಿಕೊಳ್ಳಲು, ರಾಜಕೀಯವಾಗಿ ಮತ್ತು ಸಂಘಟನಾತ್ಮಕವಾಗಿ ಸರಿಯಾದ ಕ್ರಮಗಳನ್ನು ಕೈಗೊಳ್ಳಲು ಕೇಂದ್ರ ಸಮಿತಿ ವಿವರವಾದ ವರದಿಯನ್ನು ಮಂಡಿಸಿತು.

ಪಶ್ಚಿಮ ಬಂಗಾಳದ ಸೋಲಿನ ಹಿನ್ನೆಲೆಯಲ್ಲಿ ದೇಶದಲ್ಲಿ ರಾಜಕೀಯವಾಗಿ ಸಿಪಿಐಎಂ ಮತ್ತು ಎಡ ಪಕ್ಷಗಳು ಅಪ್ರಸ್ತುತ ಎಂಬ ಅಪಪ್ರಚಾರವನ್ನು ಕೇಂದ್ರ ಸಮಿತಿ ಬಲವಾಗಿ ತಳ್ಳಿ ಹಾಕಿದೆ. ಮಾಧ್ಯಮಗಳ ಅಪಪ್ರಚಾರ, ಬಲ–ಎಡ ಪ್ರತಿಗಾಮಿ ಶಕ್ತಿಗಳ ಒಗ್ಗೂಡುವಿಕೆಯಿಂದ ಎದುರಾಳಿಗಳು ಚುನಾವಣೆ ಎದುರಿಸಿದ್ದರೂ ಎಡರಂಗ 1.95 ಕೋಟಿ ಮತಗಳನ್ನು ಗಳಿಸಿದೆ. ಅಂದರೆ ಶೇ 41ರಷ್ಟು ಜನಾದೇಶವನ್ನು ಪಡೆದುಕೊಂಡಿದೆ. ಪಶ್ಚಿಮ ಬಂಗಾಳ ಘಟಕ ಮತ್ತು ಎಡ ಚಳವಳಿ ಇಂತಹ ಅನೇಕ ಸಮಸ್ಯೆಗಳಿಂದ ಎದ್ದುಬಂದಿದೆ. ಈ ಬಾರಿಯೂ ಪಕ್ಷ ಮತ್ತಷ್ಟು ಬಲಶಾಲಿಯಾಗಿ ಹೊರಹೊಮ್ಮಲಿದೆ. ಜನವಿರೋಧಿ ಹಾಗೂ ನವ ಉದಾರೀಕರಣದ ನೀತಿಗಳ ವಿರುದ್ಧ, ಜನಚಳವಳಿಯ ಮೂಲಕ ಮೂಡಿಬಂದ ಮೂರು ದಶಕಗಳ ಐತಿಹಾಸಿಕ ಸಾಧನೆಯನ್ನು ಉಳಿಸಿಕೊಳ್ಳಲು ಸಿಪಿಐಎಂ ಹೋರಾಟ ಮುಂದುವರಿಸಲಿದೆ. ಸೋಲಿನಿಂದ ಸರಿಯಾದ ಪಾಠ ಕಲಿತು ಪಕ್ಷ ಮತ್ತು ಎಡ ಚಳವಳಿ ಹೋರಾಟದಲ್ಲಿ ಮುಂದಡಿ ಇಡಲಿದೆ.

ಕೇರಳದಲ್ಲಿ....

ಕೇರಳದಲ್ಲಿ ಸಣ್ಣ ಅಂತರದಲ್ಲಿ ಎಲ್‌ಡಿಎಫ್ ಸೋಲು ಕಂಡಿದೆ. ಮೂರು ಸೀಟುಗಳ ಸಣ್ಣ ಅಂತರದಲ್ಲಿ ಯುಡಿಎಫ್ ಮುನ್ನಡೆ ಗಳಿಸಿದೆ. ಸಿಪಿಐಎಂ ಮತ್ತು ಎಲ್‌ಡಿಎಫ್‌ನ ಚುನಾವಣಾ ಪ್ರಚಾರ ಹಾಗೂ ಕಾರ್ಯವೈಖರಿಯನ್ನು ಕೇಂದ್ರ ಸಮಿತಿ ಪ್ರಶಂಸಿಸಿತು. ಪ್ರಬಲ ಜನ ಬೆಂಬಲ ಎಲ್‌ಡಿಎಫ್‌ಗೆ ಇರುವುದನ್ನು ಸಮಿತಿ ಗಮನಿಸಿತು. ಚುನಾವಣಾ ಫಲಿತಾಂಶದ

ಪುಟ 14ಕ್ಕೆ

ತಲೆ ಬುರುಡೇ ಕೊಡಿಸಿ...

ಪುಟ 2 ರಿಂದ

ಘಟ್ಟದ ಅವು ಯಾವ ಆದಿ ಮಾನವನ ತಲೆಬುರುಡೆಗಳಲ್ಲ. ಅದು ಹೋಮೋಸೆಪಿಯನ್... ಮನುಷ್ಯನ, ಅದೂ ಇಂದಿನ ಈ ಆಧುನಿಕ ಕಾಲದ ಅಂದರೆ ಇಪ್ಪತ್ತನೆಯ ಶತಮಾನದ ನಮೀಬಿಯಾದ ಜನರ ತಲೆ ಬುರುಡೆಗಳು. ಕೋರ್ಟ್‌ನ ಕಟೆಕಟೆಯಲ್ಲಿ ಇಪ್ಪತ್ತನೆಯ ಶತಮಾನದ ಮೊದಲ ಸಾಮೂಹಿಕ ಜನಾಂಗೀಯ ಹತ್ಯಾಕಾಂಡವೆಂಬ ಘೋರ ಅಧ್ಯಾಯದ ಪುಟಗಳನ್ನು ತೆರೆದಿಡುತ್ತಿದ್ದರು ಕನಂಡೋರೋಜಿ.

ನಮೀಬಿಯಾ 19 ನೇ ಶತಮಾನದ ಕೊನೆಯವರೆಗೆ ಹೆರೆರೋ ಮತ್ತು ನಾಮ ಇತ್ಯಾದಿ ಬುಡಕಟ್ಟು ಜನರೇ ಇದ್ದ ಪ್ರದೇಶವಾಗಿತ್ತು. 1884 ರಲ್ಲಿ ನಮೀಬಿಯಾಕ್ಕೆ ಯೂರೋಪಿಯನ್ನರ 'ಆಗಮನ'ವಾಯಿತು. ಅಂತರ್ಜಾಲದಲ್ಲಿ ಜಾಲಾಡಿದರೆ '1896 ರಲ್ಲಿ 2000 ಜನ ವರ್ತಕರು ನಮೀಬಿಯಕ್ಕೆ 'ಕಾಲಿಟ್ಟರು' ಅಂತ ಅರಳಿ ನಿಂತ ಪ್ರಬುದ್ಧ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿರುವ ಯೂರೋಪಿಯನ್ ಪರಿಭಾಷೆಯ ಇತಿಹಾಸ ಹೇರಳವಾಗಿ ಸಿಗುತ್ತದೆ. '1904 ರಲ್ಲಿ ಸ್ಥಳೀಯ ಬುಡಕಟ್ಟು ಜನರು ಯೂರೋಪಿನ್ನರ ವಿರುದ್ಧ ಬಂಡಾಯವೆದ್ದು ಅವರ ಮೇಲೆ ದಾಳಿ ನಡೆಸಿದರು' ಅಂತಲೂ ಚರಿತ್ರೆ ದಾಖಲಾಗಿದೆ. ಭಾರತಕ್ಕೂ ಯರೋಪಿಯನ್ನರು ಮೊದಲು ತಕ್ಕಡಿ ಹಿಡಿದುಕೊಂಡೇ ತಾನೆ ಬಂದಿದ್ದು. ಹಾಗಾಗಿ ನಮಗೆ ಈ 'ಆಗಮನ' 'ವ್ಯಾಪಾರ'ದ ಕತೆಗಳನ್ನೇನು ಹೆಚ್ಚು ವಿವರಿಸಿ ಹೇಳಬೇಕಾದ ಪ್ರಮೇಯವೇ ಬರುವುದಿಲ್ಲ. ಒಂಟೆ ಮೊದಲು ಡೇರೆಯೊಳಗೆ ತಲೆ ಮಾತ್ರ ಇಡಲು ಅನುಮತಿ ಕೇಳಿತ್ತು. ಒಂಟೆಯ ತಲೆ ಡೇರೆಯೊಳಗೆ ಬಂದ ಮೇಲೆ ಡೇರೆಯ ಮಾಲಿಕ ಆಚೆಗೆ ಬಿದ್ದ ಕತೆಗೆ ಯಾವ ವಿವರಣೆ ಬೇಕು. ಈ ಒಂಟೆ ಯಾರನ್ನೂ ಕೇಳಲೂ ಇಲ್ಲ. ಹೇಳಲೂ ಇಲ್ಲ. ಹೇಳುವುದು ಕೇಳುವುದು ಈ ಒಂಟೆಯ ಜಾಯಮಾನಕ್ಕೆ ಒಗ್ಗಿ ಬರುವುದಿಲ್ಲ. ಆರಂಭದಲ್ಲಿ ನಮೀಬಿಯಾದ ಕಡಲತಡಿಯಿಂದ ಆರಂಭವಾದ ವಿದೇಶಿ ಆಕ್ರಮಣದಲ್ಲಿ ಬ್ರಿಟೀಷ್‌ರಿಗೂ ಜರ್ಮನರಿಗೆ ಪೈಪೋಟಿ ನಡೆದು ಜರ್ಮನಿ ಮೇಲುಗೈ ಸಾಧಿಸಿತು.



ಜರ್ಮನ್ ಜನರಲ್
ಲೋಥರ್ ಥೋಟ್

90 ಸಾವಿರ ಜನರ ಮಾರಣಹೋಮ

ಒತ್ತರಿಸಿಕೊಂಡು ಬರುಬರುತ್ತ ತಮ್ಮ ಡೇರೆಯನ್ನು, ತಮ್ಮ ಬದುಕನ್ನೇ ನುಂಗಲು ನಿಂತಿರುವ ಜರ್ಮನ್ ಒಂಟೆಗೆ ಬುಡಕಟ್ಟು ಜನರು ಪ್ರತಿರೋಧ ತೋರಿದರು. ಹೀಗಿದ್ದಾಗ್ಯೂ ಡೇರೆಗೆ ನುಗ್ಗಿರುವ ಒಂಟೆ ಕ್ರೌರ್ಯ ಎಂಥದ್ದೆಂದು ಅವರಿಗೆ ಪಾಪ ಗೊತ್ತಿತ್ತೋ ಇಲ್ಲವೋ.

ಅದು ಜೂನ್ 12,1904. ಜನರಲ್ ಲೋಥರ್ ಥೋಟ್ ನೇತೃತ್ವದ ಜರ್ಮನ್ ಸೈನ್ಯ. ಸ್ವತಃ ಜರ್ಮನ್ ಸರ್ಕಾರ ತುರುಬಿ ಕಳಿಸಿದ ಜರ್ಮನ್ ಸೈನ್ಯ ಬುಡಕಟ್ಟು ಜನರ ಮೇಲೆರಗಿತು.

ಸುಮಾರು ಹತ್ತು ಸಾವಿರ ಜನರ ಮಾರಣ ಹೋಮ ಒಂದೇ ಸಾರಿಗೆ. ನಮೀಬಿಯಾ ದೇಶ ಜರ್ಮನಿಯ ಕಾಲನಿಯಾಯಿತು. ಸೈನ್ಯ ಜನ ವಸತಿಯ ಆಯ ಕಟ್ಟಿನ ಪ್ರದೇಶಗಳನ್ನು ಸುತ್ತುವರಿಯಿತು. ಬುಡಕಟ್ಟು ಜನರ ಬೆನ್ನಟ್ಟಿತು. ತಪ್ಪಿಸಿಕೊಂಡು ಹೋಗಲು ಉಳಿದದ್ದು ಒಂದೇ ದಿಕ್ಕು. ಅದು ಕಲಹರಿ ಮರಳುಗಾಡಿನ ದಾರಿಯ ದಿಕ್ಕು. ಜನರು ಸಿಕ್ಕ ದಾರಿಯಲ್ಲಿ ದಿಕ್ಕಾಪಾಲಾದರು. ಜನರ ಪಾಡು ಬೆಂಕಿಯಿಂದ ಬಾಣಲೆಗೆ ಬಿದ್ದಂತಾಗಿತ್ತು. ತಿನ್ನುವ ಅನ್ನಕ್ಕೆ ತತ್ವಾರ, ಕುಡಿಯುವ ನೀರಿಗೆ ಬರ. ಮೈ ಸುಡುವ ಮರಳುಗಾಡಿನ ಬೆಂಕಿಯಲ್ಲಿ ಜನರು ಅಕ್ಷರಶ: ಬೇಯುತ್ತಿದ್ದರು. 1904– 1907 ರ ನಡುವಿನ 3 ವರ್ಷಗಳ ಅವಧಿಯಲ್ಲಿ ಅನ್ನ ನೀರಿಲ್ಲದೇ ಹಾಹಾಕಾರದಲ್ಲಿ ಸುಮಾರು 75 ಸಾವಿರದಿಂದ 80 ಸಾವಿರ ಜನ ಪ್ರಾಣ ತೆತ್ತರು. ಅವರಲ್ಲಿ ತಾಳಲಾಗದ ಬಿಸಿಲ ಬೇಗೆಗೆ ಒಣಗಿದ ಕಟ್ಟಿಗೆಯಂತಾಗಿ ಕರಕಲಾಗಿ ಹೋದರವರದೂ ದೊಡ್ಡ ಸಂಖ್ಯೆಯೆ.

ಮೂರುಸಾವಿರ ಜನರ ತಲೆ ಕಡಿದು ಬುರುಡೆ ಕೊಂಡೊಯ್ದರು.

ದಾಳಿಯಿಂದ ಕಂಗಾಲಾದ ಜನ ದೂರ ಹೋಗಿ ಅಲ್ಲೆಲ್ಲೋ ಜೀವಕ್ಕೆ ಆಸರೆ ಸಿಗುವ ಒಂದು ಕಡೆ ನಿರಾಶ್ರಿತರಾಗಿ ನೆಲೆ ನಿಂತಿದ್ದರೆ, ಬೆನ್ನಟ್ಟಿದ ಸೈನ್ಯ ನಿರಾಶ್ರಿತರ ನೆಲೆಗಳನ್ನೂ ಬಿಡದೇ ಜನರ ಮೇಲೆ ಅಮರಿಕೊಂಡಿತು. ಅಲ್ಲಿ ನಡೆದ ಅತ್ಯಾಚಾರಗಳನ್ನು ಯಾವ ಮಾತುಗಳಲ್ಲಿ ಬಣ್ಣಿಸುವುದು. ಅಲ್ಲಿಂದ ಮೂರು ಸಾವಿರ ಜನರ ತಲೆ ಕಡಿದು ತಲೆಬುರುಡೆಗಳನ್ನು ಜರ್ಮನಿಗೆ ಕೊಂಡೊಯ್ಯಲಾಯಿತಂತೆ. ಅವುಗಳಲ್ಲಿ ನಲವತ್ತು ಬುರುಡೆಗಳನ್ನು ಈಗಲೂ ಜರ್ಮನ್ ವಿಶ್ವವಿದ್ಯಾಲಯವೊಂದರಲ್ಲಿ ಹಾಗೇ ಇಡಲಾಗಿದೆಯಂತೆ.

ಆ ನಮ್ಮ ಹಿರಿಯರ ತಲೆ ಬುರುಡೆಗಳನ್ನು ನಮಗೆ ಕೊಡಿಸಿ ಅಂತ ಕೇಳುತ್ತಿದ್ದಾರೆ ಹೆರೆರೋ ಸಮುದಾಯದ ಮುಖಂಡ ಈ ಕನಂಡೋರೋಜಿ. ಮೂರು ವರ್ಷಗಳ ನರಮೇಧದ ಅವಧಿಯಲ್ಲಿ ಜನ ಏನೇನೆಲ್ಲಾ ಕ್ರೌರ್ಯಗಳನ್ನು ಅನುಭವಿಸಬೇಕಾಯಿತು. ನಮೀಬಿಯಾದ ಕುಡಿಯುವ ನೀರಿನ ಬಾವಿಗಳಲ್ಲಿ ವಿಷ ಹಾಕಿರುವುದಕ್ಕೆ ಸಾಕ್ಷಿಗಳು ಆ ನಂತರದ ಅಧ್ಯಯನಗಳಲ್ಲಿ ದೊರೆತಿವೆ.

ಇದನ್ನು ಏನೆಂದು ಕರೆಯುವುದು ?

ಇದನ್ನು ಏನೆಂದು ಕರೆಯುವುದು ? 1911 ರಲ್ಲಿ ನಡೆದ ಸಮೀಕ್ಷೆಯಲ್ಲಿ ಹೆರೆರೋ ಬುಡಕಟ್ಟು ಜನರ ಸಂಖ್ಯೆ ಶೇ.80 ರಷ್ಟು, ನಾಮ ಜನರ



ಸಂಖ್ಯೆ ಶೇ. 51 ರಷ್ಟು ಕಡಿಮೆಯಾಗಿರುವುದು ದಾಖಲಾಗಿದೆ. ನಾವೀಗ ಇದನ್ನು ದುಷ್ಟ ಸಾಮ್ರಾಜ್ಯಶಾಹಿಯ ನಗ್ನ ಆಕ್ರಮಣ, ಘೋರ ಪಾತಕ, ಕ್ರೌರ್ಯ ಅಂತ ಅದೇ 'ಸವಕಲು' ಶಬ್ದಗಳಿಂದಲೇ ಕರೆಯಬೇಕೇ ? ಅಥವಾ ಇದಕ್ಕೆ ಬೇರೆ ಏನಾದರೂ ಸುಂದರ, ಕೋಮಲ ಪದಪುಂಜಗಳನ್ನು ವಿಕಸನಗೊಳಿಸಬೇಕೆ?

ಈ ಅಂತರಾಷ್ಟ್ರೀಯ ನ್ಯಾಯಾಲಯದ ಕಟಕಟೆಯಲ್ಲಿ ತೆರೆದುಕೊಳ್ಳುತ್ತಿರುವ ಈ ಜೀವಂತ ಸಾಕ್ಷಿಗಳನ್ನು ನೋಡಿದರೆ ಎಂಥಾ ಭೀಕರ ಇತಿಹಾಸ, ಭಯಾನಕ ವರ್ತಮಾನಗಳನ್ನು ಒಡಲಲ್ಲಿ ಹೊತ್ತು ಈ ಜಗತ್ತು ಮುಂದೆ ಸಾಗುತ್ತಿದೆ!! ಅಬ್ಬಬ್ಬ !!!

ಮತ್ತೆ ಈಗ ಪ್ರಜಾಪ್ರಭುತ್ವ ವ್ಯವಸ್ಥೆ ಪ್ರಬುದ್ಧವಾಗಿ ಅರಳಿ ನಿಂತಿರುವುದರಿಂದಾಗಿಯೇ ನಾಗಾಲೋಟದ ಅಭಿವೃದ್ಧಿ ಸಾಧಿಸಿರುವ ಯರೋಪ್ ಖಂಡದ ಆಧುನಿಕ ಜರ್ಮನಿಯ ವಿಚಾರಕ್ಕೆ ಬರೋಣ.

ನಮೀಬಿಯಾ ದೇಶ 1990 ರಲ್ಲಿ 'ಸ್ವಾತಂತ್ರ್ಯ'ವನ್ನು ಗಳಿಸಿತು. 1904 ರಲ್ಲಿ ಕೈ ತಪ್ಪಿದ ಕೃಷಿ ಅಪಾರ ಪ್ರಮಾಣದ ಭೂಮಿ, ಲೂಟಿಯಾಗಿ ಹೋದ ದೇಶದ ಅಗಾಧ ವಜ್ರ, ಚಿನ್ನ, ನೈಸರ್ಗಿಕ ಸಂಪತ್ತು... ಬರ್ಬರ ದಾಳಿಯಲ್ಲಿ ಬದುಕುಳಿದು ಮೊದಲು ಜರ್ಮನ್ ಅಧಿಪತಿಗಳ ಗುಲಾಮರಾಗಿ ಆ ಮೇಲೆ 1918 ರಿಂದಾಚೆಗೆ ದಣಿಗಳ ಬದಲಾವಣೆಯಾದ ಮೇಲೆ –ದಕ್ಷಿಣ ಆಫ್ರಿಕಾವನ್ನು ಕಬ್ಜಾ ಮಾಡಿಕೊಂಡು ಇಲ್ಲಿಗೂ ಕೈಚಾಚಿದ ಅದೇ ಬಿಳಿ ಯರೋಪಿಯನ್ ಲೂಟಿಕೋರ ಅಧಿಪತಿಗಳ ಗುಲಾಮರಾಗಿ ಅಭಿವೃದ್ಧಿ ಯೋಜನೆಗಳಲ್ಲಿ ಅಂದರೆ.. ರೈಲು ಹಳಿಹಾಕುವ ಕೆಲಸಗಳಲ್ಲಿ, ರಸ್ತೆ ರಚನೆ ಕಾಮಗಾರಿಗಳಲ್ಲಿ, ಸೇತುವೆ ಕಟ್ಟುವ ಕೆಲಸಕಾರ್ಯಗಳಲ್ಲಿ ಜೀತದವರಾಗಿ ದುಡಿದು ದುಡಿದು ಹುಡಿಯಾದರೂ ಸಿಗದೇ ಹೋದ ಕಪ್ಪು ಜನರ ಬೆವರಿನ ಪಾಲು. ಇವುಗಳಿಗೆ ಪರಿಹಾರವನ್ನು ಯಾರಲ್ಲಿ ಕೇಳುವುದು ?

ದೇಶ, ಸಂಸ್ಕೃತಿ. ಜನಸಮುದಾಯಗಳ ತಮ್ಮತನದ ಮೇಲೆ ನಡೆದ ಆ ಘೋರ ಅತ್ಯಾಚಾರಗಳಿಗೆ ಎಲ್ಲಿ ಪರಿಹಾರ ಕೇಳುವುದು? ಏನು ಪರಿಹಾರ ಕೇಳುವುದು ?

1904 ರ ಘೋರ ಜನಾಂಗೀಯ ಹತ್ಯಾಕಾಂಡಕ್ಕಾಗಿ ಜರ್ಮನಿ ಬಹಿರಂಗ ಕ್ಷಮೆ ಕೇಳಬೇಕು... ನಲುಗಿ ಹೋಗಿರುವ ನಮೀಬಿಯಾದ ಜನರ ಬದುಕನ್ನು ಕಿಂಚಿತ್ತಾದರೂ ಹಸನುಗೊಳಿಸಲು ಅನುವಾಗುವಂತೆ ಜರ್ಮನ್ ಸರ್ಕಾರ 4 ಬಿಲಿಯನ್ ಡಾಲರ್ ಪರಿಹಾರ ಕೊಡಬೇಕು... ನಮೀಬಿಯಾದ ಜನರು ಇಂತಹ ಕೆಲವು ಬೇಡಿಕೆ ಪಟ್ಟಿ ಇಟ್ಟರು. 1995 ರಲ್ಲಿ ವಿಶ್ವ ಸಂಸ್ಥೆಯಲ್ಲಿ ಹಕ್ಕುದಾವೆ ದಾಖಲಿಸಿದ್ದು ಆಯಿತು. ನಮೀಬಿಯಾ ಜನತೆಯ ನಿರಂತರ ಹೋರಾಟದ ನಂತರ ಆ ಅಮೋಘ ಕ್ಷಣ ಬಂದೇ ಬಂತು. ಜರ್ಮನ್ ಸರ್ಕಾರ 2004 ರಲ್ಲಿ ಪ್ರಪ್ರಥಮ ಬಾರಿಗೆ ಅಧಿಕೃತವಾಗಿ 1904–07 ರ ಹತ್ಯಾಕಾಂಡಕ್ಕಾಗಿ ಬಹಿರಂಗ ಕ್ಷಮೆ ಕೋರಿತು. ಪರಿಹಾರ.....

ಕ್ಷಮೆ ಕೇಳುವುದು ಎಂದರೆ ಎಷ್ಟೆಂದರೂ ಬಾಯುಪಚಾರದ ಮಾತುಗಳಷ್ಟೆ. ಅದರಲ್ಲಿ ಕಿಬ್ಬದಿಯ ಕೀಲು ಮುರಿಯುವಂಥದ್ದೇನು ಇಲ್ಲವಲ್ಲ ಅಂತ ನಮಗೆ ನಿಮಗೆ ಅನಿಸಬಹುದು. ಆ ಅಂಥಾ ಕ್ಷಮೆ ಕೇಳುವುದಕ್ಕೆ ಒಂದು ನೂರು ವರ್ಷ ಕಳೆದು ಹತ್ಯಾಕಾಂಡದ ನೂರನೇ ದುರಂತಾಚರಣೆಯ ದಿನ ಬರಬೇಕಾಯಿತು ನೋಡಿ.

ಏನು ಅಡ್ಡಿಯಾಗಿತ್ತು ?

ಏನು ಅಡ್ಡಿಯಾಗಿತ್ತು ಅಷ್ಟು ದಿನ ಪ್ರಜಾಪ್ರಭುತ್ವ ಅರಳಿ ನಿಂತ ಆ ಯೂರೋಪಿನ ಅಗ್ರಗಣ್ಯ ದೇಶವಾದ ಜರ್ಮನಿಗೆ ಕನಿಷ್ಟ ಬಾಯಿ ಮಾತಿನ ಕ್ಷಮೆ ಕೋರುವುದಕ್ಕೆ ?

ಘೋರ ಸಾಮೂಹಿಕ ಹತ್ಯಾಕಾಂಡವೆಂಬ ಪಾತಕದ ಹೊಣೆ ಹೊತ್ತುಕೊಂಡರೆ ಅದರ ಬೆನ್ನ ಹಿಂದೆಯೇ ಪರಿಹಾರದ ಬೇಡಿಕೆಯ 'ಭೂತ' ಹೆಗಲಿಗೇರಿ ಕೂರುತ್ತದೆ ಎಂಬುದನ್ನು ಅರಿಯಲಾರದಷ್ಟು ದಡ್ಡ ದೇಶವೇ ಜರ್ಮನಿ. ಅದೂ ಪ್ರಜಾಪ್ರಭುತ್ವ ಅರಳಿನಿಂತ ಪ್ರಬುದ್ಧ ಜರ್ಮನಿ.

ಆ ಸಾಮ್ರಾಜ್ಯಶಾಹಿ ವಿರೋಧಿ ಕೋರ್ಟು ಮುಗಿದದ್ದು ಡಿಸೆಂಬರ್ 22, 2010 ರಂದು. ಅಲ್ಲಿಯವರೆಗಂತೂ ಜರ್ಮನಿ ಸರ್ಕಾರದ ಪರಿಹಾರ ಘೋಷಣೆಯ ಪ್ರಕಟಣೆಯಂತೂ ಹೊರಬಿದ್ದಿರಲಿಲ್ಲ. ನಿಮಗೇನಾದರೂ ಅಂಥಾ ಘೋಷಣೆ ಗಮನಕ್ಕೆ ಬಂದಿದ್ದರೆ ಅಥವ ಮುಂದೆ ಗಮನಕ್ಕೆ ಬಂದರೆ ದಯಮಾಡಿ ನಮಗೆ ತಿಳಿಸಿ. ಮರೆಯಬೇಡಿ.

ನಾಗರಾಳ ದಲಿತರ ಮೇಲೆ ಹಲ್ಲೆಯು ಇಸರಿ

— ಮಲ್ಲಯ್ಯ ಚಾಲಹಳ್ಳಿ —

ತಮ್ಮ ಜಾಗದಲ್ಲಿ ಭೂಮಾಲೀಕರು ಟ್ರಾಕ್ಟರ್ ನಿಲ್ಲಿಸಿದರೂ ದಲಿತರು ಕೇಳುವಂತಿಲ್ಲ. ತಮ್ಮ ಪಾಲಿನ ಆಶ್ರಯ ಮನೆಗೆ ಅಡ್ಡಗಾಲು ಹಾಕಿದರೂ ಮಾತನಾಡುವಂತಿಲ್ಲ. ದಲಿತರ ವಸ್ತುವನ್ನು ಬಳಸಲು, ಕೊಂಡೊಯ್ಯಲು ದಲಿತರು ಅನುಮತಿ ಕೊಟ್ಟಿರಲೇ ಬೇಕೆಂದೇನೂ ಇಲ್ಲ. ಇದನ್ನೆಲ್ಲಾ ದಲಿತರು ಪ್ರಶ್ನಿಸಿದರೆ....

ರಾಯಚೂರು ಜಿಲ್ಲೆಯಲ್ಲಿ ಸಿಂಗಾಪುರ, ತಡಕಲ್, ಗಜ್ಜಿಗೆರೆ, ಗೆಜ್ಜಲಗಟ್ಟ, ಲಿಂಗಸೂಗೂರ, ಅರಕೇರ, ಜಾಲಿಹಾಳ, [illegible] ಮುಂತಾದ ಊರುಗಳಲ್ಲಿ ಪಾಳೆಗಾರಿಕೆಯ ದೌರ್ಜನ್ಯದ ವಿವಿಧ ಸ್ವರೂಪಗಳನ್ನು ನೋಡಿದ್ದೇವೆ. ಈಗ ಲಿಂಗಸೂಗೂರು ತಾಲ್ಲೂಕಿನ ನಾಗರಾಳ ಗ್ರಾಮದ ಭೂ ಮಾಲೀಕ ವೆಂಕಟೇಶಪ್ಪ ಗುತ್ತೇದಾರ ತನ್ನ ಪಾಳೇಗಾರಿಕೆಯ ದೌರ್ಜನ್ಯವನ್ನು ನೇರವಾಗಿ ನಡೆಸಲು ಹೋಗಿ ಸಾಗದಾದಾಗ ದಲಿತ ಕುಟುಂಬಗಳ ಮಧ್ಯ ಕಲಹ ತಂದಿಟ್ಟು ತನ್ನಲಿದ್ದ ಹಣ ಮತ್ತು [illegible] ಬಲ ಬಳಸಿ ಶಾಂತಾಬಾಯಿ ಎಂಬ ಮಹಿಳೆಯ ಬದುಕನ್ನ ನರಕ ಸದೃಶವನ್ನಾಗಿ ಮಾಡಿದ್ದು ಕೇಳಿದಾಗ ಎಂಥವರಿಗೂ ಈ ಕಾಲದಲ್ಲೂ ಹೀಗಾಗುತ್ತವೆಯೇ? ಎಂದು ಕೇಳಿಕೊಳ್ಳುವಂತಾಗುತ್ತವೆ.

ನಾಗರಾಳ ಗ್ರಾಮ ಪಟ್ಟಣವೆಂದು ಕರೆಸಿಕೊಳ್ಳುವಷ್ಟು ದೊಡ್ಡದಲ್ಲದ, ಕುಗ್ರಾಮವೆಂದು ಹೇಳಲಾಗದಂತ ಲಕ್ಷಣಗಳುಳ್ಳ ಒಂದು ದೊಡ್ಡ ಗ್ರಾಮ. ಇಲ್ಲಿ ಛಲವಾದಿಗಳ ಕೇರಿಯಲ್ಲಿ ದ್ಯಾವಪ್ಪ ಮತ್ತು ಯಮುನಪ್ಪ ಎಂಬ ಇಬ್ಬರು ಅಣ್ಣತಮ್ಮಂದಿರು ವಾಸವಾಗಿದ್ದಾರೆ. ಯಮನಪ್ಪನಿಗೆ ಸಿದ್ದಪ್ಪ, ಹನುಮಪ್ಪ, ಮುತ್ತಪ್ಪ ಮತ್ತು ಶಾರಪ್ಪ ಎಂಬ ಮಕ್ಕಳಿದ್ದಾರೆ. ಹನುಮಪ್ಪ ಮತ್ತು ಮುತ್ತಪ್ಪ ಕುಡುಕರಿದ್ದು ಊರಲ್ಲಿ ಗೂಂಡಾಗಿರಿ ಮಾಡುತ್ತಾ ತಿರುಗುತ್ತಿರುತ್ತಾರೆ.

ದ್ಯಾವಪ್ಪನಿಗೆ ದುರಗಪ್ಪ, ಫಕೀರಪ್ಪ ಮತ್ತು ಹುಸೇನಮ್ಮ ಎಂಬ ಮಕ್ಕಳಿದ್ದಾರೆ. ದುರಗಪ್ಪ ಲೆಕ್ಚರರಾಗಿದ್ದು, ದಾವಣಗೆರೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಅಲ್ಲಿಯೇ ವಾಸ ಮಾಡುತ್ತಿದ್ದಾರೆ. ಫಕೀರಪ್ಪ ನಾಗರಾಳದಲ್ಲಿ ಕಟ್ಟಡ ಕಟ್ಟುವ ಕೂಲಿಗಾರನಾಗಿದ್ದಾನೆ. ಹುಸೇನಮ್ಮಳನ್ನು 3 ದಶಕಗಳ ಹಿಂದೆಯೇ ದೇವದಾಸಿಯನ್ನಾಗಿಸಲಾಗಿದೆ. ಆಕೆಗೆ ಶಾಂತಾಬಾಯಿ ಮತ್ತು ಚಂದ್ರಶೇಖರ ಎಂಬ ಮಕ್ಕಳಿದ್ದಾರೆ. ಶಾಂತಾಬಾಯಿ ದೇವದಾಸಿ ಪುನರ್ವಸತಿ ಯೋಜನೆಯಲ್ಲಿ ನಾಗರಾಳ ಕೇಂದ್ರ ಸ್ವಯಂಸೇವಕಿಯಾಗಿ ಕೆಲಸ ಮಾಡುತ್ತಿದ್ದಾಳೆ ಮತ್ತು ದೇವದಾಸಿ ಮಹಿಳಾ ವಿಮೋಚನಾ ಸಂಘದ ತಾಲ್ಲೂಕು ಸಂಚಾಲಕಿಯಾಗಿ ದುಡಿಯುತ್ತಿದ್ದಾಳೆ. ಚಂದ್ರಶೇಖರ್ ಡ್ರೈವರ್‌ನಾಗಿ ಈ.ಕ.ಸಾ.ಸಂಸ್ಥೆಯ ಗಂಗಾವತಿ ಡಿಪೋದಲ್ಲಿ ಸೇವೆ ಸಲ್ಲಿಸುತ್ತಿದ್ದಾನೆ.

ದಲಿತರ ಮನೆ ಅಂಗಳವೇ ದೊಡ್ಡವರ ಪಾರ್ಕಿಂಗ್ ಜಾಗ

ದ್ಯಾವಪ್ಪನ ಜಾಗಕ್ಕೆ ಹೊಂದಿಕೊಂಡೆ ಗುತ್ತೇದಾರ ವೆಂಕಟೇಶಪ್ಪ ಮನೆ ಇದೆ. ವೆಂಕಟೇಶಪ್ಪನಿಗೆ ವಿಶಾಲವಾದ ಮನೆ ಮತ್ತು ಜಾಗೆ ಇದ್ದಾಗ್ಯೂ ಕೂಡ ತನ್ನ ಟ್ರ್ಯಾಕ್ಟರ್ , ಟ್ರಾಲಿ, ಟಿಲ್ಲರ ಇತ್ಯಾದಿಗಳನ್ನು ನಿಲ್ಲಿಸಲು ದ್ಯಾವಪ್ಪ ಸಣ್ಣ ಗುಡಿಸಲಿನ ಮುಂದಿರುವ ಅಂಗಳವನ್ನು ಬಳಸುತ್ತಿದ್ದ, ಬಲಿತವರು ದಲಿತರನ್ನು ಕೇಳಿ ಅವರ ವಸ್ತು ಬಳಸುವ ಪದ್ಧತಿ ಹಿಂದಿನಿಂದಲೂ ಇಲ್ಲ. ಎಲ್ಲಾ ದಲಿತರಂತೆ ದ್ಯಾವಪ್ಪ ಕೂಡ ತನ್ನ ಮಕ್ಕಳು ಮತ್ತು ಮೊಮ್ಮಕ್ಕಳೊಂದಿಗೆ ಗುಬ್ಬಿಗಳ ರೀತಿಯಲ್ಲಿ [illegible] ತನ್ನ [illegible] ಗುಡಿಸಲಿನಲ್ಲಿ ಬಾಳುತ್ತಾ ಬಂದಿದ್ದಾನೆ. ಊರ ಪ್ರಮುಖರಲ್ಲೊಬ್ಬನಾದ ವೆಂಕಟೇಶಪ್ಪ ಭೂಮಿಯ ಜೊತೆಗೆ ಮದ್ಯ ವ್ಯಾಪಾರ ಹೊಂದಿದ್ದಾನೆ. ನಾಗರಾಳ ಮತ್ತು ಮಾಳ್ಗಲಗಳಲ್ಲಿ ಆತನ ಬಾರ್‌ಗಳು ಮತ್ತು ಶಾಪ್‌ಗಳಿವೆ. ಇಂತಹ ಮದ್ಯ ವ್ಯಾಪಾರಿ ತನ್ನ ಮನೆ ದೇವರನ್ನು ಮನೆಯಲ್ಲಿಟ್ಟು ಪೂಜೆ ಮಾಡದೆ ದ್ಯಾವಪ್ಪನ ಜಾಗದಲ್ಲಿ ಲಾಳಮ್ಮಗೆ ಗುಡಿ ಕಟ್ಟಿಸಿದ್ದಾನೆ.

ಹಲ್ಲೆ

ಕಳೆದ ವರ್ಷ ನಾಗರಾಳ ಗ್ರಾಮ ಪಂಚಾಯಿತಿ ವತಿಯಿಂದ ದೇವದಾಸಿಯಾದ ಹುಸೇನಮ್ಮನಿಗೆ ಆಶ್ರಯ ಮನೆ ಮಂಜೂರಾಗಿದೆ. ಅದನ್ನವರು ಕಟ್ಟಿಸಲು ಆರಂಭಿಸಿದಾಗ ವೆಂಕಟೇಶಪ್ಪನಿಗೆ ತನ್ನ ಟ್ರ್ಯಾಕ್ಟರ್ ಮತ್ತು ಇನ್ನಿತರ ವಾಹನಗಳನ್ನು ಅಲ್ಲಿ ನಿಲ್ಲಿಸಲು ಸಾಧ್ಯವಾಗದೆ ಇದ್ದಾಗ ತನ್ನ ಗುಡಿಯ ನೆಪವೊಡ್ಡಿ ಮನೆಕಟ್ಟಲು ತಕರಾರು ಮಾಡಿದ್ದಾನೆ. ಪಂಚಾಯತ್ ಮಧ್ಯಪ್ರವೇಶ ಮಾಡಿದೆಯಾದರೂ ಭೂಮಾಲಕನಿಗೆ ವಿರುದ್ಧವಾಗಿ ಹೇಳುವ ತ್ರಾಣ ಇಲ್ಲದ್ದರಿಂದಾಗಿ ಸುಮ್ಮನಾಗಿದೆ. ಇತ್ತ ವೆಂಕಟೇಶಪ್ಪನಿಗೆ ತನ್ನ ಮಾತು ನಡೆಯುತ್ತಿಲ್ಲವಲ್ಲ ಎಂಬ ಸಿಟ್ಟಿನಿಂದ ಮನೆ ಕಟ್ಟುವುದನ್ನು ನಿಲ್ಲಿಸಲು ಕುತಂತ್ರ ಹೆಣೆದಿದ್ದಾನೆ.

ದ್ಯಾವಪ್ಪನ ತಮ್ಮನಾದ ಯಮುನಪ್ಪನ ಮಕ್ಕಳಾದ ಹನುಮಪ್ಪ, ಮುತ್ತಪ್ಪ ಮತ್ತು ಸಿದ್ದಪ್ಪನವರನ್ನು ತನ್ನ ಕುತಂತ್ರಕ್ಕೆ ದಾಳಗಳಾಗಿ ಬಳಸಿಕೊಳ್ಳಲು ನಿರ್ಧರಿಸಿದ್ದಾನೆ. ಯಮನಪ್ಪನ ಮನೆಯಲ್ಲಿ ನಡೆಯುತ್ತಿದ್ದ ಮದುವೆಗೆ ಬಲ್ಲಿಸಗಳು ಬೇಕು ಕೊಡು ಎಂದು ಸಿದ್ದಪ್ಪ ತನ್ನ ದೊಡ್ಡಪ್ಪ ದ್ಯಾವಪ್ಪನಿಗೆ ಕೇಳಿದ್ದಾನೆ. ದ್ಯಾವಪ್ಪ ಬಲ್ಲಿಸ ಕೊಟ್ಟರೆ ಮನೆ ಕೆಲಸ ನಿಲ್ಲುತ್ತದೆ ಕೊಡುವುದಿಲ್ಲ ಎಂದಿದ್ದಾನೆ. ಆದಾಗ್ಯೂ ದ್ಯಾವಪ್ಪ ಮತ್ತು ಆತನ ಮೊಮ್ಮಗಳು ಶಾಂತಾಬಾಯಿ ಇಲ್ಲದ ಸಮಯದಲ್ಲಿ ಬಲ್ಲಿಸಗಳನ್ನು ಒಯ್ದು [illegible] ಬಳಸಿಕೊಂಡಿದ್ದಾರೆ.

ಮದುವೆ ಮುಗಿದ ವಾರವಾದರೂ ದಿನವಾದರೂ ಸಿದ್ದಪ್ಪ ಬಲ್ಲಿಸಗಳನ್ನು ಕೊಡಲಿಲ್ಲವಾದ್ದರಿಂದ 11-05-2011ರಂದು ಕೂಲಿಗಳನ್ನು ಹಚ್ಚಿ ಬಲ್ಲಿಸಗಳನ್ನು ತಮ್ಮ ಮನೆಗೆ ದ್ಯಾವಪ್ಪ ತರಿಸಿ ಹಾಕಿಸಿಕೊಂಡಿದ್ದಾನೆ. ಇದನ್ನು ನೋಡದ ಸಿದ್ದಪ್ಪ ಬಲ್ಲಿಸಗಳು ನಮ್ಮವು ನೀನು ಹೆಂಗೆ ತೆಗೆದುಕೊಂಡು ಹೋದಿ ಎಂದು ದ್ಯಾವಪ್ಪನಿಗೆ ಹೊಡೆದಿದ್ದಾನೆ. ದೇವದಾಸಿ ಮಹಿಳಾ ಪುನರ್ವಸತಿ ಇಲಾಖೆಯಲ್ಲಿ ಸ್ವಯಂಸೇವಕಿಯಾಗಿ ಕೆಲಸ ಮಾಡುತ್ತಿರುವ ದ್ಯಾವಪ್ಪನ ಮೊಮ್ಮಗಳಾದ ಶಾಂತಾಬಾಯಿ ಮಾನ್ವಿಯಲ್ಲಿ [illegible] ಸಭೆಯಲ್ಲಿ ಇರುವಾಗ ಆಕೆಗೆ ಫೋನ್ ಮಾಡಿ ದ್ಯಾವಪ್ಪ ಅಜ್ಜನಿಗೆ ಬಹಳ ಹೊಡೆದಿದ್ದಾರೆ ಎಂದು ಹೇಳಿದ್ದಾನೆ. ಅದಕ್ಕೆ ಶಾಂತಾಬಾಯಿ [illegible] ಅಜ್ಜನೊಂದಿಗೆ ಹೋಗಿ ಮುದುಗಲ್ ಪೋಲೀಸ್ ಠಾಣೆಗೆ ದೂರು ಕೊಡು ಎಂದಿದ್ದಾಳೆ. ದ್ಯಾವಪ್ಪ ಮುದಗಲ್ ಠಾಣೆಯಲ್ಲಿ ದೂರು ಕೊಟ್ಟಿದ್ದಾನೆ. ಆದರೆ ಪೋಲೀಸರು ತಕ್ಷಣ ಕ್ರಮ ಕೈಗೊಳ್ಳದಿದ್ದಾಗ ಶಾಂತಾಬಾಯಿ ಪೋಲೀಸರಿಗೆ ಪದೇ ಪದೇ ಕೇಳಿದಾಗ ದೂರು ಪಡೆದು ಕೇಸು ದಾಖಲು ಮಾಡಿ ಆಪಾದಿತರ ಮೇಲೆ ಕ್ರಮ ಕೈಗೊಳ್ಳುವುದನ್ನು ಬಿಟ್ಟು 15-11-2011ರಂದು ಎರಡೂ ಕಡೆಯವರನ್ನು ಠಾಣೆಗೆ ಕರೆಸಿದ ಪಿಎಸ್ಐ ಮಾರುತಿ ಸಿದ್ದಪ್ಪನಿಗೆ ಎರಡೇಟು ಹೊಡೆದಂತೆ ಮಾಡಿ ನಿಮ್ಮ ದೊಡ್ಡಪ್ಪ 70-80 ವಯಸ್ಸಾದವ ಹಾಗೆಲ್ಲಾ ಹೊಡೆಯಬಾರದೆಂದು ಬುದ್ದಿ ಹೇಳಿದಂತೆ ಮಾಡಿ ಶಾಂತಾಬಾಯಿಗೆ ಹಿಂಬರಹ ಕೊಟ್ಟು ಕಳಿಸಿದ್ದಾನೆ.

ಹೆಂಗ ಬದುಕುತಿ... ಈ ಊರಾಗ

16-05-2011ರಂದು ಬೆಳಿಗ್ಗೆ 8 ಗಂಟೆ ಸುಮಾರಿಗೆ ಮನೆಕಟ್ಟುವ ಜಾಗಕ್ಕೆ ನೀರು ಹಾಕಲು



ಶಾಂತಾಬಾಯಿ ಮತ್ತು ದ್ಯಾವಪ್ಪ ಹೋದಾಗ ಹನುಮಪ್ಪ ಮತ್ತು ಮುತ್ತಪ್ಪ ಬಂದು ಶಾಂತಾಬಾಯಿಗೆ ಹೊಲಸು ಮಾತುಗಳಿಂದ ಬಯ್ದು ನಮ್ಮ ಸಿದ್ದಣ್ಣನಿಗೆ ಪೋಲೀಸರಿಂದ ಹೊಡಿಸಿದ ನಿನ್ನ ಮಾಗ [illegible] ತಿವಿ. ಈ ಊರಾಗ [illegible] ನೋಡ್ಕೋತೀವಿ ಎಂದೆಲ್ಲಾ ಬಯ್ಯುತ್ತಾ ಶಾಂತಾಬಾಯಿ ತಲೆಕೂದಲು ಹಿಡಿದು ಎಳೆದು ಬಗ್ಗಿಸಿ ಹಿಗ್ಗಾ-ಮುಗ್ಗಾ ಹೊಡೆದಿದ್ದಾರಲ್ಲದೆ ಸೈಟಿಯನ್ನು ಹರಿದು ಅವಮಾನ ಮಾಡಿದ್ದಾರೆ. ಅಡ್ಡ ಬಂದ ಮುದುಕನಿಗೆ ಒದ್ದು ಕೆಡವಿದ್ದಾರೆ. ಶಾಂತಾಬಾಯಿ ತನ್ನಜ್ಜನನ್ನು ಹಿಡಿದುಕೊಂಡು ನರಳುತ್ತಾ ಬಜಾರ್‌ದಲ್ಲಿ ಹೋಗುತ್ತಿದ್ದರೆ ಹಿಂದಿನಿಂದ ಆಕೆಯನ್ನು ಎಳೆಯುತ್ತಾ ದಬ್ಬುತ್ತಾ ಕೈಗೆ ಸಿಕ್ಕಿದ್ದರಿಂದ [illegible]

[illegible]

ಇನ್ನೊಂದು ಕಂಪ್ಲೇಟ್ ಬರೆದುಕೊಡು....

ಠಾಣೆಯಲ್ಲಿ ಜಮಾದಾರರು ಕಂಪ್ಲೇಂಟ್ ಬರೆದುಕೊಡಲು ತಿಳಿಸಿದ್ದಾರೆ. ಆದರಂತೆ ನಡೆದದ್ದನ್ನು ಶಾಂತಾಬಾಯಿ ಬರೆದುಕೊಟ್ಟಾಗ ಪಿಎಸ್ಐ ಅದರಲ್ಲಿ ಕೆಲವು ಲೈನುಗಳ ಕೆಳಗೆ ಗೆರೆಹಾಕಿ ನಾನು ಗೆರೆ ಹಾಕಿದವರನ್ನು ಬಿಟ್ಟು ಉಳಿದಿದ್ದನ್ನು ಇನ್ನೊಂದು ಕಂಪ್ಲೇಂಟಾಗಿ ಬರೆಸಿಕೋ ಎಂದು ಜಮಾದಾರರಿಗೆ ಹೇಳಿ ಪಿಎಸ್ಐ ಹೊರಗೆ ಹೋಗಿದ್ದಾರೆ. ಪಿಎಸ್ಐ ಸಾಹೇಬರು ಹೇಳಿದಂತೆ ಇನ್ನೊಂದು ಕಂಪ್ಲೇಂಟ್ ಬರೆದುಕೊಡು ಎಂದಿದ್ದಾರೆ. ಶಾಂತಾಬಾಯಿ ತನ್ನ ಕಂಪ್ಲೇಂಟ್‌ನಲ್ಲಿ ಗೆರೆ ಹಾಕಿದ ವಾಕ್ಯಗಳನ್ನು ನೋಡಿದ್ದಾಳೆ. ಶಾಂತಾಬಾಯಿ ಸೈಟ ಹರಿದ ಪ್ರಸಂಗ, ಮಾಂಗಲ್ಯ ಕಿತ್ತುಕೊಂಡ ಪ್ರಸಂಗ ಮತ್ತು ಕುತ್ತಿಗೆ ಹಿಸುಕಲು ಯತ್ನಿಸಿದ ಪ್ರಸಂಗಗಳಿರುವ ವಾಕ್ಯಗಳ ಕೆಳಗೆ ಗೆರೆ ಹಾಕಲಾಗಿದೆ. ಶಾಂತಾಬಾಯಿ ತನ್ನ ದೂರನ್ನು ಬದಲಾಯಿಸಿ ಕೊಡುವುದಿಲ್ಲವೆಂದು ವಾದಿಸಿದ್ದಾಳೆ. ಜಮಾದಾರ ದೂರು ಹರಿದು ಹಾಕಿದ್ದಾನೆ. ಮಹಾಂತೇಶ್ ಮತ್ತು ನಾಗಪ್ಪ ಎಂಬ ಪೋಲೀಸರು ಜಮಾದಾರ ಜತೆ ಸೇರಿಕೊಂಡು ದೌರ್ಜನ್ಯ ಮಾಡಿ, ಜೀವ ಬೆದರಿಕೆ ಹಾಕಿ ತಮಗೆ ಇಷ್ಟವಾಗುವ ರೀತಿಯಲ್ಲಿ ಕಂಪ್ಲೆಂಟ್ ಬರೆಸಿಕೊಂಡಿದ್ದಾರೆ. ಶಾಂತಾಬಾಯಿಯನ್ನು ರಾತ್ರಿ 9ರವರೆಗೆ ಕೋಣೆಯಲ್ಲಿ ಕೂರಿಸಿ ಬಂಧಿಸಿದ್ದೇವೆಂದು ಹೇಳಿ 9.30ಕ್ಕೆ ಲಿಂಗಸೂಗೂರಿಗೆ ಒಯ್ದು ನ್ಯಾಯಾಧೀಶರ ಸಮ್ಮುಖದಲ್ಲಿ ಜಾಮೀನಿನ ಷರತ್ತಿನಲ್ಲಿ ಬಿಡುಗಡೆ ಮಾಡಿದ್ದಾರೆ.


ಪುನಃ ನಾಗರಾಳಕ್ಕೆ ಹೋಗಲು ಜೀವ ಭಯವಿದ್ದುದರಿಂದ ಶಾಂತಾಬಾಯಿ ಮಸ್ಕಿಯಲ್ಲಿರುವ ಸಂಬಂಧಿಗಳ ಮನೆಯಲ್ಲಿ ಹೋಗಿದ್ದಾಳೆ. ಮರುದಿನ ತನ್ನ ಇಲಾಖೆಗೆ ಮತ್ತು ದೇವದಾಸಿ ಮಹಿಳಾ ವಿಮೋಚನಾ ಸಂಘದ ಜಿಲ್ಲಾಧ್ಯಕ್ಷೆ ಹೆಚ್.ಪದ್ಮ ನಿನ್ನಲ್ಲಿರುವ ದಾಖಲಾತಿಗಳೊಂದಿಗೆ ರಾಯಚೂರಿಗೆ ಬಾ ಎಂದು ತಿಳಿಸಿದ್ದಾಳೆ. ಅವಶ್ಯ ದಾಖಲಾತಿಗಳ ಸಂಗ್ರಹಣೆಗೆ ಏಳೆಂಟು ಕಳೆದು ಹೋಗಿದೆ.

ದೇವದಾಸಿ ಮಹಿಳಾ ವಿಮೋಚನಾ ಸಂಘದ [illegible] ನಡೆಯುವ ಸಂಘದಲ್ಲಿ ಅವಶ್ಯ ದಾಖಲಾತಿಗಳ ಸಹಿತ ಬಂದ ಶಾಂತಾಬಾಯಿ ಸಮಿತಿಗೆ ಕೊಟ್ಟಿದ್ದಾಳೆ. ಅವನ್ನೆಲ್ಲಾ ಪರಿಶೀಲಿಸಿದ ದೇವದಾಸಿ ಮಹಿಳಾ ವಿಮೋಚನಾ ಸಂಘದ. ಜನವಾದಿ ಮಹಿಳಾ ಸಂಘದ

ಪುಟ 15ಕ್ಕೆ

ಈ ವಾರ ಮತ್ತೆ ದೇಶದ ಪ್ರಧಾನ ಲೆಕ್ಕ ಪರಿಶೋಧಕರ ಕರಡು ವರದಿಯೊಂದು ಹೊಸ ಬಾಂಬು ಸಿಡಿಸಿದೆ. 2ಜಿಯಂತಹ ಇನ್ನೊಂದು ಬೃಹತ್ ಹಗರಣವನ್ನು ಬಯಲಿಗೆ ತಂದಿದೆ. ಎಡಪಕ್ಷಗಳು ನಾಲ್ಕು ವರ್ಷಗಳ ಹಿಂದೆಯೇ ಎತ್ತಿದ್ದ ಪ್ರಶ್ನೆ ಎಷ್ಟು ಸಮರ್ಪಕ ಎಂದು ಮತ್ತೊಮ್ಮೆ ಈ ಹೊಸ ಹಗರಣದಲ್ಲೂ ಸಾಬೀತಾಗುತ್ತಿದೆ.


- ಯುಪಿಎ-2 ಸರಕಾರ ಕಾರ್ಪೊರೇಟ್‌ಗಳ ಕೈಸೆರೆಯಾಗಿರುವ ಸರಕಾರ ಎಂಬುದನ್ನು ಈ ವಾರ ಪ್ರಕಟವಾಗಿರುವ ಅದರ 'ಕರಡು ಉತ್ಪಾದನಾ ಧೋರಣೆ' ಕೂಡ ತೋರಿಸಿಕೊಟ್ಟಿದೆ. ಅಲ್ಲದೆ ಇದು ಪ್ರಜಾಪ್ರಭುತ್ವ ಪ್ರತಿಭಟನೆಗಳಿಗೆ ಕಿವುಡಾಗಿರುವ ಸರಕಾರ ಎಂದೂ ಮತ್ತೊಮ್ಮೆ ಸ್ಪಷ್ಟವಾಗಿದೆ.
- ಹಣದುಬ್ಬರ ಮತ್ತೆ ಎರಡಂಕಿಯತ್ತ ಧಾವಿಸಲಾರಂಭಿಸಿದೆ. ಆದರೆ ಈ ಸರಕಾರ ಆಹಾರ ಸಬ್ಸಿಡಿಗಳನ್ನು ಎಷ್ಟರ ಮಟ್ಟಿಗೆ ಇನ್ನಷ್ಟು ಸೀಮಿತಗೊಳಿಸಬಹುದು ಎಂಬ ಗೀಳನ್ನೇ ಹಚ್ಚಿಕೊಂಡಂತಿದೆ. ಅತ್ತ ರೈತರ ಸಂಕಟಗಳ ಬಗ್ಗೆಯೂ ಅದೇ ನಿರ್ಲಕ್ಷ್ಯ. ಈ ವಾರ ಅದು ಪ್ರಕಟಿಸಿದ ಬೆಂಬಲ ಬೆಲೆಗಳು ಇದಕ್ಕೆ ಸಾಕ್ಷಿ.
- ಈ ನಡುವೆ ಯುಪಿಎ-2 ಸರಕಾರ ಕೇಂದ್ರ ಜಾಗೃತಾ ಆಯೋಗದ ಅಧ್ಯಕ್ಷ ಸ್ಥಾನಕ್ಕೆ ನೇಮಿಸಿದ್ದ ಪಿ ಜೆ ಥಾಮಸ್ ಮೇಲೆ ತನಿಖೆಗಳ ಬಗ್ಗೆ ಕೇರಳ ಸರಕಾರ ತಮಗೆ ತಿಳಿಸಿಲ್ಲ ಎಂದಿರುವ ಯುಪಿಎ-2 ಸರಕಾರದ ಹೇಳಿಕೆ ಶುದ್ಧ ಸುಳ್ಳು ಎಂದು ಈಗ ಸಾಬೀತಾಗಿದೆ. ಮಾಹಿತಿ ಹಕ್ಕಿನ ಅಡಿಯಲ್ಲಿ ಕೇಳಿದ ಪ್ರಶ್ನೆಗೆ ದೊರೆತಿರುವ ಉತ್ತರ ಮಾರ್ಚ್ 11, 2008ರಂದು ಕೇರಳ ಸರಕಾರದ ಮುಖ್ಯ ಕಾರ್ಯದರ್ಶಿ ಕೇಂದ್ರಕ್ಕೆ ಬರೆದ ಪತ್ರದಲ್ಲಿ ಈತನ ಮೇಲಿನ ಕೇಸು ಇನ್ನೂ ಇತ್ಯರ್ಥವಾಗದಿರುವುದರಿಂದ ಈತ ಕೇಂದ್ರದಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದನ್ನು ಬಯಲು ಮಾಡಿದೆ.



ವೇದರಾಜ ಎನ್.ಕೆ.

ಮತ್ತೊಂದು 2ಜಿ ಮಾದರಿ ಬೃಹತ್ ಹಗರಣ: ಇದು ತೈಲ-ಅನಿಲ ಹಗರಣ

ಯುಪಿಎ ಸರಕಾರದ ಮತ್ತೊಂದು ದೊಡ್ಡ ಹಗರಣ ಈಗ ಬಯಲಾಗಿದೆ. ಮತ್ತೆ ಅದೇ ಮಹಾಲೆಕ್ಕ ಪರಿಶೋಧಕರ (ಸಿಎಜಿಯ) ಹೊಸದೊಂದು ವರದಿಯಿಂದಾಗಿ. ತೈಲ-ಅನಿಲ ಪಾಲುದಾರಿಕೆಯ ಕಾಂಟ್ರಾಕ್ಟುಗಳು ಖಾಸಗಿಯವರಿಗೆ ಅನುಕೂಲಕರ ವಾಗಿರುವಂತೆ ನೋಡಿಕೊಳ್ಳಲಾಗಿದೆ ಎಂದು ಸಿಎಜಿ ಆಪಾದಿಸಿದೆ. ಯುಪಿಎ ಸರಕಾರದ ತೈಲ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯದ ಅಕ್ರಮಗಳು ಮುಕೇಶ್ ಅಂಬಾನಿಯ ರಿಲಯನ್ಸ್ ಇಂಡಿಯಾ ಲಿಮಿಟೆಡ್ ಮತ್ತು ಇತರ ಖಾಸಗೀ ತೈಲ-ಅನಿಲ ಕಂಪನಿಗಳಿಗೆ ಅಪಾರ ಪ್ರಯೋಜನ ಒದಗಿಸಿವೆ, ಇದಕ್ಕೆ ಬೆಲೆ ತೆತ್ತಿರುವವರು ಸಾಮಾನ್ಯ ಭಾರತೀಯರು- ಇದು ಈ ಹೊಸ ಸಿಎಜಿ ವರದಿಯ ಸಾರಾಂಶ. ಇದರಿಂದ ಸರಕಾರದ ಬೊಕ್ಕಸಕ್ಕಾಗಿರುವ ರೆವಿನ್ಯೂ ನಷ್ಟ ಅಪಾರ, ಆದರೆ 2ಜಿಯಂತೆ ಎಷ್ಟೆಂದು ಲೆಕ್ಕ ಹಾಕುವುದು ಕಷ್ಟ ಎಂದು ಅದು ಹೇಳಿದೆ.



ಈ ಬೃಹತ್ ಲೂಟಿ ನಡೆದಿರುವುದು ಹೇಗೆ? ಸಂಕ್ಷಿಪ್ತವಾಗಿ ಹೇಳುವುದಾದಲ್ಲಿ, ಆರಂಭದ ಬಂಡವಾಳ ಖರ್ಚನ್ನು ಮೊದಲು ಸರಕಾರಕ್ಕೆ ಸಲ್ಲಿಸಿದ ಲೆಕ್ಕಾಚಾರಕ್ಕಿಂತ ವಿಪರೀತವಾಗಿ ಹಿಗ್ಗಿಸಿ. ಕೃಷ್ಣ-ಗೋದಾವರಿ ಜಲಾನಯನ ಪ್ರದೇಶದಲ್ಲಿ ಕೆಜಿ-ಡಿ6 ಬ್ಲಾಕಿನಲ್ಲಿ ಅನಿಲ ಶೋಧನೆಯ ಕಾಂಟ್ರಾಕ್ಟ್ ಪಡೆದ ರಿಲಯನ್ಸ್ ಕಂಪನಿ ತನ್ನ 'ಬಂಡವಾಳ ಖರ್ಚು' ಅಥವ 'ಅಭಿವೃದ್ಧಿ ಖರ್ಚು' 2.47 ಬಿಲಿಯನ್ ಡಾಲರುಗಳು ಎಂದಿತ್ತು. ಆದರೆ ಅದನ್ನು ನಂತರ ಮೂರು ಪಟ್ಟಿಗಿಂತಲೂ ಹೆಚ್ಚಾಗಿ ಹಿಗ್ಗಿಸಿ 8.41 ಬಿಲಿಯನ್ ಡಾಲರ್ ಎಂದಿತ್ತು. ಇದನ್ನು ತೈಲ ಮಂತ್ರಾಲಯ ಮತ್ತು ಹೈಡ್ರೋಕಾರ್ಬನ್ ಮಹಾ ನಿರ್ದೇಶನಾಲಯ(ಡಿಜಿಹೆಚ್) ಚಕಾರವೆತ್ತದೆ ಕಣ್ಣುಮುಚ್ಚಿ ಒಪ್ಪಿಕೊಂಡಿತು ಎಂದು ಸಿಎಜಿ ಕಟುವಾಗಿ ಟೀಕಿಸಿದೆ.

ಇದೇ ರೀತಿ ರಾಜಸ್ತಾನದಲ್ಲಿ ಕೆಯರ್ನ್ ಕಂಪನಿಗೆ (ಈಗ ಅದನ್ನು ಸರಕಾರೀ ಒಡೆತನದ ಒಎನ್‌ಜಿಸಿಗೆ ವಹಿಸದೆ ಇನ್ನೊಂದು ಖಾಸಗಿ ಕಂಪನಿ ವೇದಾಂತಕ್ಕೆ ಒಪ್ಪಿಸುವ ಹುನ್ನಾರ ನಡೆದಿದೆ) ಕೂಡ ತೈಲ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯ ಅನಗತ್ಯ ಅನುಕೂಲ ಕಲ್ಪಿಸಿದೆ ಎಂದೂ ಸಿಎಜಿ ಆಪಾದಿಸಿದೆ. ಈ ಎಲ್ಲ ಅಕ್ರಮಗಳು ಬಯಲಿಗೆ ಬರುವುದನ್ನು ತಪ್ಪಿಸಲು ಈ ಖಾಸಗಿ ಕಂಪನಿಗಳು ಲೆಕ್ಕಪರಿಶೋಧನೆಯಲ್ಲಿಯೂ ಅಡ್ಡಗಾಲು ಹಾಕಲು ಪ್ರಯತ್ನಿಸಿವೆ ಎಂದೂ ವರದಿ ಹೇಳಿದೆ.

ಯುಪಿಎ ಯ 'ಆಮ್ ಆದ್ಮಿ'ಯ ಮೇಲೆ ಇದರ ಪರಿಣಾಮವೇನು? ಆ 'ಅಭಿವೃದ್ಧಿ ಖರ್ಚ'ನಲ್ಲಿ ತೋರಿಸಿರುವ ಕೃತಕ ಹೆಚ್ಚಳಕ್ಕೆ ಬೆಲೆ ತೆರಬೇಕಾದವರು ನವ-ಉದಾರವಾದೀ ವ್ಯವಸ್ಥೆಯಲ್ಲಿ ಅವರೇ ತಾನೇ? 'ಅಭಿವೃದ್ಧಿ ಖರ್ಚು' ಹೆಚ್ಚಿತೆಂದರೆ ಅದು ಬಳಕೆದಾರರಿಗೆ ಪೂರೈಸುವ ಅನಿಲದ ಬೆಲೆಯೇರಿಸುತ್ತದೆ, ಅಲ್ಲದೆ ಅನಿಲವನ್ನು ಬಳಸುವ ವಿದ್ಯುತ್ ಮತ್ತು ರಸಗೊಬ್ಬರ ಬೆಲೆಗಳನ್ನೂ ಏರಿಸುತ್ತದೆ. ಅದನ್ನು ತೆರಬೇಕಾದವರು ಜನಸಾಮಾನ್ಯರೇ.

2ಜಿ ಹಗರಣದೊಂದಿಗೆ ಹೋಲಿಕೆ ಇಲ್ಲಿಗೇ ನಿಲ್ಲುವುದಿಲ್ಲ. ಇಲ್ಲಿಯೂ ಪ್ರಧಾನ ಮಂತ್ರಿಗಳದ್ದು ಯಥಾಪ್ರಕಾರ ದಿವ್ಯಮೌನ. 2ಜಿಯಂತೆ ಇದೂ ತನಗೆ ಗೊತ್ತಿರಲಿಲ್ಲ ಎನ್ನುತ್ತಾರೆಯೇ? ಆದರೆ 2ಜಿಯಂತೆ ಇಲ್ಲಿಯೂ ಎಡಪಕ್ಷಗಳು ಇದನ್ನು ಅವರ ಗಮನಕ್ಕೆ ತಂದಿದ್ದವು. ಕೆಜಿ ಬೇಸಿನ್ ಅನಿಲ ಶೋಧನೆಯಲ್ಲಿ ಬಂಡವಾಳ ಖರ್ಚನ್ನು ಕೃತಕವಾಗಿ ಹಿಗ್ಗಿಸಲಾಗಿದೆ ಎಂಬ ದೂರಿನ ಬಗ್ಗೆ ಸಿಪಿಐ(ಎಂ) ಸಂಸತ್ ಸದಸ್ಯ ತಪನ್ ಸೆನ್ ಡಿಸೆಂಬರ್ 2006ರಲ್ಲಿಯೇ ತೈಲ-ಅನಿಲ ಮಂತ್ರಾಲಯಕ್ಕೆ ಬರೆದಿದ್ದರು. ಅಲ್ಲಿಂದ ಏನೂ ಉತ್ತರ ಬರದಿದ್ದಾಗ ಅವರು ಜುಲೈ 4, 2007ರಂದು ನೇರವಾಗಿ ಪ್ರಧಾನ ಮಂತ್ರಿಗಳ ಗಮನ ಸೆಳೆದಿದ್ದರು. ಅದಕ್ಕೆ ಅವರಿಂದ ಬಂದ ಉತ್ತರ 'ತಮ್ಮ ಪತ್ರ ತಲುಪಿದೆ' ಎಂದಷ್ಟೇ. ತಪನ್ ಸೆನ್ ಮತ್ತೆ ಜುಲೈ 13ರಂದು ಪತ್ರ ಬರೆದು ಈ ಬಗ್ಗೆ ಮತ್ತು ಸಂಬಂಧಪಟ್ಟ ಮಹಾನಿರ್ದೇಶಕರು ಅವಸರವಸರವಾಗಿ ಮಂಜೂರಾತಿ ನೀಡಿರುವ ಬಗ್ಗೆ ತನಿಖೆ ನಡೆಸಬೇಕು ಎಂದು ಕೇಳಿದ್ದರು. ಪ್ರಧಾನಮಂತ್ರಿಗಳಿಂದ ಏನೂ ಉತ್ತರವಿಲ್ಲ.

ಒಬ್ಬ ಉನ್ನತ ಕೇಂದ್ರ ಸರಕಾರೀ ಹುದ್ದೆಯಲ್ಲಿದ್ದವರು ಕೂಡ, ಅಂದರೆ ಈ ಹಿಂದೆ ರೆವಿನ್ಯೂ ಕಾರ್ಯದರ್ಶಿಯಾಗಿದ್ದ ಇ.ಎ.ಎಸ್.ಶರ್ಮ ತಾನು 2009ರಿಂದ ಪ್ರಧಾನಮಂತ್ರಿಗಳಿಗೆ ಈ ವಿಷಯದಲ್ಲಿ ಎಚ್ಚರಿಸುವ ಹಲವು ಪತ್ರಗಳನ್ನು ಬರೆದಿದ್ದರೂ ಒಂದಕ್ಕೂ ಪ್ರಧಾನಮಂತ್ರಿಗಳ ಕಚೇರಿಯಿಂದ ಉತ್ತರ ಸಿಗಲಿಲ್ಲ ಎಂದಿದ್ದಾರೆ. ತೈಲ ಕಂಪನಿಗಳಿಗೆ ಲಾಭ ಒದಗಿಸಲು ಪ್ರಧಾನಮಂತ್ರಿಗಳ ಕಚೇರಿ, ತೈಲ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯ ಮತ್ತು ವಿವಿಧ ಸರಕಾರೀ ಸಂಸ್ಥೆಗಳು ಜನರಿಂದ ಸತ್ಯಸಂಗತಿಗಳನ್ನು ಮುಚ್ಚಿಡುತ್ತಿವೆಯೇನೋ ಎಂಬ ಭಾವನೆ ಬರುವಂತಾಗಿದೆ ಎಂದು ಅವರು [illegible] ಪ್ರಕಟವಾದ ಮೇಲೆ ಪ್ರಧಾನಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

ಪುಟ 15 ಕ್ಕೆ

100 ಟಾಪ್ ತೆರಿಗೆ ಬಾಕಿದಾರರ ಹೆಸರುಗಳನ್ನು ಪ್ರಕಟಿಸಿ ಸಿಐಟಿಯು ಸವಾಲು

ಯುಪಿಎ-2 ಸರಕಾರ ದೇಶದಲ್ಲಿ ಕಪ್ಪು ಹಣದ ಉತ್ಪಾದನೆಯಲ್ಲಿ ಒಂದು ಪ್ರಮುಖ ಮೂಲವಾದ ಅಪಾರ ತೆರಿಗೆ ಬಾಕಿಗಳ ವಸೂಲಿಗೆ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳುವ ಬದಲು ಸಮಿತಿಗಳನ್ನು ರಚಿಸುವ ಪ್ರಹಸನಗಳನ್ನು ನಡೆಸುತ್ತಿದೆ. ಕೇಂದ್ರ ಕಾರ್ಮಿಕ ಸಂಘಟನೆಗಳು ಬಜೆಟ್-ಪೂರ್ವ ಸಮಾಲೋಚನೆಗಳಲ್ಲೂ ಸಂಪನ್ಮೂಲ ಕ್ರೋಡೀಕರಣಕ್ಕೆ ಅಪಾರ ತೆರಿಗೆ ಬಾಕಿಗಳ ವಸೂಲಿಗಳಿಗೆ ಕ್ರಮ ವಹಿಸಬೇಕು ಎಂದು ಸೂಚಿಸಿದ್ದವು. ಮಾರ್ಚ್ 2010ರ ವೇಳೆಗೆ ಇದರ ಮೊತ್ತ 2.93 ಲಕ್ಷ ಕೋಟಿ ರೂ. ಆದರೆ ಇಂತಹ ವಸೂಲಿ ಕೇಂದ್ರ ಹಣಕಾಸು ಮಂತ್ರಿಗಳಿಗೆ ಅಪಥ್ಯ. ವಾಸ್ತವವಾಗಿ ಸರಕಾರಕ್ಕೆ ದೊಡ್ಡ ಕಾರ್ಪೊರೇಟುಗಳಿಂದ, ಆದಾಯ ತೆರಿಗೆಗಳಿಂದ ಬರಬೇಕಾಗಿರುವ ಈ ಮೊತ್ತ ಸರಕಾರ ತಾನು ಪೆಟ್ರೋಲಿಯಂ ಉತ್ಪನ್ನಗಳು ಮತ್ತು ರಸಗೊಬ್ಬರಕ್ಕೆ ನೀಡುತ್ತಿದ್ದೇನೆ ಎನ್ನುತ್ತಿರುವ ಸಬ್ಸಿಡಿ ಮೊತ್ತವನ್ನು ಸಂಪೂರ್ಣವಾಗಿ ಭರಿಸಬಲ್ಲುದು ಎಂದಿರುವ ಸಿಐಟಿಯು, ಸರಕಾರ ಸಬ್ಸಿಡಿಗಳ ಕಡಿತದ ಗುರಿಗಳನ್ನು ನಿಗದಿ ಪಡಿಸುವ ಬದಲು, ಈ ವರ್ಷ 30% ತೆರಿಗೆ ಬಾಕಿಗಳ ವಸೂಲಿಯ ಗುರಿಯನ್ನು ಏಕೆ ಹಾಕಿಕೊಳ್ಳುವುದಿಲ್ಲ ಎಂದು ಪ್ರಶ್ನಿಸಿದೆ. ಸರಕಾರ ತಕ್ಷಣವೇ 100 ಉನ್ನತ ನೇರ ತೆರಿಗೆ ಬಾಕಿದಾರರ ಹೆಸರುಗಳನ್ನು, ಅವರ ಬಾಕಿಯ ಮೊತ್ತಗಳನ್ನು ಪ್ರಕಟಿಸಬೇಕು ಎಂದು ಬಲವಾಗಿ ಆಗ್ರಹಿಸಿದೆ.

ಅರಣ್ಯ ಇಲಾಖೆ ಕಿರುಕುಳ: ಬೆಳೆ ನಾಶ ರೈತ ಈರಪ್ಪ ಮಂಜಪ್ಪ ನಾಯ್ಕನ ಆತ್ಮಹತ್ಯೆ



ಬಿಜೆಪಿ ದರ್ಬಾರ್

■ ಆರ್.ರಾಮಕೃಷ್ಣ

ಒಳ್ಳೆಯ ಕಾನೂನು, ಶಾಸನ ಯಾವುದೊಂದನ್ನು ಜಾರಿ ಮಾಡಲು ರಾಜ್ಯ ಬಿಜೆಪಿ ಸರ್ಕಾರಕ್ಕೆ ಮನಸ್ಸೇ ಇಲ್ಲ. ಅದು ಉದ್ಯೋಗ ಖಾತ್ರಿ ಯೋಜನೆ ಇರಲಿ ಅಥವಾ ಅರಣ್ಯ ಹಕ್ಕು ಕಾಯ್ದೆ ಇರಲಿ...ಮತ್ತೊಂದಿರಲಿ. ಹಿಂದೆಂದೂ ಕಂಡು ಕೇಳರಿಯದ ಪ್ರಮಾಣದ ಭ್ರಷ್ಟಾಚಾರದ ಹಗರಣಗಳು ತಾಂಡವವಾಡುತ್ತಿರುವ ಈ ಕರ್ನಾಟಕ ರಾಜ್ಯದಲ್ಲಿ ಬಡ ರೈತರು, ಕೂಲಿಕಾರರ ಹಕ್ಕುಗಳ ಮೇಲೆ ಮಾತ್ರ ನಿರಂತರವಾದ ದಾಳಿ ಮುಂದುವರಿದಿದೆ.

ಉತ್ತರ ಕನ್ನಡ ಜಿಲ್ಲೆ ವ್ಯಾಪಕ ಅರಣ್ಯ ಪ್ರದೇಶ ಹೊಂದಿರುವ ಜಿಲ್ಲೆ: ಜೊತೆಗೆ ಅರಣ್ಯಭೂಮಿಯಲ್ಲಿ ಕೃಷಿ ಮಾಡುವ ಬಡ ಕೃಷಿಕರನ್ನು ಹೊಂದಿರುವ ಜಿಲ್ಲೆ. ಆದಿವಾಸಿಗಳ ಮತ್ತು ಇತರ ಅರಣ್ಯವಾಸಿಗಳಿಗೆ ಈಗ ಕೃಷಿ ಭೂಮಿಯ ಮೇಲೆ ಕಾನೂನುಬದ್ಧವಾದ ಹಕ್ಕಿದೆ. ಆದರೆ ಅಂಥ ಶಾಸನವನ್ನು ಲೆಕ್ಕಕ್ಕೆ ಇಡದೇ ಬಡ ರೈತರಿಗೆ ಭೂಮಿ ಹಕ್ಕು ನೀಡದೆ ಬಿಜೆಪಿ ಸರ್ಕಾರ ವಂಚಿಸುತ್ತಿದೆ.

ಭಟ್ಕಳ ತಾಲ್ಲೂಕಿನ ಬೆಂಗ್ರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಈರಪ್ಪ ಮಂಜಪ್ಪ ನಾಯ್ಕ ಎಂಬ ಬಡ ರೈತನ ಕುಟುಂಬ ಅಬ್ಬರೆ ಪ್ರದೇಶದಲ್ಲಿ ಕಟಗಾರ ಎಂಬ ಜಾಗದಲ್ಲಿ ಸುಮಾರು 15 ಗುಂಟೆಯಷ್ಟು ಅರಣ್ಯಭೂಮಿಯಲ್ಲಿ ಕಳೆದ 25 ವರ್ಷಗಳಿಂದ ಕೃಷಿ ನಡೆಸಿಕೊಂಡು ಬಂದಿತ್ತು. ಅಲ್ಲಿ ತೆಂಗು ಅಡಿಕೆ ಮರಗಳು, ಬಾಳೆಗಿಡಗಳು ಬೆಳೆದು ನಿಂತಿದ್ದವು. ಇದೇ ಜೂನ್ 6, 2011ರಂದು ಈ ಜಮೀನಿಗೆ ನುಗ್ಗಿದ ಅರಣ್ಯ ಇಲಾಖೆ ಸಿಬ್ಬಂದಿ ತೋಟದ ಮರಗಿಡಗಳನ್ನೆಲ್ಲಾ ಕಡಿದು ಹಾಕಿದ್ದಾರೆ. ಇದರಿಂದ ತೀವ್ರವಾಗಿ ನೊಂದ ಈರಪ್ಪ ಮಂಜಪ್ಪ ನಾಯ್ಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬಾಯಿ ಬಿಟ್ಟರೆ ರೈತರ ಜಪ ಜಪಿಸುವ, ರೈತ ಗೀತೆಯನ್ನು ನಾಡಗೀತೆಯಂತೆ ಎಲ್ಲಾ ಕಡೆ ಹಾಡಲೇಬೇಕು ಎಂದು ಫರ್ಮಾನು ಹೊರಡಿಸುವ ಬಿ.ಎಸ್. ಯಡಿಯೂರಪ್ಪ ಸರ್ಕಾರಕ್ಕೆ ಯಾವ ಗರ ಬಡಿದಿದೆ? ಮುಖ್ಯಮಂತ್ರಿ ಹಾಳಾಗಲಿ ಜಿಲ್ಲೆಯ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿಯೂ ನೊಂದ ಕುಟುಂಬದ ಕಡೆ ತಲೆ ಹಾಕಿಲ್ಲ. ಇನ್ನು ಪರಿಹಾರದ ಮಾತೆಲ್ಲಿ ಬಂತು. ಇದು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ರಾಜ್ಯ ಬಿಜೆಪಿ ಸರ್ಕಾರದ ದರ್ಬಾರ್. ಇಂದು ಒಂದು ರೈತ ಕುಟುಂಬದ ಪ್ರಶ್ನೆಯಲ್ಲ. ರಾಜ್ಯದಲ್ಲಿ ಸಹಸ್ರಾರು ಕುಟುಂಬಗಳ ಬಿಜೆಪಿ ದರ್ಬಾರ್‌ನಲ್ಲಿ ಇಂಥಾ ಭೀತಿ ಎದುರಿಸುತ್ತಿವೆ. ಉತ್ತರ ಕನ್ನಡ ಜಿಲ್ಲೆಯ ಡಿವೈಎಫ್ಐ ಅರಣ್ಯ ಇಲಾಖೆಯ ಹಾಗೂ ಸರ್ಕಾರದ ಕ್ರೌರ್ಯವನ್ನು ಖಂಡಿಸಿದೆ. ಜಿಲ್ಲಾ ಅಧ್ಯಕ್ಷ ಸುಭಾಷ್ ಕೊಪ್ಪಿಕರ್ ಕುಟುಂಬ ಸೂಕ್ತ ಪರಿಹಾರಕ್ಕಾಗಿ ಆಗ್ರಹಿಸಿದ್ದಾರೆ. ಪ್ರತಿಭಟನೆಯ ಎಚ್ಚರಿಕೆ ನೀಡಿದ್ದಾರೆ. ●

ಬೆಳಗಾವಿ ಸುವರ್ಣ ಸೌಧ 'ವೆಚ್ಚ ಪರಿಷ್ಕರಣೆ' : ಯಾರ ಬಾಯಿಗೆ ಎಷ್ಟೆಷ್ಟು?


ಬೆಳಗಾವಿ ಪ್ರಶ್ನೆಯಲ್ಲಿ ರಾಜ್ಯ ಬಿಜೆಪಿ ಸರ್ಕಾರ ಭಾಷಾ ದುರಾಭಿಮಾನ, ಪ್ರಾದೇಶಿಕ ಸಂಕುಚಿತ ಮನೋಭಾವನೆ ಬಿತ್ತಿ ರಾಜಕೀಯ ಲಾಭ ಮಾಡಿಕೊಳ್ಳಲು ಹವಣಿಸಿದ್ದು ನಮಗೆಲ್ಲಾ ಚೆನ್ನಾಗಿ ಗೊತ್ತಿರುವುದೇ. ಇದೇ ಭರಾಟೆಯಲ್ಲಿ ಬೆಳಗಾವಿಯಲ್ಲಿ ವಿಶೇಷ ವಿಧಾನಸಭಾ ಅಧಿವೇಶನಕ್ಕೆ ಅನುಕೂಲವಾಗುವಂತೆ 'ಸುವರ್ಣಸೌಧ'ವೊಂದು ಏಳುತ್ತಿರುವುದಕ್ಕೂ ನಮಗೆಲ್ಲಾ ತಿಳಿದಿದೆ. ದೊಡ್ಡ ದೊಡ್ಡ 'ಸೌಧ', ಕಟ್ಟಡಗಳನ್ನು ಕಟ್ಟಿಬಿಟ್ಟರೆ ದೇಶ, ರಾಜ್ಯ ಉದ್ದಾರ ಆಗಿ ಬಿಡುತ್ತದೆ ಅಂತ ಇವರು ತಾವು ನಂಬದಿದ್ದರೂ ಜನರನ್ನು ನಂಬಿಸುತ್ತಾರೆ. ತಾವು ನಂಬಿದಂತೆ ನಟಿಸುತ್ತಾರೆ.

ಹೀಗೆ 'ಸೌಧ'ಗಳನ್ನು ಕಟ್ಟುವ ರಾಜಕೀಯಗಳ ಹಿಂದೆ ಇನ್ನು ಏನೇನೋ ಹಿತಾಸಕ್ತಿಗಳು ಕೆಲಸ ಮಾಡುತ್ತಿರುತ್ತವೆ. ಕೃಷಿ ಉತ್ಪನ್ನಗಳಿಗೆ ಬೆಂಬಲಬೆಲೆ ಕೊಡಲು ಇಲ್ಲದ ಹಣ ಈ ಭವ್ಯ ಸೌಧಗಳ ನಿರ್ಮಾಣಕ್ಕೆ ದೊರೆಯುತ್ತದೆ.

ಬೆಳಗಾವಿಯ ಸೌಧದ ವಿಷಯದಲ್ಲೇ ಏನೇನು ಕರ್ಮಕಾಂಡಗಳು ನಡೆಯುತ್ತಿವೆ ಎಂದು ನೋಡಿದರೆ ಈ ಮೇಲಿನ ವಿಚಾರಗಳು ಇನ್ನಷ್ಟು ಸ್ಪಷ್ಟವಾಗುತ್ತದೆ.

ಲಭ್ಯವಿರುವ ಮಾಹಿತಿ ಪ್ರಕಾರ ಸುವರ್ಣಸೌಧದ ವೆಚ್ಚದ ಮೂಲ ಯೋಜನೆ ಇದ್ದದ್ದು 187.07 ಕೋಟಿ. ಕೇವಲ ಎರಡು ವರ್ಷಗಳ ಹಿಂದೆ ಮಾಡಿರುವ ಅಂದಾಜು ಇದು. ಆಗಲೇ ಯೋಜನೆ ಪರಿಷ್ಕರಿಸಿ ವೆಚ್ಚವನ್ನು ಮತ್ತೆ 60 ಕೋಟಿ ಹೆಚ್ಚಿಸುವ ಪ್ರಸ್ತಾಪ ಇದ್ದು ಅದಕ್ಕೆ ಆಗಲೇ ವಿರೋಧವೂ ವ್ಯಕ್ತವಾಗಿದೆ.

ಈಗಿನ ಮಾಹಿತಿಯ ಪ್ರಕಾರ ಸೌಧದ ಬಹುತೇಕ ಮುಖ್ಯ ಕಾಮಗಾರಿ ಮುಗಿದಿದೆ. ಅಂತಿಮ ಹಂತದ ಕೆಲಸಗಳು ಬಾಕಿ ಇವೆ. ಈ ಮಧ್ಯೆಯೇ ಯೋಜನೆ ಪರಿಷ್ಕರಿಸಿ ಅದನ್ನು 230 ಕೋಟಿಗೆ ಎತ್ತಲಾಗಿತ್ತು. ಇದೀಗ ಅದೇ ಯೋಜನೆಯನ್ನು ಮತ್ತಷ್ಟು 'ಪರಿಷ್ಕರಿಸಿ'



ವೆಚ್ಚವನ್ನು 370 ಕೋಟಿಗೆ 'ಮತ್ತೆ ಎತ್ತರಿಸುವ' ವ್ಯವಸ್ಥಿತ ಸಂಚು ನಡೆದಿದೆ. ಮಾಧ್ಯಮಗಳಲ್ಲಿ ಅದರಲ್ಲಿಯೂ 'ಪ್ರಜಾವಾಣಿ'ಯಲ್ಲಿ ವಿಚಾರ ಬಯಲಾದ ಮೇಲೆ ಸರ್ಕಾರ 70 ಕೋಟಿ ಹೆಚ್ಚುವರಿ ಕೆಲಸಗಳ ಟೆಂಡರ್ ರದ್ದು ಮಾಡಿದೆ.

ಕಾಣದ ಕೈ ಯಾವುದು

ಇಲ್ಲಿ ಗಮನಿಸಬೇಕಾದ ಹಲವು ಬಹುಮುಖ್ಯ ಪ್ರಶ್ನೆಗಳಿವೆ. ಇಷ್ಟು ದೊಡ್ಡ ಯೋಜನೆ ಪರಿಷ್ಕರಣೆ ಪ್ರಶ್ನೆಗೆ ಸಚಿವ ಸಂಪುಟದ ಅನುಮತಿಯೇ ಇಲ್ಲ. ಹಾಗೇ ಟೆಂಡರ್ ಅಂತಿಮಗೊಳಿಸಲಾಗಿದೆ. ಒಟ್ಟು ಪ್ರಕರಣದಲ್ಲಿ ಟೆಂಡರ್ ಅಂತಿಮಗೊಳ್ಳುವ ಮುಂಚೆಯೇ ಕಟ್ಟಡ ಕಾಮಗಾರಿಗಳು ಆರಂಭವಾದ ಪವಾಡಗಳೂ ನಡೆದಿವೆ.

ಇವೆಲ್ಲಾ ಯಾರೋ ಮುಖ್ಯ ಇಂಜಿನಿಯರ್, ಕೆಳಹಂತದ ಅಧಿಕಾರಿಗಳು, ಗುತ್ತೇದಾರರು ಮಾಡಿರುವ ಸಂಚುಗಳೆಂದರೆ ಯಾರಾದರೂ ನಂಬಲು ಸಾಧ್ಯವೇ? ಬಿಜೆಪಿ ಸರ್ಕಾರವನ್ನು ನಡೆಸುತ್ತಿರುವ ದೊಡ್ಡ ದೊಡ್ಡ ತಿಮಿಂಗಲಗಳೇ ಇಲ್ಲಿ ಭರ್ಜರಿ ಬೇಟೆಗೆ ಯೋಜಿಸಿವೆ. ಹಾಗಾಗಿಯೇ ಪದೇ ಪದೇ ಯೋಜನೆಯ ವೆಚ್ಚ ಪರಿಷ್ಕರಣೆ.

ರಾಜ್ಯ ಬಿಜೆಪಿ ಸರ್ಕಾರದ ದರ್ಬಾರಿನಲ್ಲಿ ಯಾವ ಪ್ರಮುಖವಾದ ಫೈಲುಗಳಿಗೂ ಕೂಡ ಆರೆಸ್ಸೆಸ್‌ನ ಅಪ್ಪಣೆ ಇಲ್ಲದೇ ಒಪ್ಪಿಗೆ ಸಿಗುವುದಿಲ್ಲ. ಪ್ರತಿಯೊಂದು ಇಲಾಖೆಗೆ ಪ್ರತಿಯೊಬ್ಬ ಸಚಿವರಿಗೂ ಒಬ್ಬೊಬ್ಬ 'ಸಂಘ ಮಿತ್ರ'ರ ಜವಾಬ್ದಾರಿ ಹಂಚಿಕೆಯಾಗಿದೆ.ಅವರಿಗೆ ತೋರಿಸಿ ಅವರಿಂದ 'ಠಸ್ಸೆ' ಬೀಳದೇ ಫೈಲು ಮುಂದೆ ಹೋಗುವುದೇ ಇಲ್ಲ ಎಂಬುದು ರಾಜ್ಯದ ಹಲವಾರು ಹಿರಿಯ ಪ್ರಾಮಾಣಿಕ ಅಧಿಕಾರಿಗಳ ನೋವು.

ಪರಿಸ್ಥಿತಿ ಹೀಗಿರುವಾಗ ಬೆಳಗಾವಿಯ 'ಸುವರ್ಣಸೌಧ'ದ ವೆಚ್ಚ ಪರಿಷ್ಕರಣೆಯ ಕರ್ಮಕಾಂಡಗಳಿಗೆ ಯಾರ್‍ಯಾರು ಉತ್ತರ ಹೇಳಬೇಕಾಗುತ್ತದೆ ಎಂದು ನೀವೇ ಯೋಚಿಸಿ. ಈ ಅಮೋಘ ವೆಚ್ಚ ಪರಿಷ್ಕರಣೆ ಹಿಂದಿನ ಕೈ ಎಲ್ಲಿದೆ

ನಾಗರಾಳ ದಲಿತರ ಮೇಲ....

ಪುಟ 11ರಿಂದ

ಮುಖಂಡರು ಪರಿಸ್ಥಿತಿಯ ಅಧ್ಯಯನಕ್ಕಾಗಿ ನಿಯೋಗ ಹೋಗಲು ತೀರ್ಮಾನಿಸಿದ್ದಾರೆ.

ಸಂಗಾತಿಗಳಾದ ಕೆ.ನೀಲಾ ಮತ್ತು ಮೀನಾಕ್ಷಿ ಬಾಳಿ ಮುಖಂಡತ್ವದಲ್ಲಿ ಸಂಗಾತಿಗಳಾದ ಪದ್ಮ, ಕೆ.ಸರಸ್ವತಿ, ಹನುಮಂತಪ್ಪ ವಾಲೇಕಾರ, ವರಲಕ್ಷ್ಮಿ, ಮೋನೇಶ್, ಕೆ.ಶಿವಾನಂದ ಇವರನ್ನೊಳಗೊಂಡ ನಿಯೋಗ ನಾಗರಾಳದಲ್ಲಿ ಘಟನೆ ಬಗ್ಗೆ ಸಮೀಕ್ಷೆ ಮಾಡಿದೆ. ಗ್ರಾಮದಲ್ಲಿ ಬಿಲ್ ಕಲೆಕ್ಟರ್ ಶೇಖರಪ್ಪ ಮೇಟಿ ಬಿಟ್ಟರೆ ಯಾರೊಬ್ಬರೂ ಹೇಳಲು ಅಂಜಿದ್ದಾರೆ. ವೆಂಕಟೇಶಪ್ಪ ಗುತ್ತೇದಾರನ ಭಯ ಗ್ರಾಮದಲ್ಲಿ ಆ ಮಟ್ಟಿಗಿದೆ. ಕೆ.ನೀಲಾರವರು ಈ ಗ್ರಾಮದಲ್ಲಿ ಶೇಖರಪ್ಪ ಬಿಟ್ಟರೆ ಉಳಿದವರು ಹೊಟ್ಟೆಗೆ ಅನ್ನ ತಿನ್ನುವುದಿಲ್ಲೇನು? ಎಂದು ಹೇಳಿದ್ದಕ್ಕೆ ಇಡೀ ಗ್ರಾಮ ತಲೆತಗ್ಗಿಸಿದೆ ವಿನಃ ಬಾಯಿ ಮಾತ್ರ ಬಿಟ್ಟಿಲ್ಲ.

ನಿಯೋಗದ ತೀರ್ಮಾನದಂತೆ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಹೆಚ್.ಪದ್ಮ, ಕೆ.ಸರಸ್ವತಿ, ಕರಿಯಪ್ಪ ಅಚ್ಚೊಳ್ಳಿ, ಮಲ್ಲಯ್ಯ ಜಾಲಹಳ್ಳಿ ಶಾಂತಾಬಾಯಿ, ನಾಗರತ್ನ ಸಹಿತ ಹೋಗಿ ದೂರು ದಾಖಲಿಸಲಾಯಿತು. ಎಸ್.ಪಿ.ಯವರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಮೂರ್‍ನಾಲ್ಕು ದಿನ ಕಳೆದ ಮೇಲೆ ಎಸ್.ಪಿ.ಯವರಿಗೆ ಕೇಳಿದಾಗ ಮುದ್ಗಲ್ ಪಿಎಸ್‌ಐಗೆ ಭೇಟಿಯಾಗಲು ತಿಳಿಸಿದರು.

06.06.2011ರಂದು ಶಾಂತಾಬಾಯಿ ಜೊತೆ ಮಲ್ಲಯ್ಯ ಜಾಲಹಳ್ಳಿ, ಕೆ.ಸರಸ್ವತಿ, ಕೆ.ಶಿವಾನಂದ, ಹನುಮಂತಪ್ಪ ವಾಲೇಕರ, ಮೌನೇಶ್ ಇವರುಳ್ಳ ನಿಯೋಗ ಹೋಗಿ ಕೇಳಿದಾಗ ಶಾಂತಾಬಾಯಿಗೆ ರಕ್ಷಣೆ ಕೊಡುವ ಮಾತು ಮಾತ್ರ ಸ್ಪಷ್ಟವಾಗಿ ಪಿಎಸ್‌ಐ ಹೇಳಿದ್ದು ಬಿಟ್ಟರೆ ಉಳಿದಂತೆ ಠಾಣೆ ಗುತ್ತೇದಾರರಿಗೆ ಒತ್ತೆ ಬಿದ್ದಿದ್ದು ಪಿಎಸ್‌ಐ ಮಾತಲ್ಲಿ ಎದ್ದು ಕಾಣುತ್ತಿತ್ತು. ಮೇ 11ರಂದು ದೂರುಕೊಟ್ಟಾಗ ನೀವೇಕೆ ಕ್ರಮ ಕೈಗೊಳ್ಳಲಿಲ್ಲ? 15 ರಂದು ಮುಚ್ಚಳಿಕೆ ಬರೆಸಿಕೊಂಡಿದ್ದೀರಿ 16 ರಂದು ಹಲ್ಲೆಯಾಗಿದೆ. ಹೀಗಿದ್ದ ಮೇಲೆ ಅವರ ಮೇಲೆ ಮಾತ್ರ ದೂರು ತೆಗೆದು ಕೊಳ್ಳಬೇಕಿತ್ತು. ಶಾಂತಾಬಾಯಿ ಮೇಲೆ ಯಾಕೆ ಕ್ರಮ ಕೈಗೊಂಡಿರಿ? ಪೋಲೀಸ್ ಠಾಣೆಯಲ್ಲಿ ಶಾಂತಾಬಾಯಿಗೆ ಅವಾಚ್ಯ ಶಬ್ದಗಳಿಂದ ಅವರ ದಾಯಾದಿಗಳು ಬಯ್ಯುತ್ತಿದ್ದಾಗ ಯಾಕೆ ಸುಮ್ಮನಿದ್ದೀರಿ? ಶಾಂತಾಬಾಯಿಯನ್ನು ಬೀದಿಯುದ್ದಕ್ಕೂ ಹೊಡೆಯುತ್ತಾ ಬಂದಿದ್ದಾರೆ. ನೈಟಿ ಹರಿದು ಅರೆಬೆತ್ತಲೆ ಮಾಡಿದ್ದಾರೆ. ಆಕೆಯ ಸಂಬಂಧಿಗಳು ಊರಲ್ಲಿ ಇಲ್ಲದಿದ್ದರೂ ಅವರ ಹೆಸರ ಮೇಲೆ ಕೇಸ್ ಹಾಕಿದ್ದಾರೆ ಇವೆಲ್ಲ ಇರುವಾಗ ನೀವು ಯಾಕೆ ಸರಿಯಾಗಿ ತನಿಖೆ ಮಾಡುತ್ತಿಲ್ಲ ಎಂದೆಲ್ಲಾ ಪ್ರಶ್ನೆ ಹಾಕಿದರೆ ಅದು ಅವರ ಕುಟುಂಬ ಜಗಳ. ಅವರೇ ಬಗೆಹರಿಸಿಕೊಳ್ಳುತ್ತಾರೆ. ಅದನ್ನು ದೊಡ್ಡದು ಮಾಡಬೇಕಿಲ್ಲ ಎಂದು ಹೇಳಿದರು ಪಿಎಸ್‌ಐ.

ಇವೆಲ್ಲಾ ನೋಡಿದಾಗ ವೆಂಕಟೇಶ ಗುತ್ತೇದಾರನ ಪ್ರಭಾವ ಸಾಕಷ್ಟು ಕೆಲಸ ಮಾಡಿರುವುದು ಮೇಲು ನೋಟದಲ್ಲೇ ನಿಯೋಗಕ್ಕೆ ಅರ್ಥವಾಗಿದೆ. ಈ ಹಿನ್ನಲೆಯಲ್ಲಿ ಭೂ ಮಾಲೀಕರ ಕುತಂತ್ರದ ವಿರುದ್ಧ ಮತ್ತು ಅವರ ಚಮಚಾಗಳ ದೌರ್ಜನ್ಯದ ವಿರುದ್ಧ ಹಾಗೂ ಮುದ್ಗಲ ಠಾಣೆಯ ಮೋಸದ ವಿರುದ್ಧ ಹೋರಾಟಕ್ಕೆ ಇಳಿಯುವುದೊಂದೇ ಈಗ ಉಳಿದಿರುವ ಮಾರ್ಗವಾಗಿದೆ. ●

ಕೇಂದ್ರ ಸಮಿತಿಯ ಸಭೆಯ ಬಳಿಕ ಪ್ರಕಟಿಸಲಾದ ಹೇಳಿಕೆ

ಪುಟ 9 ರಿಂದ

ವಿವಿಧ ಆಯಾಮಗಳನ್ನು ಪರೀಕ್ಷೆಗೊಳಪಡಿಸಲು ರಾಜ್ಯ ಘಟಕಕ್ಕೆ ನಿರ್ದೇಶನ ನೀಡಿದ ಕೇಂದ್ರ ಸಮಿತಿ, ರಾಜ್ಯದಲ್ಲಿ ಪಕ್ಷ ಮತ್ತು ಸಾಮೂಹಿಕ ಚಳವಳಿಯನ್ನು ಬಲಪಡಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲು ಸೂಚನೆ ನೀಡಿದೆ.

ಅದೇ ರೀತಿಯಲ್ಲಿ ತಮಿಳುನಾಡು ಮತ್ತು ಅಸ್ಸಾಂನಲ್ಲೂ ಚುನಾವಣಾ ಫಲಿತಾಂಶದ ವಿವರವಾದ ವಿಮರ್ಶೆ ನಡೆಸಲಾಯಿತು.

ಪ್ರಧಾನ ಪಕ್ಷಗಳ ಸಾಧನೆಯೂ ಕಳಪೆ

ಐದು ರಾಜ್ಯಗಳ ಚುನಾವಣಾ ಫಲಿತಾಂಶದಿಂದ ಕಾಂಗ್ರೆಸ್ ಖಂಡಿತಾ ತೃಪ್ತಿ ಪಟ್ಟುಕೊಳ್ಳುವ ಹಾಗಿಲ್ಲ. ವ್ಯಾಪಕ ಭ್ರಷ್ಟಾಚಾರದಲ್ಲಿ ಮುಳುಗಿದ ಕೇಂದ್ರ ಸರ್ಕಾರದ ಕಳಪೆ ಸಾಧನೆಯ ಪ್ರತಿಫಲನವಾಗಿ ಈ ಚುನಾವಣಾ ಫಲಿತಾಂಶಗಳು ಹೊರಹೊಮ್ಮಿವೆ. ಬೆಲೆ ಏರಿಕೆಯನ್ನು ತಡೆಯುವಲ್ಲಿ ಕೇಂದ್ರದ ವೈಫಲ್ಯದ ಬಗ್ಗೆ ಜನ ಆಕ್ರೋಶಗೊಂಡಿರುವುದು ಫಲಿತಾಂಶದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ತಮಿಳುನಾಡಿನಲ್ಲಂತೂ ತನ್ನ ಹಿರಿಯ ಪಾಲುದಾರ ಡಿಎಂಕೆ ಜೊತೆ ಹೀನಾಯ ಮುಖಭಂಗಕ್ಕೆ ಒಳಗಾಗಿದೆ. ಕೇರಳದಲ್ಲಿ ಸ್ವಲ್ಪದರಲ್ಲೇ ಪಾರಾಗಿದೆ.

ಬಿಜೆಪಿಯ ಪ್ರದರ್ಶನವೂ ಅತ್ಯಂತ ಕಳಪೆಯಾಗಿದೆ. ಅಸ್ಸಾಂನಲ್ಲಿ ಈ ಬಾರಿ ಬಿಜೆಪಿ ಐದು ಸ್ಥಾನಗಳಿಗೆ ಮಾತ್ರ ತೃಪ್ತಿಪಟ್ಟುಕೊಂಡಿದೆ. ಕಳೆದ ಬಾರಿಗಿಂತ ಈ ಸಂಖ್ಯೆ ಅರ್ಧದಷ್ಟಿದೆ ಎಂಬುದು ಗಮನಾರ್ಹ. ಉಳಿದ ಮೂರು ರಾಜ್ಯಗಳಲ್ಲಿ ಒಂದೇ ಒಂದು ಸ್ಥಾನವನ್ನೂ ಗೆಲ್ಲಲಾಗಿಲ್ಲ. ಇದು ಆ ಪಕ್ಷದ ಶೋಚನೀಯ ಪರಿಸ್ಥಿತಿಯನ್ನು ತೋರಿಸಿದೆ.

ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಎಡ ಪಕ್ಷಗಳು ಸೋಲು ಕಂಡಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ನವ ಉದಾರೀಕರಣದ ನೀತಿಗಳನ್ನು ಇನ್ನಷ್ಟು ಆಕ್ರಮಣಕಾರಿಯಾಗಿ ಅನುಸರಿಸುವ ಸಾಧ್ಯತೆ ಇದೆ ಎಂಬ ಎಚ್ಚರಿಕೆಯನ್ನೂ ಪಕ್ಷದ ಕೇಂದ್ರ ಸಮಿತಿ ನೀಡಿದೆ. ಈ ಮೂಲಕ ಜನಸಾಮಾನ್ಯರ ಮೇಲೆ ಮತ್ತಷ್ಟು ಹೊರೆ ಹಾಕಲು ಮುಂದಾದರೆ ಸಿಪಿಐಎಂ ಮತ್ತು ಎಡಪಕ್ಷಗಳಿಂದ ತೀವ್ರ ಪ್ರತಿರೋಧ ಎದುರಿಸಬೇಕಾದೀತು ಎಂಬ ಸಂದೇಶವನ್ನು ಸಮಿತಿ ರವಾನಿಸಲಿದೆ.

ಇದೇ ರೀತಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವಿನ ಸಂಬಂಧಗಳಲ್ಲೂ ಕೇಂದ್ರ ಹಸ್ತಕ್ಷೇಪ ಮಾಡುವ ಸಾಧ್ಯತೆ ಹೆಚ್ಚಿದೆ. ತನ್ನ ಹಿತಾಸಕ್ತಿಯನ್ನು ಕಾಪಾಡಲು ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಹಲ್ಲೆ ನಡೆಸಲೂ ಹೇಸುವುದಿಲ್ಲ ಎಂಬುದನ್ನು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ಇತ್ತೀಚೆಗಿನ ಕಪ್ಪುಹಣ ಮತ್ತು ಭ್ರಷ್ಟಾಚಾರದ ವಿರುದ್ಧದ ಹೋರಾಟವನ್ನು ಹತ್ತಿಕ್ಕಲು ಕೈಗೊಂಡ ಕ್ರಮಗಳ ಮೂಲಕ ತನ್ನ ಧೋರಣೆಯನ್ನು ಜಗಜ್ಜಾಹೀರುಗೊಳಿಸಿದೆ. ಇದರ ಧೋರಣೆಗಳ ವಿರುದ್ಧ ಮತ್ತು ಜನರ ಜೀವನ ಮೌಲ್ಯಗಳ ರಕ್ಷಣೆಗಾಗಿ ಪಕ್ಷ ಸದಾ ಹೋರಾಟ ನಡೆಸಲಿದೆ.

ಪ.ಬಂಗಾಳದಲ್ಲಿ ಹಿಂಸೆ ತಡೆಯಿರಿ, ಪ್ರಜಾಸತ್ತೆಯನ್ನು ರಕ್ಷಿಸಿ

ಎಡರಂಗದ ಮೇಲೆ ಆಗುತ್ತಿರುವ ವ್ಯಾಪಕ ದೌರ್ಜನ್ಯ, ಕಾರ್ಯಕರ್ತರ ಮೇಲಿನ ದೈಹಿಕ ಆಕ್ರಮಣಗಳನ್ನು ತಡೆಯುವುದು ಎಡಪಕ್ಷಗಳ ಮುಂದಿರುವ ಮೊದಲ ಸವಾಲು. ಚುನಾವಣೋತ್ತರ ಸನ್ನಿವೇಶದಲ್ಲಿ ನೂರಾರು ಕಾರ್ಯಕರ್ತರು ಮಾರಣಾಂತಿಕ ಹಲ್ಲೆಗಳಿಗೆ ಗುರಿಯಾಗಿದ್ದಾರೆ. ಹತ್ತಾರು ಕಾರ್ಯಕರ್ತರು ತೃಣಮೂಲದ ಗೂಂಡಾ ಪಡೆಯಿಂದ ಹತರಾಗಿದ್ದಾರೆ. ಪಕ್ಷದ ಕಚೇರಿಗಳು, ಸಾಮೂಹಿಕ ಸಂಘಟನೆಗಳು, ಕಾರ್ಮಿಕ ಸಂಘದ ಕಚೇರಿಗಳನ್ನು ಧ್ವಂಸ ಮಾಡಲಾಗಿದೆ. ಬೆಂಕಿ ಹಾಕಿ ನಿರ್ನಾಮ ಮಾಡಲಾಗಿದೆ. ಇಷ್ಟೆಲ್ಲಾ ಆಗುತ್ತಿದ್ದರೂ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಸರ್ಕಾರ ಇದನ್ನು ತಡೆಯಲು ಎಳ್ಳಷ್ಟು ಕ್ರಮಗಳನ್ನೂ ಕೈಗೊಂಡಿಲ್ಲ. ಇದನ್ನು ತೀವ್ರವಾಗಿ ಖಂಡಿಸಿರುವ ಕೇಂದ್ರ ಸಮಿತಿ, ಈ ಹಿಂಸಾಚಾರದ ವಿರುದ್ಧ ದೇಶವ್ಯಾಪಿ ಆಂದೋಲನಕ್ಕೆ ಕರೆ ನೀಡಿದೆ. ಎಡ, ಪ್ರಜಾಸತ್ತಾತ್ಮಕ ಸಂಘಟನೆಗಳು, ದೇಶಪ್ರೇಮಿ ಶಕ್ತಿಗಳು ಪ್ರಜಾಸತ್ತೆಯನ್ನು ಉಳಿಸುವ ಈ ಹೋರಾಟಕ್ಕೆ ಕೈಜೋಡಿಸುವಂತೆ ಅದು ಮನವಿ ಮಾಡಿದೆ.

ಭ್ರಷ್ಟಾಚಾರದ ವಿರುದ್ಧ

ಉನ್ನತ ಮಟ್ಟದಲ್ಲಿ ನಡೆಯುತ್ತಿರುವ ವ್ಯಾಪಕ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುವ ನೈತಿಕತೆಯನ್ನು ಎಡಪಕ್ಷಗಳು ಉಳಿಸಿಕೊಂಡಿದೆ ಎಂಬುದನ್ನು ಕೇಂದ್ರ ಸಮಿತಿ ಪುನರುಚ್ಚರಿಸಿದೆ. ಭ್ರಷ್ಟಾಚಾರದ ವಿರುದ್ಧ ಎಡಪಕ್ಷಗಳ ವೇದಿಕೆಗೆ ಇನ್ನಷ್ಟು ಸಮಗ್ರತೆ ಬರಲು ಭ್ರಷ್ಟಾಚಾರವನ್ನು ತಡೆಯಲು ಸಹಕಾರಿಯಾಗುವಂತೆ ಮತ್ತಷ್ಟು ಪರಿಣಾಮಕಾರಿ ಸಲಹೆಗಳನ್ನು ಹೊಂದಿರಬೇಕು. ಪ್ರಧಾನಿಯನ್ನೂ ಒಳಗೊಂಡಂತೆ ಉನ್ನತ ಮಟ್ಟದಲ್ಲಿ ಭ್ರಷ್ಟಾಚಾರದ ತನಿಖೆ ನಡೆಸುವ ಪರಿಣಾಮಕಾರಿ ಲೋಕಪಾಲ ಮಸೂದೆಯನ್ನು ಜಾರಿಯ ಬೇಡಿಕೆಯೂ ಒಳಗೊಳ್ಳಬೇಕಿದೆ. ಇದರ ಜೊತೆಗೆ ನ್ಯಾಯಾಂಗ ವ್ಯವಸ್ಥೆಯ ಭ್ರಷ್ಟಾಚಾರಕ್ಕೆ ರಾಷ್ಟ್ರೀಯ ನ್ಯಾಯಾಂಗ ಆಯೋಗ, ಹಣಬಲ ಮತ್ತು ಉದ್ಯಮಿಗಳು –ರಾಜಕಾರಣಿಗಳ ನಂಟನ್ನು ತೊಡೆದು ಹಾಕುವ ಪರಿಣಾಮಕಾರಿ ಕ್ರಮಗಳನ್ನು ಹೊಂದಿರುವ ಚುನಾವಣಾ ಸುಧಾರಣೆ ಮುಂತಾದ ಬೇಡಿಕೆಗಳಿಗೂ ಜೀವ ಕೊಡಬೇಕಿದೆ.

ನವ ಉದಾರೀಕರಣದ ನೀತಿಗಳಿಂದಾಗಿ ಭ್ರಷ್ಟ ವ್ಯವಸ್ಥೆ ಮತ್ತಷ್ಟು ಹೊಸ ಸ್ವರೂಪಗಳೊಂದಿಗೆ ಹೊರಹೊಮ್ಮುತ್ತಿದೆ. ಇಂತಹ ಎಲ್ಲ ಅಕ್ರಮಗಳು ಮತ್ತು ಭ್ರಷ್ಟ ನಂಟಿನ ವಿರುದ್ಧ ಜನರನ್ನು ಅಣಿನೆರೆಸಬೇಕಾದ ಅಗತ್ಯವಿದ್ದು, ಎಡಪಕ್ಷಗಳು ಈ ಕಾರ್ಯವನ್ನು ಕೈಗೆತ್ತಿಕೊಳ್ಳಲಿದೆ.

ಆಹಾರ ಭದ್ರತೆ ಮತ್ತು ಬಿಪಿಎಲ್ ಸರ್ವೇ

ಆಹಾರ ಹಣದುಬ್ಬರ ಶೇಕಡಾ 10ಕ್ಕೆ ಸಮೀಪಿಸುವ ಮೂಲಕ ಆಹಾರದ ಬೆಲೆಯನ್ನು ನಿಯಂತ್ರಣಕ್ಕೆ ತರಲಾಗಿದೆ ಎಂಬ ಕೇಂದ್ರ ಸರ್ಕಾರದ ಹೇಳಿಕೆ ಸುಳ್ಳು ಎಂಬುದು ಮತ್ತೊಮ್ಮೆ ಬಯಲಾಗಿದೆ. ಇದೇ ವೇಳೆ, ಈ ಹಂಗಾಮಿನ ಗೋದಿ ಬೆಳೆಯಲ್ಲಿ ದಾಖಲೆ ಉತ್ಪಾದನೆಯಾಗಿದ್ದು, ದಾಸ್ತಾನು ಮಾಡುವ ವ್ಯವಸ್ಥೆಯನ್ನು ವಿಸ್ತರಿಸುವಲ್ಲಿ ಗಂಭೀರ ನಿರ್ಲಕ್ಷ್ಯ ತಾಳಿರುವುದೂ ಕಂಡುಬಂದಿದೆ.

ಈ ದಾಸ್ತಾನುಗಳನ್ನು ರಾಜ್ಯಗಳಿಗೆ ಬಿಪಿಎಲ್ ದರದಲ್ಲಿ ನೀಡುವಲ್ಲಿ ಕೇಂದ್ರ ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಸೋನಿಯಾ ಗಾಂಧಿ ನೇತೃತ್ವದ ರಾಷ್ಟ್ರೀಯ ಸಲಹಾ ಸಮಿತಿ ಪ್ರಸ್ತಾಪಿಸಿರುವ ಆಹಾರ ಭದ್ರತಾ ಮಸೂದೆಯ ಬಗ್ಗೆ ಅತೃಪ್ತಿ ಮೂಡಿದೆ. ಈ ಪ್ರಸ್ತಾಪಿತ ಮಸೂದೆಯು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸಾರ್ವತ್ರಿಕತೆಯನ್ನು ನಿರಾಕರಿಸುತ್ತದೆ. ಅದರ ಬದಲು ಹೊಸ ನೀತಿಯನ್ನು ಮುಂದಿಡುತ್ತದೆ. ಸಬ್ಸಿಡಿ ದರದಲ್ಲಿ ಆಹಾರ ಧಾನ್ಯವನ್ನು ನಿರೀಕ್ಷಿಸುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಮತ್ತು ಸಾಮಾನ್ಯರಿಗೆ ಈ ನೀತಿಗಳು ಇನ್ನಷ್ಟು ಮೋಸ ಮಾಡಲಿದೆ. ಈಗಿರುವ ಕರಡು ಮಸೂದೆ ಅಸಮ್ಮತವಾಗಿದೆ.

ಮಹಾಧಿವೇಶನ ಮತ್ತು ಪ್ರತಿಭಟನೆಗೆ ಕರೆ:

ಸಿಪಿಐ(ಎಂ) 20ನೇ ಮಹಾಧಿವೇಶನ ಏಪ್ರಿಲ್, 2012, ಕೇರಳದಲ್ಲಿ ನಡೆಯಲಿದೆ ಎಂದು ಕೇಂದ್ರ ಸಮಿತಿ ತೀರ್ಮಾನಿಸಿದೆ. ಶಾಖಾ ಸಮ್ಮೇಳನ ಮತ್ತು ಮೇಲ್ಸಮಿತಿಗಳ ಸಮ್ಮೇಳನಗಳ ವೇಳಾಪಟ್ಟಿಯನ್ನು ನಿಗದಿಗೊಳಿಸಿದೆ. ಅಲ್ಲದೆ ಪಶ್ಚಿಮಬಂಗಾಳದಲ್ಲಿ ಎಡರಂಗದ ಕಾರ್ಯಕರ್ತರ ಮೇಲೆ ನಡೆಯುತ್ತಿರುವ ದಾಳಿಗಳ ವಿರುದ್ಧ ವಿಶಾಲ ಪ್ರಜಾಸತ್ತಾತ್ಮಕ ಜನವಿಭಾಗಗಳ ಬೆಂಬಲವನ್ನು ಅಣಿನೆರೆಸಿ ಜುಲೈ 1 ರಿಂದ 7ರವರೆಗೆ ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸಲು ಕರೆ ನೀಡಿದೆ. ಮತ್ತು ಈ ದಾಳಿಗಳಲ್ಲಿ ನೊಂದ ಸಂತ್ರಸ್ತರಾದ ಕುಟುಂಬಗಳಿಗೆ ಸಹಾಯನಿಧಿ ಸಂಗ್ರಹಕ್ಕೆ ಸಿಪಿಐ(ಎಂ) ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ. ಪೆಟ್ರೋಲಿಯಂ ಬೆಲೆ ಹೆಚ್ಚಳ ಸೇರಿದಂತೆ ಹಣದುಬ್ಬರವನ್ನು ಹೆಚ್ಚಿಸುವ ನೀತಿಗಳ ವಿರುದ್ಧ ಆಂದೋಲನಗಳನ್ನು ತೀವ್ರಗೊಳಿಸಲು ಕೇಂದ್ರ ಸಮಿತಿ ಕರೆ ನೀಡಿದೆ.

"ಹುಸೇನ್ ತಾತ... ಸ್ಸಾರಿ.."

ಪುಟ 16 ರಿಂದ

ಶಾಂತಿಯಿಂದ ಇರಗೊಡದಿದ್ದಾಗ, ನಾನು ಯಾವುದೇ ಬೇರೆ ದಾರಿ ಇಲ್ಲದೆ ತಾಯ್ನಾಡು ತೊರೆದು ಹೋಗಬೇಕಾಗಿ ಬಂದಾಗ, ಕಟಾರ್ ದೇಶದ ಗೌರವ ನಾಗರಿಕತ್ವ ಸ್ವೀಕರಿಸಬೇಕಾಗಿ ಬಂದಾಗ' ಅಭಿಮಾನಿ ದೇವರು ! ಎಲ್ಲಿ ಹೋಗಿದ್ದಿ ಅಂತ ನೀನು ಕೇಳಬಹುದು.

ನೀನು ಲಂಡನಿನಲ್ಲಿ ಸತ್ತೆ ಅಂತ ಸುದ್ದಿ ಬಂದಾಗಲೇ ಗೊತ್ತಾಗಿದ್ದು, ನೀನು ನಮ್ಮ ಮಧ್ಯೆ ಇರಲಿಲ್ಲ ಅಂತ. ಆ ವರೆಗೆ ಇಲ್ಲೋ ಎಲ್ಲೋ ಓಡಾಡುತ್ತಾ ಚಿತ್ರ ಮಾಡುತ್ತಾ ಇದ್ದಿಯಾ. ಖಂಡಿತ ಸೆಂಚುರಿ ಹೊಡಿತಿಯಾ ಅಂತ ಅಂದುಕೊಂಡಿದ್ದೆ. ನೀನು ಎಲ್ಲಿದ್ದರೂ ನಮ್ಮ ಹೃದಯದಲ್ಲಿ ಇದ್ದಿ. ಹೆಮ್ಮೆಯ ಭಾರತೀಯನಾಗಿ ಇದ್ದಿ ಅಂತ ಬಂಡಲ್ ಡಯಲಾಗ್ ನಾನೂ ಹೇಳಬಹುದಿತ್ತು. ಆದರೆ ಸತ್ತವರ ಹತ್ತಿರ ಸುಳ್ಳು ಹೇಳಲಿಕ್ಕೆ ಆಗತ್ತಾ ? ಹುಟ್ಟಿ ಒಂಬತ್ತು ದಶಕಗಳ ಕಾಲ ತುಂಬು ಜೀವನ ನಡೆಸಿದ ತಾಯ್ನಾಡಿನಲ್ಲಿ ನಿನಗೆ ಕೊನೆಗಾಲದಲ್ಲಿ ಇರಲೂ ಆಗಲಿಲ್ಲ. [illegible] ಆಗಲಿಲ್ಲ ಎಂಬ ನಿನ್ನ ನೋವು ಎಷ್ಟು ಗಾಢವಾದ್ದು ಅಂತ ನನಗೆ ಗೊತ್ತು. ಎಲ್ಲಾ ಪದ್ಮ ಪ್ರಶಸ್ತಿಗಳೂ, ಮರಣಾ ನಂತರ ಭಾರತ ರತ್ನ ಪ್ರಶಸ್ತಿ ಕೊಟ್ಟರೂ, ನಿನ್ನ ಕೃತಿಗಳು ಮಿಲಿಯಾಂತರ ಡಾಲರುಗಳಿಗೆ ದಶಕಗಳ ಹರಾಜಾಗುತ್ತಲೇ ಇದ್ದರೂ ಮಾಯದ ಗಾಯ ಅದು.

ಸ್ಸಾರಿ..! ಹುಸೇನ್ ತಾತ..ಸ್ಸಾರಿ.!!

ಆದರೆ ಹುಸೇನ್ ತಾತ ! ನಷ್ಟ ಆದದ್ದು ನಮಗೆ. ನಿನಗಲ್ಲ. ಅದು ನೀನು ಸತ್ತ ಮೇಲೆ ನಮಗೆ ಗೊತ್ತಾಗಿದ್ದು. ಕೆಲವು ತಲೆ ತಿರುಕರು ಏನೇ ಹೇಳಲಿ., ನಿನ್ನ ಅಗಾಧ ಕಲಾಕೃತಿಗಳು, ದೇಶದ ಕಲೆಗೆ, ಸಂಸ್ಕೃತಿಗೆ ನಿನ್ನ ಕೊಡುಗೆ ಎಂದೂ ಮರೆಯಲಾರದ್ದು. ಮರೆಯಾಗುವುದೂ ಇಲ್ಲ. ಯಾರಿಗೂ ಮರೆಸಲು ಆಗುವುದಿಲ್ಲ.

ನೀನು ಮುಸ್ಲಿಂ ಎಂಬ ಒಂದೇ ಕಾರಣಕ್ಕೆ ನಿನ್ನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಧೂಳೀಪಟ ಮಾಡಿ ದೇಶಾಂತರ ಮಾಡಿದರಲ್ಲಾ. ಯಾವ ಕಲಾವಿದನಾದರೂ ಯಾರದಾದರೂ ಅಭಿವ್ಯಕ್ತಿ ಸ್ವಾತಂತ್ರ್ಯ ಹೇಗೆ ಸುರಕ್ಷಿತವಾದೀತು? ಇನ್ಯಾವುದೇ ಕ್ಷುಲ್ಲಕ ಕಾರಣಕ್ಕೆ ಯಾರದೇ ಅಭಿವ್ಯಕ್ತಿ ಸ್ವಾತಂತ್ರ್ಯ ಯಾವಾಗ ಬೇಕಾದರೂ ನಾಶ ಮಾಡಬಹುದಲ್ಲ. ಇದು ನಮ್ಮೆಲ್ಲರಿಗೂ ನಷ್ಟ ಅಲ್ಲವಾ ?

ರಾಮಾಯಣ; ಮಹಾಭಾರತಗಳ ನಿನ್ನ ಉದಾತ್ತ ಚಿತ್ರಗಳಿಗೆ ನಗ್ನತೆಯ ಕಳಂಕ ಹಚ್ಚಿದರಲ್ಲ. ಕಲೆಯ ಅಷ್ಟೇನು ಪರಿಚಯವಿಲ್ಲದ ಲಕ್ಷಾಂತರ ಮುಗ್ಧ ಯುವಜನರ ಜನರ ಕಲಾಭಿರುಚಿಯನ್ನು ಸಂಕುಚಿತ ರಾಜಕೀಯಕ್ಕೆ ಬಲಿ ಕೊಟ್ಟರಲ್ಲ. ಖಜುರಾಹೋ, ಕೋನಾರ್ಕ ಮತ್ತು ಬೇಲೂರು ಹಳೇಬೀಡಿನ ನಗ್ನ ಕಲಾಕೃತಿಗಳೂ ಭಾರತಿಯ ಸಂಸ್ಕೃತಿಯ ಭಾಗಗಳು. ಪುರುಷ ಅಥವಾ ಸ್ತ್ರೀಯ ದೇಹ ಪ್ರಕೃತಿಯ ಅದ್ಭುತ ಸುಂದರ ಸೃಷ್ಟಿಗಳಲ್ಲಿ ಒಂದು. ಕಲಾಕೃತಿಗಳು ಸುಂದರ ಉಡುಗೆ ತೊಡುಗೆಗಳ ಫೋಟೋ ಜಾಹೀರಾತುಗಳಲ್ಲ. ನಮ್ಮ ಜನತೆಯಲ್ಲಿ ಈ ಕನಿಷ್ಟ ಕಲಾಭಿರುಚಿ ತರುವುದು ಎಂದಾದರೂ ಸಾಧ್ಯವೇ ?

ನಿನ್ನಂತಹ ವಿಶ್ವವಿಖ್ಯಾತ ಕಲಾವಿದ ಸತ್ತಾಗ "ಹಿಂದುಗಳ ಮನನೋಯಿಸಿದ ಒಬ್ಬ ಕೆಟ್ಟ ಸಿನಿಮಾ ಪೋಸ್ಟರ್ ಕಲಾವಿದ ಸತ್ತ. ಒಳ್ಳೆಯದಾಯಿತು." ಅಂತ ನೂರಾರು ವೆಬ್ ಸೈಟುಗಳಲ್ಲಿ ಬ್ಲಾಗುಗಳಲ್ಲಿ, ಎಸ್.ಎಂ.ಎಸ್.ಗಳಲ್ಲಿ, ಮೈಲುಗಳಲ್ಲಿ, ಕಾಫೀ–ಟೀ ಅಂಗಡಿಗಳಲ್ಲಿ ಎಷ್ಟು ಕಾರಿದರಲ್ಲ. ಸತ್ತವರ ಬಗ್ಗೆ ಕೆಟ್ಟದು ಮಾತನಾಡಬಾರದು ಎಂಬ ಕನಿಷ್ಟ ಶಿಷ್ಟಾಚಾರವನ್ನು ಪುನಃ ಸ್ಥಾಪಿಸುವುದು ಹೇಗೆ?

ನಿನ್ನಂತಹ ವಿಶ್ವವಿಖ್ಯಾತ ಕಲಾವಿದನನ್ನು ಮುಸ್ಲಿಂ ಎಂಬ ಒಂದೇ ಕಾರಣಕ್ಕೆ ಇಂತಹ ಅವಮಾನ, ಸಂಕಷ್ಟಗಳಿಗೆ ಗುರಿಮಾಡಿದರಲ್ಲ. ನಮ್ಮ ಪ್ರಜಾಸತ್ತಾತ್ಮಕ ಸೆಕ್ಯುಲರ್ ವ್ಯವಸ್ಥೆಯ ಯಾವ ಭಾಗ ಸಹ ಇದನ್ನು ತಡೆಯುವುದರಲ್ಲಿ ವಿಫಲವಾಯಿತಲ್ಲ. ನಮ್ಮದು ಪ್ರಜಾಸತ್ತಾತ್ಮಕ ಸೆಕ್ಯುಲರ್ ಮಾನವೀಯ ವ್ಯವಸ್ಥೆ ಅಂತ ನಮ್ಮನ್ನು ನಾವೇ ನಂಬಿಸುವುದು ಹೇಗೆ ?

ಈಗ ಗೊತ್ತಾಯಿತಾ? ಹುಸೇನ್ ತಾತ ! ನಿನಗಲ್ಲ ಸ್ಸಾರಿ ಅಂತ ಹೇಳಬೇಕಾದ್ದು. ನಮಗೇ ನಾವೇ ಸ್ಸಾರಿ ಕೇಳಿಕೊಳ್ಳಬೇಕು. ಇನ್ನೊಂದು ಬಾರಿ ಸ್ಸಾರಿ ಆಗದಂತೆ ನೋಡಿಕೊಳ್ಳಬೇಕು. ನೀನು ಸತ್ತ ಮೇಲೆ ನಮಗೆ ಬುದ್ಧಿ ಬಂತು. ಬಂತೇ ಅಂತ ಹುಬ್ಬೇರಿಸಬೇಡ.

...ಇನ್ನೊಮ್ಮೆ ಸ್ಸಾರಿ..! ಹುಸೇನ್ ತಾತ..ಸ್ಸಾರಿ.!!

ಇತಿ
ವಸಂತ

ಇದೆಂಥಾ ನಡಿಗೆ

ಪುಟ 3 ರಿಂದ

ಕಣ್ಣೆತ್ತಿಯೂ ನೋಡಲಿಲ್ಲ. ಮಾಧ್ಯಮಗಳ ಕ್ಯಾಮರಾ ಇತ್ತ ತಿರುಗಲೇ ಇಲ್ಲ. ಭಾರತ ಮಾತೆಯನ್ನು ಪೂಜಿಸುವವರು ತಾವೇ ಎಂದು, ಅದಕ್ಕಾಗಿಯೇ ಅವತರಿಸಿದ್ದೇವೆಂಬ ಬಿಜೆಪಿ ಉತ್ತರ ಖಂಡ ಸರ್ಕಾರ ರಾಮದೇವ್ ಆರೋಗ್ಯದ ಬಗ್ಗೆ ಗಂಟೆಗೊಮ್ಮೆ ಬುಲೆಟಿನ್ ಹೇಳುತ್ತಿದ್ದ ಹೊತ್ತಲ್ಲೇ ಕಪ್ಪು ಹಣದ ವಿರುದ್ಧ 'ಹಾರಾಡುತ್ತಿದ್ದ' ಈ ಬಿಜೆಪಿ–ಆರ್‌ಎಸ್‌ಎಸ್ ಗಳು ಹರಿದ್ವಾರದ ಗಂಗಾನದಿ ಪಾತ್ರದಲ್ಲಿನ ಕಪ್ಪು ದಂಧೆಯನ್ನು ಬೆಂಬಲಿಸುತ್ತಿತ್ತು ! ಓಹ್ ! ಈ ದಂಧೆಗಾರರು 'ಸ್ವದೇಶಿ'ಗಳು ಅಲ್ಲವೇ?

ನಿಗಮಾನಂದರ ಸಾವು ಸಹಜವೇ? ಅಲ್ಲ ಎನ್ನುತ್ತಿದ್ದಾರೆ ಅವರ ಗುರು ಹಾಗೂ ಸಂಬಂಧಿಕರು. ಇವರಿಗೆ ಗಣಿ ಮಾಫಿಯಾವೇ ವಿಷ ನೀಡಿ ಕೊಂದಿದೆ ಎಂದು ಖಚಿತ ನುಡಿಯುತ್ತಾರೆ ಅವರು. ನಿಗಮಾನಂದರಿಗೆ ವಿಷ ತೆಗೆಯಲು ಬಳಸುವ ಔಷಧಿ ಕೊಡಲಾಗಿದೆಯೆಂಬುದನ್ನು ಆಧಾರವಾಗಿ ನೀಡುತ್ತಾರೆ ಅವರು. ಇದು ಮತ್ತಷ್ಟು ಘೋರ ಸಂಗತಿ. ಹೀಗೆ ಹೋರಾಟಗಳನ್ನು ನಾಶಗೊಳಿಸತೊಡಗಿದರೆ ಎಲ್ಲಿ ಪ್ರಜಾಪ್ರಭುತ್ವ ಉಳಿಯಬೇಕು?

ಇದೇ ಹೊತ್ತಿನಲ್ಲಿ ಹೋರಾಟದ ಯಾವುದೇ ವಿಧಾನಗಳು ಜನಸಮೂಹಗಳನ್ನು ಒಳಗೊಳ್ಳುವಂತೆಯೇ ಇರಬೇಕು ಎಂಬ ಸತ್ಯವನ್ನು ಅರಿಯಬೇಕು. ಕೇವಲ ವೈಯಕ್ತಿಕ ಪ್ರಯತ್ನಗಳು ಸಫಲವಾಗಬಲ್ಲವೇ?ಒಂದೆಡೆ ಅದು ಗುರಿ ಮುಟ್ಟುವ ಯಶಸ್ಸಿನ ಪ್ರಶ್ನೆಯೂ ಹೌದು, ಪ್ರಭುತ್ವದ ದಮನ ಚಕ್ರ ಸುಲಭವಾಗಿ ಹರಿಹಾಯ್ದು ಬಿಡುವ ಸಂಭವವೂ ಹೌದು! ಹೀಗಿದ್ದಾಗಲೂ ಹಠ ಯೋಗಿಯ ಸಾವು ವ್ಯರ್ಥವಲ್ಲ ಎಂದು ಹೇಳಬಹುದು. ಆದರೆ ಉದಾರೀಕರಣದ ಮಹಾ ಭಾರತದಲ್ಲಿ ಬಲಿಯಾಗುವ ಇಂತಹ ಜೀವಗಳೆಷ್ಟು? ●

ಯುಪಿಎ ದರ್ಬಾರ್ ...

ಪುಟ 12 ರಿಂದ

2ಜಿಯಂತೆ ಕಾರ್ಪೊರೇಟ್ ಕುತಂತ್ರಗಳಿಗೆ ಆರ್ಥಿಕ ತಜ್ಞ ಡಾ.ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರಕಾರ ಮಣೆ ಹಾಕಿರುವುದನ್ನು ಈಗ ಸ್ವತಃ ಸಿಎಜಿ ಬಯಲಿಗೆಳೆದಿದೆ. ಈ ಬಗ್ಗೆ ಪ್ರಧಾನ ಮಂತ್ರಿಗಳು ಹೇಳಿಕೆ ನೀಡಬೇಕು. ಏಕೆಂದರೆ ಇಲ್ಲಿ ವಿದ್ಯುತ್ ಮತ್ತು ರಸಗೊಬ್ಬರ ಉತ್ಪಾದನೆಗೆ ಬೇಕಾದ ಒಂದು ಸಂಪನ್ಮೂಲವಾದ ನೈಸರ್ಗಿಕ ಅನಿಲಕ್ಕೆ ಹೆಚ್ಚಿನ ಬೆಲೆ ತೆರಬೇಕಾದ ಪ್ರಶ್ನೆ ಅಡಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಹೇಳಿದೆ.

ಎರಡು ವಾರಗಳಲ್ಲಿ ತಮ್ಮ ಟಿಪ್ಪಣಿ ಕೊಡುವಂತೆ ತೈಲ ಮತ್ತು ನೈಸರ್ಗಿಕ ಅನಿಲ ಮಂತ್ರಾಲಯವನ್ನು ಮಹಾಲೆಕ್ಕ ಪರಿಶೋಧಕರು ಕೇಳಿದ್ದಾರೆ. ಆದರೆ ಈ ವರದಿಯಲ್ಲಿರುವ ವಿವಿಧ ಅಂಶಗಳನ್ನು ಪರಿಶೀಲಿಸಲು ತಮಗೆ ಕನಿಷ್ಟ 5–6 ವಾರಗಳಾದರೂ ಬೇಕು ಎಂದು ಈ ಇಲಾಖೆಯ ಅಧಿಕಾರಿಗಳು ಹೇಳುತ್ತಿದ್ದಾರಂತೆ. ಅಂದರೆ ಈ ಮಳೆಗಾಲದ ಅಧಿವೇಶನದಲ್ಲಿ ಸಿಎಜಿ ವರದಿ ಸಂಸತ್ತಿನಲ್ಲಿ ಮಂಡನೆಯಾಗದಂತೆ ಯುಪಿಎ–2 ಸರಕಾರ ಪ್ರಯತ್ನ ನಡೆಸಿದೆ ಎಂದಾಯಿತು.

★

ಎಸ್‌ಇಝುಡ್‌ಗಳನ್ನೂ ಮೀರಿಸುವ ಎನ್‌ಎಂಐಝುಡ್‌ಗಳು ಬರಲಿವೆ, ಜೋಕೆ!

ಪ್ರಧಾನ ಮಂತ್ರಿಗಳ ನೇತೃತ್ವದ ಸಮಿತಿಯೊಂದು ಮಂಜೂರು ಮಾಡಿರುವ 'ಕರಡು ಉತ್ಪಾದನಾ ಧೋರಣೆ' ಎನ್‌ಎಂಐಝುಡ್ ಗಳನ್ನು ಅಂದರೆ 'ರಾಷ್ಟ್ರೀಯ ಉತ್ಪಾದನಾ ಮತ್ತು ಹೂಡಿಕೆ ವಲಯಗಳು' ಎಂಬವುಗಳನ್ನು ರಚಿಸಲು ಹಾದಿ ಪ್ರಶಸ್ತಗೊಳಿಸಿದೆ. ಇದು ಈಗ ದೇಶಾದ್ಯಂತ ಪ್ರತಿಭಟನೆಗಳನ್ನು ಎದುರಿಸುತ್ತಿರುವ ಸುಮಾರು 500 ಎಸ್‌ಇಝುಡ್(ವಿಶೇಷ ಆರ್ಥಿಕ ವಲಯ)ಗಳ ಒಂದು ದೊಡ್ಡ ಆವೃತ್ತಿಯಾಗಿದ್ದು ಪ್ರತಿಭಟನೆಗಳಿಗೆ ಸ್ಪಂದಿಸದ ಸರಕಾರ ಹೊಂದಿರುವರುವ ತುಚ್ಛೀಕಾರದ ಭಾವನೆಯನ್ನು ತೋರಿಸುತ್ತದೆ ಎಂದು ಸಿಐಟಿಯು ಇದನ್ನು ಬಲವಾಗಿ ಖಂಡಿಸಿದೆ.

ವಾಸ್ತವವಾಗಿ ಯುಪಿಎ–2 ಸರಕಾರದ 'ಉತ್ಪಾದನಾ ಧೋರಣೆ' ಕಾರ್ಪೊರೇಟ್ ಅಜೆಂಡಾವೇ ಆಗಿದೆ. ಕಾರ್ಪೊರೇಟ್ ಹಿತಗಳ ಕೈಸೆರೆಯಲ್ಲಿರುವ ಸರಕಾರ ಸರಕು ತಯಾರಿಕಾ ವಲಯದ ಪಾಲನ್ನು ಹೆಚ್ಚಿಸುವ ನೆಪದಲ್ಲಿ ಭೂಮಿ ಲೂಟಿ, ಅಪಾರ ತೆರಿಗೆ ರಿಯಾಯ್ತಿಗಳು ಮತ್ತು ಸುಮಾರಾಗಿ ಎಲ್ಲ ಕಾರ್ಮಿಕ ಕಾನೂನುಗಳಿಂದ ವಿನಾಯ್ತಿಗಳನ್ನು ಕಾರ್ಪೊರೇಟ್ ಕುಳಗಳಿಗೆ ದಯಪಾಲಿಸಲು ಈ ಎನ್‌ಎಂಐಝುಡ್ ಮೂಲಕ ಮುಂದಾಗಿದೆ.

ಸುಮಾರು 46 ಕೋಟಿ ಬಡಕಾರ್ಮಿಕರ ಬದುಕನ್ನು ನರಕವಾಗಿಸಲಿರುವ ಈ ಎನ್‌ಎಂ ಐಝುಡ್‌ಗಳನ್ನು ಕಾರ್ಮಿಕ ಆಂದೋಲನ ಐಕ್ಯತೆಯಿಂದ ಹಿಮ್ಮೆಟ್ಟಿಸಬೇಕೆಂದು ಸಿಐಟಿಯು ಕರೆ ನೀಡಿದೆ.

★

ನಿರೀಕ್ಷೆಯ ಮಟ್ಟದ ಹತ್ತಿರವೂ ಸುಳಿಯದ

ಮುಂಗಾರು ಬೆಂಬಲ ಬೆಲೆ ಪ್ರಕಟಣೆ

ಯುಪಿಎ–2 ಸರಕಾರಕ್ಕೆ ರೈತಾಪಿಗಳ ಸಂಕಷ್ಟಗಳ ಬಗ್ಗೆ ಎಂತಹ ನಿರ್ಲಕ್ಷ್ಯ ಹೊಂದಿದೆ ಎಂಬುದಕ್ಕೆ ಈ ವರ್ಷದ ಬೆಂಬಲ ಬೆಲೆ ಪ್ರಕಟಣೆ ಮತ್ತೊಂದು ಉದಾಹರಣೆ. ಆರ್ಥಿಕ ವಿಷಯಗಳ ಸಂಪುಟ ಸಮಿತಿ ಪ್ರಕಟಿಸಿರುವ ಬೆಂಬಲ ಬೆಲೆಗಳು ರೈತರ ನಿರೀಕ್ಷೆಯ ಹತ್ತಿರವೂ ಸುಳಿಯುವಂತದ್ದಲ್ಲ, ಸಾಗುವಳಿಯಲ್ಲಿ ತೊಡಗಿರಲು ಯಾವುದೇ ಉತ್ತೇಜನವನ್ನು ಕೊಡುವಂತದ್ದಲ್ಲ ಎಂದು ರೈತ ಸಂಘಟನೆಗಳು ಖೇದ ವ್ಯಕ್ತ ಪಡಿಸಿವೆ.

ಸ್ವಾಮಿನಾಥನ್ ಆಯೋಗ ಬೆಂಬಲ ಬೆಲೆ ಲೆಕ್ಕ ಹಾಕುವಾಗ ಉತ್ಪಾದನಾ ವೆಚ್ಚ+50% ಎಂಬ ಸೂತ್ರವನ್ನು ಅನುಸರಿಸಬೇಕು ಎಂದು ಶಿಫಾರಸು ಮಾಡಿತ್ತು. ಇದನ್ನು ಕಾಂಗ್ರೆಸ್ ನೇತೃತ್ವದ ಸರಕಾರ ಸಂಪೂರ್ಣವಾಗಿ ನಿರ್ಲಕ್ಷಿಸಿದೆ; 2010–11ರಲ್ಲಿ ಪ್ರಕಟಿಸಿದ ಬೆಂಬಲ ಬೆಲೆಗಳು 18ರಲ್ಲಿ 16 ರಾಜ್ಯಗಳಲ್ಲಿ ಕೇವಲ ಉತ್ಪಾದನಾ ಖರ್ಚಿನ ಹತ್ತಿರ ಬಂದಿದ್ದವು. ಅದರ ಆಧಾರದಲ್ಲಿ ಲೆಕ್ಕ ಹಾಕಿದರೂ ಈ ವರ್ಷಕ್ಕೆ ಸಾಮಾನ್ಯ ಭತ್ತದ ಕನಿಷ್ಟ ಬೆಂಬಲ ಬೆಲೆ ರೂ.1149 ಆದರೂ ಆಗಬೇಕಿತ್ತು. ಆದರೆ ಯುಪಿಎ–2 ಸರಕಾರ ಪ್ರಕಟಿಸಿರುವ ಬೆಂಬಲ ಬೆಲೆ ಕ್ವಿಂಟಾಲಿಗೆ ಕೇವಲ ರೂ.1080, ಕಳೆದ ವರ್ಷಕ್ಕಿಂತ 80ರೂ. ಹೆಚ್ಚಷ್ಟೇ. ಅಖಿಲ ಭಾರತ ಕಿಸಾನ್ ಸಭಾ ಈ ವರ್ಷ ಬೆಂಬಲ ಬೆಲೆ 1500ರೂ ಇರಬೇಕು ಎಂದು ಲೆಕ್ಕ ಹಾಕಿ ಕೇಳಿತ್ತು. ಕೇರಳದ ಎಲ್‌ಡಿಎಫ್ ಸರಕಾರ ಅದಾಗಲೇ 1400ರೂ. ಕನಿಷ್ಟ ಬೆಂಬಲ ಬೆಲೆ ಘೋಷಿಸಿತ್ತು ಎಂಬುದನ್ನು ಇಲ್ಲಿ ಗಮನಿಸಬಹುದು. ಇದರೊಂದಿಗೆ ಇತರ ಉತ್ತೇಜಕಗಳನ್ನೂ ಅದು ಪ್ರಕಟಿಸಿತ್ತು.

ಸಾಮಾನ್ಯವಾಗಿ ಬುಡಕಟ್ಟು ಮತ್ತು ಅಂಚಿನಲ್ಲಿರುವ ರೈತರು ಬೆಳೆಯುವ ರಾಗಿ, ಜೋಳದಂತಹ ಧಾನ್ಯಗಳ ಉತ್ಪಾದನಾ ಖರ್ಚು 21ರಿಂದ 30ಶೇ.ದವರೆಗೆ ಏರಿಕೆಯಾಗಿದೆ ಎಂದು ಸ್ವತಃ 'ಕೃಷಿ ಖರ್ಚುಗಳು ಮತ್ತು ಬೆಲೆಗಳ ಆಯೋಗ' (ಸಿಎಸಿಪಿ) ಕಳೆದ ವರ್ಷವೇ ಹೇಳಿದ್ದರೂ, ಈ ವರ್ಷ ಮತ್ತಷ್ಟು ಏರಿಕೆಯಾಗಿದ್ದರೂ ಅವುಗಳ ಬೆಂಬಲ ಬೆಲೆಗಳಲ್ಲಿಯೂ ಕೇವಲ 80–100ರೂ. ಏರಿಕೆ ಮಾಡಲಾಗಿದೆ. ಮುಂಬೈಯ ಟಾಟಾ ಸಮಾಜವಿಜ್ಞಾನ ಸಂಸ್ಥೆಯಂತಹ ಪ್ರತಿಷ್ಠಿತ ಸಂಸ್ಥೆಯ ಅಧ್ಯಯನಗಳು ಹತ್ತಿಯ ಉತ್ಪಾದನಾ ಖರ್ಚು ವಿಪರೀತವಾಗಿ ಏರಿದೆ ಎಂದು ತೋರಿಸಿದ್ದರೂ, ವಿದರ್ಭದಂತಹ ಪ್ರದೇಶಗಳಲ್ಲಿ ರೈತರು ಇದರಿಂದಾಗಿ ಆತ್ಮಹತ್ಯೆಗಳನ್ನು ಮಾಡಿಕೊಳ್ಳುವ ಪರಿಸ್ಥಿತಿ ಬಂದಿದ್ದರೂ 2009–10ರಿಂದ ಹತ್ತಿಯ ಬೆಂಬಲ ಬೆಲೆಯನ್ನು ಎಳ್ಳಷ್ಟೂ ಏರಿಸಿಲ್ಲ.

ಒಟ್ಟಾರೆಯಾಗಿ ಯುಪಿಎ–2 ಸರಕಾರದ ಬೆಂಬಲ ಬೆಲೆ ಪ್ರಕಟಣೆ ರೈತರ ಸಂಕಟಗಳ ಅಪಹಾಸ್ಯ ಮಾಡಿದೆ, ಯುಪಿಎ ಸರಕಾರ ರಾಜ್ಯ ಸರಕಾರಗಳು, ರೈತರ ಸಂಘಟನೆಗಳ ಪ್ರತಿನಿಧಿಗಳು ಮತ್ತು ತಜ್ಞರೊಂದಿಗೆ ಉತ್ಪಾದನಾ ವೆಚ್ಚಗಳ ಬಗ್ಗೆ ಸಮಾಲೋಚನೆ ನಡೆಸಿ ಹೆಚ್ಚು ವಾಸ್ತವಿಕವಾದ, ಪರಿಷ್ಕೃತ ಬೆಂಬಲ ಬೆಲೆಗಳನ್ನು ಪ್ರಕಟಿಸಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ ಆಗ್ರಹಿಸಿದೆ. ●

ಬೀದಿವ್ಯಾಪಾರಿಗಳಿಂದ 24 ಗಂಟೆ ಧರಣಿ

ಪುಟ 6 ರಿಂದ

ಪ್ರಸನ್ನ, ಕಾಲೇಜು ಅಧ್ಯಾಪಕರ ಸಂಘಟನೆ 'ಆಮುಕ್ತ' ನ ಪ್ರೊ। ಹಯವದನ ಮೂಡುಸಗ್ರಿ, ಆಟೋ ಚಾಲಕರ ಸಂಘಟನೆಯ ಎಲ್.ಟಿ. ಸುವರ್ಣ, ಕಟ್ಟಡ ಕಾರ್ಮಿಕರ ಸಂಘಟನೆಯ ವಾಸುದೇವ ಜೆ.ಪಿ. ದಲಿತ ಹಕ್ಕುಗಳ ಹೋರಾಟ ಸಮಿತಿಯ ಲಿಂಗಪ್ಪ ನಂತೂರು ಮೊದಲಾದವರು ಮಾತನಾಡಿದರು. ಕಾಂಗ್ರೆಸ್, ಜೆಡಿ(ಎಸ್) ಕಾರ್ಪೊರೇಟರು ಗಳಲ್ಲದೆ ಆ ಪಕ್ಷಗಳ ಬೇರೆ ಮುಖಂಡರೂ ಭಾಗವಹಿಸಿ ಬೆಂಬಲಿಸಿ ಮಾತನಾಡಿದರು.

ಸ್ಥೈರ್ಯ ನೀಡಿದ ಹೋರಾಟ

ಜೂನ್ 16ರ ಬೆಳಿಗ್ಗೆ ಧರಣಿ ಸತ್ಯಾಗ್ರಹ ಕೊನೆಗೊಂಡಾಗ ಹೋರಾಟ ಸಮಿತಿಯ ಮುಖಂಡರುಗಳೂ, ಪಾಲಿಕೆಯ ಕಾಂಗ್ರೆಸ್ ಹಾಗೂ ಜೆಡಿ(ಎಸ್)ಕಾರ್ಪೊರೇಟರ್‌ಗಳೂ ಭಾಗವಹಿಸಿದ್ದರು. ಸಿಐಟಿಯು ರಾಜ್ಯ ಸಮಿತಿ ಮುಖಂಡರಲ್ಲೊಬ್ಬರೂ ಬೆಳ್ತಂಗಡಿಯ ನ್ಯಾಯವಾದಿಗಳೂ ಆದ ಬಿ.ಎಂ.ಭಟ್ ಹೋರಾಟಕ್ಕೆ ಇನ್ನಷ್ಟು ಹುರುಪು ನೀಡುವಂತೆ ಸಮಾರೋಪ ಭಾಷಣ ಮಾಡಿದರು. ಜಿಲ್ಲೆಯ ಕಾಂಗ್ರೆಸ್‌ನ ಹಿರಿಯ ಮುಖಂಡರಾದ ಸುರೇಖಾ ಬಲ್ಲಾಳ್ ಕೂಡಾ ಈ ಸಂದರ್ಭದಲ್ಲಿ ಮಾತನಾಡಿದರು.

ಡಿವೈಎಫ್ಐ ಮಂಗಳೂರು ನಗರ ಸಮಿತಿ ಧರಣಿಗೆ ಬೆಂಬಲ ವ್ಯಕ್ತಪಡಿಸಿ ಬೆಸೆಂಟ್ ಕಾಲೇಜ್ ವೃತ್ತದಿಂದ ನಗರಪಾಲಿಕೆವರೆಗೆ ಮೆರವಣಿಗೆಯಲ್ಲಿ ಬಂದಾಗ, ಧರಣಿ ನಿರತರು ಅವರನ್ನು ಸಂಭ್ರಮದಿಂದ ಸ್ವಾಗತಿಸಿದರು. ಬೀದಿ ಬದಿ ವ್ಯಾಪಾರಿಗಳು ತಾವೇ ಪದೇ ಪದೇ ಘೋಷಣೆ ಹಾಕುತ್ತಿದ್ದರೂ, ಕ್ರಾಂತಿಗೀತೆಗಳ ಚರಣಗಳಿಗೆ ತಾಳದೊಂದಿಗೆ ಧ್ವನಿಗೂಡಿಸುತ್ತಿದ್ದರು. ಅವರಲ್ಲಿ ಸಂಘಟನೆ ನೀಡಿದ ಕೆಚ್ಚಿಗೆ ಉದಾಹರಣೆ. ಏಳು ನೂರಕ್ಕೂ ಮೀರಿ ಜನ ಧರಣಿಯಲ್ಲಿ ಭಾಗವಹಿಸಿ ಈ ಹೋರಾಟಕ್ಕೆ ಬೆಂಬಲಿಸಿದ್ದಾರೆ. ಪಾಲಿಕೆಯ ಮೊಗಸಾಲೆ ಯಲ್ಲಿ, ಜಗಲಿಗಳ ಚಾವಣಿಯ ಕೆಳಗೆ ಹೊರಗೆ ಮಳೆ ಸುರಿಯುತ್ತಿದ್ದರೂ ಲೆಕ್ಕಿಸದೆ ನೂರ ಐವತ್ತರಷ್ಟು ಮಂದಿ ಸತ್ಯಾಗ್ರಹಿಗಳು ರಾತ್ರಿ ಕಳೆದು ಧರಣಿಗೆ ಬಲ ಒದಗಿಸಿದರು. ರಾತ್ರಿ 2 ಗಂಟೆಯವರೆಗೂ ವ್ಯಾಪಾರಿಗಳ ಅನುಭವ ಕಥನಗಳನ್ನು ಕೇಳಿಸಿಕೊಳ್ಳಲಾಯ್ತು. ಸಂಘಟನೆ ಹೇಗೆ ಇರಬೇಕು. ಹಾಗೂ ಮುಂದುವರಿಯಬೇಕು ಎಂಬ ಬಗ್ಗೆ ವಸಂತ ಆಚಾರಿ ಹಾಗೂ ಸುನೀಲ್ ಕುಮಾರ್ ಬಜಾಲ್‌ರವರು ನೀಡಿದ ತರಗತಿ ಹಾಗೂ ನಡೆದ ಯಶಸ್ವಿ ಧರಣಿ ಹೋರಾಟವನ್ನು ಗೆಲ್ಲುವವರೆಗೂ ಒಯ್ಯುವ ಸ್ಥೈರ್ಯ ವನ್ನು ಬೀದಿ ಬದಿ ವ್ಯಾಪಾರಿಗಳಿಗೆ ನೀಡಿದೆ. ●

Posted on every Satuarday Postal Reg. No. RNP/KA/BG

JANASHAKTHI KANNADA VARA PATRIKE JUNE 26, 2011 Price : Rs. 5/- RNI No. KARKAN /2006/17926
Posted at MBC Bangalore GPO

"ನೀನು ಇತರ ಕಲಾವಿದರಂತೆ ಸ್ಟುಡಿಯೋ ಕಟ್ಟಿಕೊಂಡು ಅಲ್ಲೇ ಕೂಪಮಂಡೂಕ ಆಗಲಿಲ್ಲ. ಜನರಿಗೆ ಸಮಾಜದ ಆಗು ಹೋಗುಗಳಿಗೆ ನಿತ್ಯ ಸ್ಪಂದಿಸಿದೆ. ಹಲವು ಬಾರಿ ಪ್ರತಿಭಟಿಸಿದೆ. ಜನಮ್ ತಂಡದ ಜನತೆಯ ಕಲಾವಿದ ಸಪ್ಧರ್ ಹಷ್ಮಿ ಕೊಲೆ ಆದಾಗ, ಅದೇ ಸ್ಥಳಕ್ಕೆ ಹೋಗಿ ಕಲಾಕೃತಿಯೊಂದನ್ನು ರಚಿಸಿದೆಯಂತೆ. ಆಗ ನಿನ್ನ ಬಗ್ಗೆ ಹೆಮ್ಮೆ ಆಯಿತು......."



"ಹುಸೇನ್ ತಾತ... ಸ್ಸಾರಿ.."

(ಮಕಬುಲ್ ಫಿದಾ ಹುಸೇನ್‌ಗೆ ಒಂದು ಬಹಿರಂಗ ಪತ್ರ)

ವಸಂತ

ಹುಸೇನ್ ತಾತ,

ನಿನ್ನ ಪರಿಚಯ ನನಗೆ ಮೊದಲಿಗೆ ಆಗಿದ್ದು ಆಚಾರ್ಯ ಚಿತ್ರಕಲಾ ಪರಿಷತ್ತಿನ ಅಂಚೆ ಕಲಾ ಕೋರ್ಸಿನ ಮೂಲಕ. ನೀನು ಭಾರತದಲ್ಲಿ ನವ್ಯ ಕಲೆಯ ಹರಿಕಾರರಲ್ಲಿ ಒಬ್ಬನಾದ ಹಿರಿಯ ಕಲಾವಿದ ಅಂತ. ಆಗಲೇ ನಿನ್ನನ್ನು "ಭಾರತದ ಪಿಕಾಸೋ" ಎಂದು ಕರೆಯುತ್ತಿದ್ದರು. ಪತ್ರಿಕೆಗಳಲ್ಲಿ, ಮ್ಯೂಸಿಯಂಗಳಲ್ಲಿ – ನಿನ್ನ ಕಥೆ ಕೇಳುತ್ತಾ, ಕಲಾಕೃತಿಗಳ ಫೋಟೋ ನೋಡುತ್ತಾ – ಇನ್ನೂ ಹೆಚ್ಚಿನ ಪರಿಚಯ ಆಯಿತು. ಮಹಾರಾಷ್ಟ್ರದ ಪ್ರಸಿದ್ಧ ತೀರ್ಥಕ್ಷೇತ್ರಗಳಲ್ಲಿ ಒಂದಾದ ಫಂಡರಪುರದಲ್ಲಿ ಬಡ ಮುಸ್ಲಿಂ ಕುಟುಂಬವೊಂದರಲ್ಲಿ ಹುಟ್ಟಿ, ಬಾಲ್ಯದಲ್ಲೇ ತಾಯಿಯನ್ನು ಕಳೆದುಕೊಂಡು, ಚಿತ್ರಕಲೆಯ ಕೌಶಲ್ಯ ಬಹಳ ಬೇಗನೇ ತೋರಿದರೂ, ಅದಕ್ಕೆ ಭಾರೀ ಅವಕಾಶ ಸಿಗಲಿಲ್ಲ. ಮುಂಬಯಿಗೆ ಬಂದು ಫುಟ್ ಪಾತಿನ ಮೇಲೂ ಕೆಲವು ದಿನ ಇದ್ದು, ಹೇಗೋ ಕಷ್ಟ ಪಟ್ಟು ಜೆಜೆ ಸ್ಕೂಲಿನಲ್ಲಿ ಕಲಾ ಡಿಪ್ಲೊಮಾ ಪಡೆದೆ. ಕಲೆ ಕಲಿಯುವಾಗಲೂ, ಆ ಮೇಲೂ ಜೀವನೋಪಾಯಕ್ಕೆ (ಪ್ರಸಿದ್ಧ ಕಲಾವಿದ ಅನ್ನಿಸಿಕೊಳ್ಳುವ ಮೊದಲು) ದೊಡ್ಡ ಫಿಲಂ ಬ್ಯಾನರುಗಳನ್ನು ಸ್ಥಳದಲ್ಲೇ ಬರೆಯುತ್ತಿದ್ದಿಯಂತೆ. ಭಾರತದಲ್ಲಿ ಏಕವ್ಯಕ್ತಿ ಕಲಾ ಪ್ರದರ್ಶನ ಮಾಡಿದ ಮೊದಲಿಗರಲ್ಲಿ ನೀನು ಒಬ್ಬನಂತೆ – ಅಂತೆಲ್ಲಾ ನಿನ್ನ ಕಥೆ ಕೇಳಿದ ಮೇಲಂತೂ ನನಗೆ ನಿನ್ನ ಮೇಲಿನ ಗೌರವ ಇಮ್ಮಡಿ ಆಯ್ತು.

ನೀನು ಫ್ರಾನ್ಸಿಸ್ ಡಿ ಸೋಜಾ ಮುಂತಾದವರ ಜತೆ 1950 ರ ದಶಕದಲ್ಲೇ ಮುಂಬಯಿಯಲ್ಲಿ ಪ್ರಗತಿಪರ ಚಿತ್ರ ಕಲಾವಿದರ ಕೂಟ ರಚಿಸುವುದರಲ್ಲಿ ಮುಖ್ಯ ಪಾತ್ರ ವಹಿಸಿದ್ದಿ. ನಿನಗೆ ರಾಜಕೀಯವಾಗಿ ಎಡ ಒಲವು ಇತ್ತು – ಎಂದು ಪ್ರಗತಿಪರ ಚಳುವಳಿಯ ಪ್ರಭಾವಕ್ಕೆ ಒಳಗಾಗಿದ್ದ ನನಗೆ ತಿಳಿದಾಗ ಹೆಮ್ಮೆ ಸಹ ಆಯಿತು. ನಿನ್ನನ್ನು ಬೆಂಗಳೂರಿನ (70–80 ರ ದಶಕದಲ್ಲಿ ಇರಬೇಕು) ಕಲಾಮೇಳವೊಂದರಲ್ಲಿ ಪ್ರತ್ಯಕ್ಷ "ಆಕ್ಶನ್" ನಲ್ಲಿ ನೋಡುವ ಅವಕಾಶ ಸಿಕ್ಕಿತು. ಆಗಲೇ "ತಾತ"ನಾಗಿದ್ದ ನಿನ್ನ ಅಗಾಧ ಚೈತನ್ಯ, ಬಣ್ಣಗಳ ಹರಿವು, ಕುಂಚದ ಓಟ, ಚಿತ್ರ ರಚನೆಯ ಅದ್ಭುತ ವೇಗ, ಕಲಾಕೃತಿ ಮುಗಿಯುವವರೆಗೆ ನಿನ್ನ ಏಕಾಗ್ರತೆ – ತುಂಬಾ ಮೆಚ್ಚಿಗೆ ಆಯಿತು. ಅದೇ ಸಮಯದಲ್ಲಿ ಲೋಹಿಯಾರ 'ಜಾತಿ ಪದ್ಧತಿ"ಯ ಇಂಗ್ಲಿಷ್ ಪುಸ್ತಕದ ಮುಖ ಪುಟದಲ್ಲಿ ನಿನ್ನ ಸರಳ ಶಕ್ತಿಯುತ ಕುಂಚದೋಟದ ಕಲೆ ನೋಡಿದೆ. ಬೆಂಗಳೂರಿಗೂ "ಹುಸೇನ್ ಸಂಕಲನ" ಮ್ಯೂಸಿಯಂ ಬಂದಾಗ ನನಗೆ ನಿನ್ನ ವಿರಾಟ್ ದರ್ಶನ ಆಯಿತು.

ಆ ಮೇಲೂ ಆಗೊಮ್ಮೆ ಈಗೊಮ್ಮೆ ಕಲಾಪ್ರದರ್ಶನಗಳಲ್ಲಿ ನಿನ್ನ ದರ್ಶನ ಆಗುತ್ತಲೇ ಇತ್ತು. ನೀನಂತೂ ಕುದುರೆಯ ವೇಗದಲ್ಲಿ ಸಾವಿರಾರು ಚಿತ್ರಗಳನ್ನು ಮಾಡುತ್ತಲೇ ಇದ್ದೆ. ನಿನ್ನ ಸ್ಕೋರು 60 ಸಾವಿರ ದಾಟಿತ್ತಂತೆ. ಅದೂ ಹೆಚ್ಚಿನವು ದೊಡ್ಡ ಸೈಜಿನ ಚಿತ್ರಗಳು. ಅವಲ್ಲದೆ ಹಲವಾರು ದೊಡ್ಡ ಭಿತ್ತಿ ಚಿತ್ರಗಳು, ಗ್ರಾಫಿಕ್ಸ್, ಪ್ರಿಂಟ್ಸ್, ಫೋಟೋಗಳು, ಫಿಲಂಗಳೂ, ಆದು ಮುಟ್ಟದ ಸೊಪ್ಪಿಲ್ಲ. ನೀನು ಚಿತ್ರ ಮಾಡದ ವಿಷಯ ಇಲ್ಲ ಅಂತಾರೆ. ಅದೂ ಹಲವು ವಿಷಯಗಳ ಮೇಲೇ ಧಾರಾವಾಹಿ ಚಿತ್ರಗಳು. ಮಾಧುರಿ ದೀಕ್ಷಿತ್



ಹುಸೇನರ ಪಾರ್ವತಿ

ಮತ್ತು ಕುದುರೆಗಳ ಧಾರಾವಾಹಿ ಮಾತ್ರ ಜನಕ್ಕೆ ಗೊತ್ತಿರುವುದು. ಅವುಗಳನ್ನು ಮಾತ್ರ ಹೆಚ್ಚಾಗಿ ಜನಕ್ಕೆ ಪರಿಚಯ ಮಾಡಿಸಾಗಿರುವುದು. ಬ್ರಿಟಿಷ್ ರಾಜ್; ಕಲ್ಕತ್ತಾ, ಬನಾರಸ್, ರೋಂ, ಬೀಜಿಂಗ್ ಮುಂತಾದ ನಗರಗಳು; ರಾಮಾಯಣ ಮತ್ತು ಮಹಾಭಾರತ; ಜಗತ್ತಿನ ಒಂಬತ್ತು ಧರ್ಮಗಳು; ಮದರ್ ತೆರೆಸಾ, ಗಾಂಧಿ, – ಅಬ್ಬಬ್ಬಾ ಎಂತಹ ವೈವಿಧ್ಯತೆ. ಭಾರತದ ವರ್ಣಮಯ ಜನತೆಯ ವರ್ಣಮಯ ಬದುಕನ್ನು ಬಹುಮುಖಿ ಸಂಸ್ಕೃತಿಯನ್ನು ಕಲಾಕೃತಿಗಳಲ್ಲಿ ಬಿಂಬಿಸಿದೆ.

ನೀನು ಇತರ ಕಲಾವಿದರಂತೆ ಸ್ಟುಡಿಯೋ ಕಟ್ಟಿಕೊಂಡು ಅಲ್ಲೇ ಕೂಪಮಂಡೂಕ ಆಗಲಿಲ್ಲ. ಜನರಿಗೆ ಸಮಾಜದ ಆಗು ಹೋಗುಗಳಿಗೆ ನಿತ್ಯ ಸ್ಪಂದಿಸಿದೆ. ಹಲವು ಬಾರಿ ಪ್ರತಿಭಟಿಸಿದೆ. ಜನಮ್ ತಂಡದ ಜನತೆಯ ಕಲಾವಿದ ಸಪ್ಧರ್ ಹಷ್ಮಿ ಕೊಲೆ ಆದಾಗ, ಅದೇ ಸ್ಥಳಕ್ಕೆ ಹೋಗಿ ಕಲಾಕೃತಿಯೊಂದನ್ನು ರಚಿಸಿದೆಯಂತೆ. ಆಗ ನಿನ್ನ ಬಗ್ಗೆ ಹೆಮ್ಮೆ ಆಯಿತು. ಆದರೆ ಅದರ ಮೊದಲೊಮ್ಮೆ ತುರ್ತು ಪರಿಸ್ಥಿತಿಯಲ್ಲಿ ಇಂದಿರಾ 'ದುರ್ಗೆ' ಅಂತ ಚಿತ್ರಿಸಿ ಹೊಗಳಿದಾಗ ನೀನೂ 'ಸರ್ಕಾರಿ ಕಲಾವಿದ' ಆದಿಯಾ ಅಂತ ಬೇಸರವೂ ಆಗಿತ್ತು. ರಾಮಾಯಣ, ಮಹಾಭಾರತಗಳ, ಭಾರತಿಯ ಸಂಸ್ಕೃತಿಯ ಹಲವು ಅಂಶಗಳನ್ನು ಚಿತ್ರಿಸಿದರೂ, ಅದರ ಟೀಕಾತ್ಮಕ ಜನಪರ ನೋಟವನ್ನೇನೂ ಕೊಡಲಿಲ್ಲ.

ಬರಿಗಾಲಿನಲ್ಲಿ ಓಡಾಡುವ, ಆದರೆ ಪಂಚತಾರಾ ಹೊಟೇಲುಗಳಲ್ಲಿ, ಸ್ಪೋರ್ಟ್ಸ್ ಕಾರುಗಳಲ್ಲಿ ಮೆರೆಯುವ, ಕೋಟ್ಯಾಧೀಶ ಆದರೂ ಸೊನ್ನೆ ಬ್ಯಾಂಕು ಬ್ಯಾಲೆನ್ಸ್ ಇರುವ, ಪ್ರದರ್ಶನ ಪ್ರಿಯ, ಪ್ರಚಾರ ಪ್ರಿಯ, ಹಾಲಿ ಬಾಲಿವುಡ್ ತಾರೆಯರನ್ನು ಕಂಡರೆ ಹದಿ ಹರೆಯದವನು ಆಗುವ, ಅವರ ಹಾಗೆ ಆಡುವ – ನಿನ್ನ ಎಲ್ಲರೂ ಗೇಲಿ ಮಾಡಿದರು. (ಆದರೆ ಅದರ ಬಗ್ಗೆ ನನ್ನದೇನೂ ತಕರಾರಿಲ್ಲ. ನಿನ್ನಂತಹ ಅದ್ಭುತ ಕಲಾವಿದನ "ಲೈಸೆನ್ಸ್" ಇವೆಲ್ಲಾ ಅಂತ ಮನ್ನಿಸಿದೆ.) ಕೆಲವಾದರೂ ತಿಕ್ಕಲುತನ ಇಲ್ಲದಿದ್ದರೆ ಕಲಾವಿದ ಹೇಗಾದಾನು? (ಇದಕ್ಕಾಗಿ ನೀನು ಕೃತಜ್ಞನಾಗಿರಬೇಕು. ಗೊತ್ತಾಯ್ತಾ?) ಆದರೆ ನಿನ್ನ ಕಲಾಕೃತಿಗಳು ದೇಶ ವಿದೇಶಗಳಲ್ಲಿ ಕೋಟ್ಯಾಂತರ ರೂಪಾಯಿಗಳಿಗೆ, ಮಿಲಿಯಾಂತರ ಡಾಲರುಗಳಿಗೆ ಹರಾಜಾದಾಗ, ಬೆಲೆ ಏರುತ್ತಾ ಹೋಗುವ ಶೇರುಗಳಂತೆ ಶ್ರೀಮಂತರು ನಿನ್ನ ಕಲಾಕೃತಿಗಳನ್ನು ಬಂಡವಾಳ ಹೂಡಿಕೆಯ ಸರಕು ಮಾಡಿದಾಗ, ಅದು ಇನ್ನೂ ಹಲವು ಕಲಾವಿದರ ಕಲಾಕೃತಿಗಳಿಗೆ ಹಬ್ಬಿ ಭಾರತದಲ್ಲೂ ಒಂದು ಟ್ರೆಂಡ್ ಆದಾಗ – ನೀನು ಕಲೆಯ ವ್ಯಾಪಾರೀಕರಣದ ಹರಿಕಾರನಾದಿಯಾ ಅಂತ ಸ್ವಲ್ಪ ಕಸಿವಿಸಿ ಆಯಿತು.

"ಈಗ ಯಾಕೆ ಪತ್ರ ಬರಿತಿದ್ದಿಯಾ ? ನನ್ನ 1970 ರ 'ರಾಮಾಯಣ–ಮಹಾಭಾರತ' ಧಾರಾವಾಹಿಯ ಕೆಲವು ಕೃತಿಗಳ ಮೇಲೆ 'ಹಿಂದೂ ದೇವರನ್ನು ನಗ್ನವಾಗಿ ಅಸಹ್ಯವಾಗಿ ಚಿತ್ರಿಸಿ ಹಿಂದುಗಳ ಮನ ನೋಯಿಸಿದ' ಆಪಾದನೆಯನ್ನು 1990 ರ ದಶಕದಲ್ಲಿ ಹೊರಿಸಿದಾಗ, ನನ್ನ ಕಲಾಕೃತಿಗಳನ್ನು ಧ್ವಂಸ ಮಾಡಿದಾಗ, ನನ್ನ ಮ್ಯೂಸಿಯಂಗಳನ್ನು ಮುಚ್ಚಬೇಕಾಗಿ ಬಂದಾಗ, ನನ್ನ ಮೇಲೆ ದೇಶದ ತುಂಬಾ ಸುಳ್ಳು ಕೇಸುಗಳನ್ನು ಜಡಿದಾಗ, ನನ್ನನ್ನು ಹಿಂದುತ್ವವಾದಿಗಳು ದೇಶದೊಳಗೆಲ್ಲಾ ಅಟ್ಟಾಡಿಸಿಕೊಂಡು ಹೋಗುತ್ತಿದ್ದಾಗ, ಮುಸ್ಲಿಂ ಸಂಘಟನೆಗಳೂ ನನ್ನ ಫಿಲಂ ಹಿಂಪಡೆಯಲು ಒತ್ತಡ ಹೇರಿದಾಗ, ಸರ್ಕಾರ ಕೋರ್ಟುಗಳು ಕೊನೆಗೆ ಕಲಾವಿದರು–ಕಲಾವಿದರ ಸಂಘಗಳೂ ('ಸಹಮತ'ದಂತಹ ಕೆಲವೇ ಅಪವಾದಗಳನ್ನು ಬಿಟ್ಟರೆ) ಯಾರೂ ನನ್ನ ನೆರವಿಗೆ ಬರದಿದ್ದಾಗ, ನಾನು ಕ್ಷಮೆ ಕೇಳಿದರೂ ನನ್ನನ್ನು ದೇಶದ ಎಲ್ಲೂ

ಪುಟ 14 ನೋಡಿ

ಸಪ್ಧರ್ ಹಷ್ಮಿ ಹತ್ಯೆಯಾದಾಗ ಹುಸೇನ್ ರಚಿಸಿದ ಚಿತ್ರ



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH